15 March 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

**ಭಾವನಾಂತರಂಗ**

ಬಿತ್ತಿದ ಬೀಜ ಗಿಡವಾಗಿ ಫಲ ಕೊಡುವವರೆಗೂ ಕಾಯುವಂತೆ, ಜೀವನದಲ್ಲಿ ಒಳ್ಳೆಯ ದಿನಗಳಿಗೆ ತಾಳ್ಮೆಯಿಂದ ಕಾಯಬೇಕು!

-ಸ್ನೇಹಾ ಆನಂದ್

info.varthaman@gmail.com

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ



ತಂಬಾಕು ಬೆಳೆಗೆ ಸಿಎಂ ಬೆಂಬಲ ಬೆಲೆ ಕೊಡಿಸಲಿ: ಸಾ.ರಾ.ಮಹೇಶ್ ಪುಟ ಸಂ. 2



ಮೈಸೂರಲ್ಲಿ ಒಡನಾಡಿಗಳ ಜಾಗೃತಿ ಯೋಗ ಪ್ರದರ್ಶನ ಪುಟ ಸಂ. 3



ಹ್ಯಾಂಡ್ ಎಂಬ್ರಾಯ್ಡರಿ ಉಚಿತ ತರಬೇತಿ ಪ್ರಮಾಣಪತ್ರ ವಿತರಣೆ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 122 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## 23ರಿಂದ ವೈರಮುಡಿ ಬ್ರಹ್ಮೋತ್ಸವ

### ಮಾ.28ರಂದು ಮೇಲುಕೋಟೆ ಚೆಲುವನಾರಾಯಣನಿಗೆ ಕಿರೀಟ ಧಾರಣೆ

### ಸಿದ್ಧತೆಗೆ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಸೂಚನೆ

**ಮಂಡ್ಯ:** ಐತಿಹಾಸಿಕ ಮೇಲುಕೋಟೆ ಚೆಲುವನಾರಾಯಣಸ್ವಾಮಿ ವೈರಮುಡಿ ಬ್ರಹ್ಮೋತ್ಸವ ಮಾ.23ರಿಂದ ಏ.4ರವರೆಗೆ ನಡೆಯಲಿದೆ. ಈ ಉತ್ಸವದ ಪ್ರಮುಖ ಆಕರ್ಷಣೆಯಾದ ವೈರ ಮುಡಿ ಕಿರೀಟ ಧಾರಣೆಯು ಮಾ.28ರಂದು ಜರುಗಲಿದೆ.

ವೈರಮುಡಿ ಉತ್ಸವದಲ್ಲಿ ಭಕ್ತಾದಿಗಳಿಗೆ ಯಾವುದೇ ತೊಂದರೆ ಆಗದಂತೆ ಅಗತ್ಯ ಕ್ರಮವಹಿಸಿ. ಉತ್ಸವದಲ್ಲಿ ಯಾವುದೇ ಲೋಪ ದೋಷಗಳಾಗದಂತೆ ಭಕ್ತರಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಮತ್ತು ಬಿಗಿಭದ್ರತೆ ಒದಗಿಸಲು ಕ್ರಮಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸೂಚಿಸಿದರು.





ಜಿಲ್ಲೆಯ ಅಧಿಕಾರಿಗಳೊಂದಿಗೆ ಆಯೋಜಿಸಿದ್ದ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಸಚಿವ ಎನ್. ಚಲುವರಾಯಸ್ವಾಮಿ ಅವರು, ವೈರಮುಡಿ ಉತ್ಸವದಲ್ಲಿ ಲಕ್ಷಾಂತರ ಭಕ್ತರು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯ ಕಲ್ಪಿಸುವುದರ ಜೊತೆಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳು ಈಗಿನಿಂದಲೇ ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು.

ವೈರಮುಡಿ ಬ್ರಹ್ಮೋತ್ಸವದಲ್ಲಿ ಕಿರೀಟಧಾರಣಾ ಮೆರವಣಿಗೆ ಸಂದರ್ಭದಲ್ಲಿ ಶಾಂತಿಯುತವಾಗಿ ಹಾಗೂ ಸಮಾಧಾನವಾಗಿ ಜನರು ದೇವರು ನೋಡುವಂತೆ ಅಗತ್ಯ ವ್ಯವಸ್ಥೆಯನ್ನು ಪೊಲೀಸ್ ಇಲಾಖೆ ಮಾಡಬೇಕು. ಈ ಸಂಬಂಧ ದೇವಸ್ಥಾನದ ಅರ್ಚಕರೊಂದಿಗೆ ಸಭೆ ನಡೆಸಿ ಶಾಂತಿಯುತವಾಗಿ ನಡೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳಿ ಎಂದು ಸಚಿವರು ತಿಳಿಸಿದರು.

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣಯ್ಯ ಮಾತನಾಡಿ, ಭಕ್ತರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ. ವೈರಮುಡಿ ಉತ್ಸವದಲ್ಲಿ ಪುಟ 2ಕ್ಕೆ

## ಅಡುಗೆ ಎಣ್ಣೆಯೂ ದುಬಾರಿ

**ಬೆಂಗಳೂರು:** ಇರಾನ್–ಇಸ್ರೇಲ್ ನಡುವಿನ ಸಂಘರ್ಷದಿಂದ ದೇಶದಲ್ಲಿ ಗ್ಯಾಸ್ ಸಮಸ್ಯೆ ಸೃಷ್ಟಿ ಮಾಡಿದೆ. ಗೃಹ ಬಳಕೆ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಯಾಗಿದೆ. ಅಲ್ಲದೆ, ಅಡುಗೆ ಎಣ್ಣೆ ಬೆಲೆಯೂ ಏರಿಕೆ ಆಗಿದೆ.

ಗೃಹ ಬಳಕೆಯ 14.2 ಕೆಜಿ ಗ್ಯಾಸ್ ಸಿಲಿಂಡರ್ ಬೆಲೆಯಲ್ಲಿ 60 ರೂಪಾಯಿ ಏರಿಕೆ ಮಾಡುವ ಮೂಲಕ ಸಾಮಾನ್ಯ ವರ್ಗದ ಮೇಲೆ ಭಾರ ಹೇರಲಾಗಿತ್ತು. ಈಗ ಅಡುಗೆ ಎಣ್ಣೆ ಬೆಲೆ ಕೂಡ ಏರಿಕೆ ಆಗಿದೆ. ಕಳೆದ ಒಂದು ವಾರದಲ್ಲಿ ಲೀಟರ್‌ಗೆ 8ರಿಂದ 10 ರೂ. ಏರಿಕೆಯಾಗಿದೆ.



**ದೀಪದ ಎಣ್ಣೆಯೂ ದುಬಾರಿ**

- ಆನಂದಂ 125ರಿಂದ 135 ರೂ.
- ಮುರುಗನ್ 125 ರಿಂದ 135 ರೂ.
- ಆಲಯಂ 122 ರಿಂದ 132 ರೂ.

**ಎಣ್ಣೆ ಬೆಲೆ ಎಷ್ಟು ಏರಿಕೆ?**

- ಸನ್ ಫ್ಲವರ್ 163 ರಿಂದ 173 ರೂ.
- ಗೋಲ್ಡ್ ವಿನ್ನರ್ 161 ರಿಂದ 172 ರೂ.
- ಫಾರ್ಚೂನ್ ಆಯಿಲ್ 152 ರಿಂದ 170 ರೂ.
- ಫ್ರೀಡಂ ಆಯಿಲ್ 160 ರಿಂದ 170 ರೂ.
- ರುಚಿ ಗೋಲ್ಡ್ 120 ರಿಂದ 150 ರೂ.

## ಷೇರು ಮಾರುಕಟ್ಟೆಯಲ್ಲಿ ಭೀಕರ ಕುಸಿತ

### ವಾರದಲ್ಲೆ 19 ಲಕ್ಷ ಕೋಟಿ ಉಡೀಸ್

ಬೆಂಗಳೂರು: ಭಾರತೀಯ ಷೇರು ಮಾರುಕಟ್ಟೆ ಸತತ ಮೂರನೇ ದಿನವೂ ತೀವ್ರ ಕುಸಿತಕ್ಕೆ ಸಾಕ್ಷಿಯಾಗಿದೆ.

ಪಶ್ಚಿಮ ಏಷ್ಯಾದಲ್ಲಿ ಉಲ್ಬಣಿಸಿರುವ ಯುದ್ಧ ಭೀತಿ ಮತ್ತು ಜಾಗತಿಕ ಮಾರುಕಟ್ಟೆಯ ಅಸ್ಥಿರತೆಯಿಂದಾಗಿ ಸೆನ್ಸೆಕ್ಸ್ ಮತ್ತು ನಿಫ್ಟಿ ಪಾತಾಳಕ್ಕೆ ಇಳಿದಿವೆ.



ಈ ವಾರ ಷೇರುಪೇಟೆಯ ಪಾಲಿಗೆ ಜೂನ್ 2022ರ ನಂತರದ ಅತ್ಯಂತ ಕರಾಳ ವಾರವಾಗಿದ್ದು, ಹೂಡಿಕೆದಾರರು ಅಕ್ಷರಶಃ ಆಘಾತಕ್ಕೊಳಗಾಗಿದ್ದಾರೆ.

ಈ ಒಂದೇ ವಾರದಲ್ಲಿ ಹೂಡಿಕೆದಾರರ ಬರೋಬ್ಬರಿ 19 ಲಕ್ಷ ಕೋಟಿ ರೂಪಾಯಿ ಸಂಪತ್ತು ಕರಗಿ ಹೋಗಿದೆ. ಕಳೆದ 14 ದಿನಗಳ ಹಿಂದೆ ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಆರಂಭವಾದ ದಿನದಿಂದ ಪುಟ 2ಕ್ಕೆ

## ಸ್ವಕ್ಷೇತ್ರ ವರಕೂಡು ಜಾತ್ರೆಗೆ 250 ಸಿಲಿಂಡರ್ ಕೊಡಿಸಿದ ಸಿಎಂ ಸಿದ್ದು

**ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ವಕ್ಷೇತ್ರ ವರುಣದ ವರಕೂಡುನಲ್ಲಿ ಜಾತ್ರೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಪ್ರಭಾವ ಬಳಸಿ ಒಂದು ಲೋಡ್ ಸಿಲಿಂಡರ್ ಕೊಡಿಸಿದ್ದಾರೆ.




ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ಕ್ಷೇತ್ರದ ವರಕೊಡುನಲ್ಲಿ ದೊಡ್ಡ ಜಾತ್ರೆ ನಡೆಯಿತು. ಜಾತ್ರೆಗೆ ಬಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಇತ್ತು. ಪ್ರಸಾದ ತಯಾರಿಕೆಗೆ ಸಿದ್ದರಾಮಯ್ಯ ಅವರೇ ತಮ್ಮ ಪ್ರಭಾವ ಬಳಸಿ ಒಂದು ಲೋಡ್ ಸಿಲಿಂಡರ್ ಕೊಡಿಸಿದ್ದಾರೆ. ಸುಮಾರು 250 ಸಿಲಿಂಡರ್ ಅನ್ನು ಸಿಎಂ ಸಿದ್ದರಾಮಯ್ಯ ತಮ್ಮ ಕ್ಷೇತ್ರದ ಜಾತ್ರೆಗೆ ಕೊಡಿಸಿದ್ದಾರೆ ಎನ್ನಲಾಗಿದೆ. ಮೈಸೂರು ಹೋಟೆಲ್ ಸಂಘದ ಅಧ್ಯಕ್ಷ ನಾರಾಯಣಗೌಡ ಈ ವಿಚಾರ ಬಹಿರಂಗ ಪಡಿಸಿದ್ದಾರೆ. ಸಿಎಂ ಮನಸ್ಸು ಮಾಡಿದರೆ ಏನೂ ಬೇಕಾದರು ಆಗುತ್ತದೆ. ಜಾತ್ರೆಗೂ ಎರಡು ದಿನ ಮೊದಲೇ ಡಿಸಿ ಜೊತೆ ಪುಟ 2ಕ್ಕೆ

## ಸಿಲಿಂಡರ್ ಅಕ್ರಮ ಮಾರಾಟ: ಕಠಿಣ ಕ್ರಮಕ್ಕೆ ಸೂಚನೆ–ಪರಂ

**ತುಮಕೂರು:** ಎಲ್‌ಪಿಜಿ ಸಿಲಿಂಡರ್‌ಗಳ ಸಂಗ್ರಹಣೆ ಮತ್ತು ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲು ಪೊಲೀಸರಿಗೆ ಸೂಚನೆ ನೀಡಲಾಗಿದೆ ಎಂದು ಗೃಹ ಸಚಿವ ಡಾ.ಜಿ ಪರಮೇಶ್ವರ್ ತಿಳಿಸಿದರು.

ನಗರದಲ್ಲಿ ಪತ್ರಕರ್ತರ ಜೊತೆ ಶನಿವಾರ ಮಾತನಾಡಿದ ಅವರು, ಯುದ್ಧದಿಂದ ಅನಿಲ ಪೂರೈಕೆಯಲ್ಲಿ ಭಾರೀ ವ್ಯತ್ಯಯ ಉಂಟಾಗಿದೆ. ಜನ ಎಲ್‌ಪಿಜಿ ಸಿಲಿಂಡರ್ ಗೆ ಪರದಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಕಾಳಸಂತೆಯಲ್ಲಿ ಮಾರಾಟ ಮಾಡಲು ಪ್ರಯತ್ನಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.



ಅಡುಗೆ ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ಪ್ರಸ್ತುತ ಯಾವುದೇ ಸಮಸ್ಯೆಗಳಿಲ್ಲ. ವಾಣಿಜ್ಯ ಅನಿಲ ಸಿಲಿಂಡರ್‌ಗಳಿಗೆ ಸಂಬಂಧಿಸಿದಂತೆ ಪೂರೈಕೆ ಸಮಸ್ಯೆಗಳಿವೆ. ಹೋಟೆಲ್‌ಗಳು ಒಂದೆರಡು ಪುಟ 2ಕ್ಕೆ

### 27ರಂದು ಸಂಪುಟ ಸಭೆ: ಒಳಮೀಸಲಾತಿ ನಿರ್ಣಯ

**ತುಮಕೂರು:** ನೇಮಕಾತಿಯಲ್ಲಿ ಒಳಮೀಸಲಾತಿ ಜಾರಿ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಚ್ 27ರಂದು ವಿಶೇಷ ಸಂಪುಟ ಸಭೆ ಕರೆದಿದ್ದಾರೆ. ಸಭೆಯಲ್ಲಿ ಸಮಸ್ಯೆ ಬಗೆಹರಿಯುತ್ತದೆ ಎಂದು ನಿರೀಕ್ಷಿಸುತ್ತೇವೆ ಎಂದು ಸಚಿವ ಪರಮೇಶ್ವರ್ ಹೇಳಿದರು.

ಸಂಪುಟ ನಿರ್ಧಾರದ ನಂತರ, ಸರ್ಕಾರ ನೇಮಕಾತಿ ಆದೇಶ ಹೊರಡಿಸುತ್ತದೆ. ಅದರ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗುತ್ತದೆ. 56,000ಕ್ಕೂ ಹೆಚ್ಚು ಖಾಲಿ ಹುದ್ದೆಗಳಿಗೆ ನೇಮಕಾತಿ ನಡೆಸುವುದಾಗಿ ಸರ್ಕಾರ ಹೇಳಿದೆ. ಗೃಹ ಇಲಾಖೆಯಲ್ಲಿ 8,000 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ. ನಾವು ತಕ್ಷಣ ಒಳಮೀಸಲಾತಿ ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತೇವೆ ಎಂದು ಅವರು ತಿಳಿಸಿದರು.

## ಹಾರ್ಮುಜ್ ಜಲಸಂಧಿ ದಾಟಿದ ಹಡಗು


**ನವದೆಹಲಿ:** ಭಾರತೀಯ ನೌಕಾ ಪಡೆಯ ಬೆಂಗಾವಲಿನೊಂದಿಗೆ 40,000 ಮೆಟ್ರಿಕ್ ಟನ್‌ಗಳಿಗೂ ಹೆಚ್ಚು ದ್ರವೀಕೃತ ಪೆಟ್ರೋಲಿಯಂ ಅನಿಲವನ್ನು ಹೊತ್ತ ಭಾರತೀಯ ಶಿವಾಲಿಕ್ ಹಡಗು ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿದೆ.

**ಭಾರತಕ್ಕೆ ಇರಾನ್ ಗುಡ್ ನ್ಯೂಸ್**

ಇರಾನ್ ಬಂದ್ ಮಾಡಿರುವ ಹಾರ್ಮುಜ್ ಜಲಸಂಧಿಯಲ್ಲಿ ನೌಕಾಪಡೆಯ ಬೆಂಗಾವಲಿನಲ್ಲಿ ಶಿವಾಲಿಕ್ ಸಂಚರಿಸಿ ನಂತರ ಮುಕ್ತ ಸಮುದ್ರಕ್ಕೆ ಯಶಸ್ವಿ ಯಾಗಿ ಸಾಗಿದೆ. ಈ ಹಡಗು ಎರಡು ದಿನಗಳ ಒಳಗಡೆ ಮುಂಬೈ ಅಥವಾ ಕಾಂಡ್ಲಾ ಬಂದರಿನಲ್ಲಿ ಡಾಕಿಂಗ್ ಆಗುವ ಸಾಧ್ಯತೆಯಿದೆ.

ಮತ್ತೊಂದು ಎಲ್‌ಪಿಜಿ ಹೊತ್ತ ಹಡಗು ನಂದಾದೇವಿಯೂ ನೌಕಾಪಡೆ ಬೆಂಗಾವಲಿನಲ್ಲಿ ಇಂದು ಬೆಳಗ್ಗೆ ಜಲಸಂಧಿಯಯನ್ನು ದಾಟಿದೆ. ಎರಡು ದಿನದ ಒಳಗಡೆ ಭಾರತದ ಬಂದರು ತಲುಪುವ ಸಾಧ್ಯತೆಯಿದೆ.

ಭಾರತೀಯ ಧ್ವಜ ಹೊಂದಿರುವ ಹಡಗುಗಳ ಸಂಚಾರಕ್ಕೆ ಹಾರ್ಮುಜ್ ಜಲಸಂಧಿಯನ್ನು ತೆರೆಯಬೇಕು ಎಂದು ಭಾರತ ಇರಾನಿಗೆ ಮನವಿ ಮಾಡಿತ್ತು.



ಈ ಮನವಿಗೆ ಇರಾನ್ ಸ್ಪಂದಿಸಿದ್ದು ಭಾರತದ ಹಡುಗಳ ಸಂಚಾರಕ್ಕೆ ಅನುಮತಿ ನೀಡಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹಡಗುಗಳು ಈ ದಾರಿಯ ಮೂಲಕ ಭಾರತಕ್ಕೆ ಬರಲಿದೆ ಎಂದು ಮೂಲಗಳು ತಿಳಿಸಿವೆ.

ಹಡಗುಗಳ ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಭಾರತೀಯ ಹಡಗುಗಳು ಹೆಚ್ಚಿನ ಅಪಾಯದ ವಲಯದಿಂದ ಸುರಕ್ಷಿತವಾಗಿ ನಿರ್ಗಮಿಸುವವರೆಗೆ ಈ ಪ್ರದೇಶದಲ್ಲಿ ಸಂಚರಿಸಲು ನೌಕಾ ಬೆಂಗಾವಲು ಮುಂದುವರಿಯಲಿದೆ. ಹಾರ್ಮುಜ್ ಜಲಸಂಧಿಯು ವಿಶ್ವದ ಪ್ರಮುಖ ಕಡಲ ಚಾಕ್‌ಪಾಯಿಂಟ್‌ಗಳಲ್ಲಿ ಒಂದಾಗಿದೆ. ಇದು ಜಾಗತಿಕ ತೈಲ ಮತ್ತು ಅನಿಲ ಸಾಗಣೆಯ ಸರಿಸುಮಾರು 20 ಪ್ರತಿಶತವನ್ನು ಪುಟ 2ಕ್ಕೆ

## ಸಿದ್ದರಾಮಯ್ಯ ರಾಜಕೀಯ ಬಿಡಿ ಕಾಳಸಂತೆ ತಡೆಯಿರಿ: ಅಶೋಕ್

**ಬೆಂಗಳೂರು:** ರಾಜ್ಯದಲ್ಲಿ ಗ್ಯಾಸ್ ಅಭಾವ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕೀಯ ಮಾಡಬಾರದು ಎಂದು ವಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದರು.

ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜೊತೆ ಮಾತಾನಾಡಿದ ಅವರು, ಸಿಎಂ ಸಿದ್ದರಾಮಯ್ಯ ಯುದ್ಧದ ಸಮಯದಲ್ಲಿ ರಾಜಕೀಯ ಬಿಟ್ಟು ಮಾತಾಡಬೇಕು. ಯುದ್ಧದಿಂದ ಸಮಸ್ಯೆ ಆಗಿದೆ. ಸಚಿವ ಮುನಿಯಪ್ಪ ಸರಿಯಾಗಿ ಮಾತನಾಡಿದ್ದಾರೆ. ಅವರು ಕೇಂದ್ರದಲ್ಲಿ ಮಂತ್ರಿ ಆಗಿದ್ದವರು. ಅವರಿಗೆ ಎಲ್ಲವೂ ಗೊತ್ತಿದೆ. ಸಿದ್ದರಾಮಯ್ಯ ಬೇರೆ ಕಡೆ ಹೋಗಿಲ್ಲ, ಇಲ್ಲಿ ಮಾತ್ರ ಇದ್ದಾರೆ. ಅವರಿಗೆ ಅದಕ್ಕೆ ಗೊತ್ತಾಗುತ್ತಿಲ್ಲ ಎಂದು ಟೀಕಿಸಿದರು.



ಸಿಎಂ ಗ್ಯಾಸ್ ಅಭಾವ ವಿಚಾರದಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಇದನ್ನು ಬಿಟ್ಟು ರಾಜ್ಯ ಸರ್ಕಾರ ಕಾಳಸಂತೆಯಲ್ಲಿ ಮಾರಾಟ ಆಗುತ್ತಿರುವ ಗ್ಯಾಸ್ ತಡೆಯಬೇಕು. ಕೇಂದ್ರ ಸರ್ಕಾರ ಈಗಾ ಪುಟ 2ಕ್ಕೆ

## ಕೆರೆಯಲ್ಲಿ ಈಜಲು ಹೋಗಿ ಬಾಲಕ ಸಾವು

**ಮಂಡ್ಯ:** ಕೆರೆಗೆ ಈಜಲು ಹೋಗಿದ್ದ ಇಬ್ಬರು ವಿದ್ಯಾರ್ಥಿಗಳ ಪೈಕಿ ಒಬ್ಬ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ದುರ್ಘಟನೆ ಜಿಲ್ಲೆಯ ಮಳವಳ್ಳಿ ಪಟ್ಟಣದಲ್ಲಿ ನಡೆದಿದೆ. ದೊಡ್ಡಕೆರೆಗೆ ಈಜಲು ತೆರಳಿದ್ದ ವಿದ್ಯಾರ್ಥಿಗಳಲ್ಲಿ ಕೇಶವ (11) ಮೃತಪಟ್ಟಿದ್ದಾನೆ. ಇನ್ನೊಬ್ಬ ವಿದ್ಯಾರ್ಥಿ ಹೇಮಂತ್ (12)ನ್ನು ಸ್ಥಳೀಯರು ರಕ್ಷಿಸಿದ್ದಾರೆ. ಕೇಶವ ಮತ್ತು ಹೇಮಂತ್ ಇಬ್ಬರೂ ಮಳವಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು. ಪರೀಕ್ಷೆ ಮುಗಿದಿದ್ದರಿಂದ ರಜೆ ಹಿನ್ನೆಲೆಯಲ್ಲಿ ಕೆರೆಗೆ ಈಜಲು ತೆರಳಿದ್ದರು. ಈ ವೇಳೆ ಅವಘಡ ಸಂಭವಿಸಿದೆ. ಮಳವಳ್ಳಿ ಠಾಣೆಯಲ್ಲಿ ದೂರು ದಾಖಲಾಗಿದೆ.

## ಆಪರೇಷನ್ ಭೀತಿ: ಮೈಸೂರಲ್ಲಿ ಒಡಿಶಾ ಶಾಸಕರ ಸಂಚಾರ



**ಮೈಸೂರು:** ರಾಜ್ಯಸಭಾ ಚುನಾವಣೆ ಹಿನ್ನೆಲೆ ಆಪರೇಷನ್ ಕಮಲದ ಭೀತಿಯಿಂದ ಕರ್ನಾಟಕಕ್ಕೆ ಆಗಮಿಸಿ ಬಿಡದಿಯ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿರುವ ಒಡಿಶಾದ ಕಾಂಗ್ರೆಸ್ ಶಾಸಕರು ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಮೈಸೂರಿಗೆ ಆಗಮಿಸಿ, ಚಾಮುಂಡಿಬೆಟ್ಟದ ದರ್ಶನ ಹಾಗೂ ಅರಮನೆಯನ್ನು ವೀಕ್ಷಣೆ ಮಾಡಿದರು.

ಬಿಡದಿಯ ರೆಸಾರ್ಟ್‌ನಿಂದ ಒಡಿಶಾ ಕಾಂಗ್ರೆಸ್ ಶಾಸಕರೆಲ್ಲರೂ ಒಂದೇ ಬಸ್ಸಲ್ಲಿ ಭದ್ರತೆಯೊಂದಿಗೆ ಮೈಸೂರಿಗೆ ಇಂದು ಆಗಮಿಸಿದರು. ಪುಟ 2ಕ್ಕೆ

## ಪರೀಕ್ಷಾ ಅಕ್ರಮ: ಕೆಎಎಸ್ ಸಂದರ್ಶನ ಮುಂದೂಡಿಕೆ

**ಬೆಂಗಳೂರು:** ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಅಕ್ರಮ ಆರೋಪ ಹಿನ್ನೆಲೆಯಲ್ಲಿ ಸಂದರ್ಶನ ದಿನಾಂಕವನ್ನ ಕರ್ನಾಟಕ ಲೋಕಸೇವಾ ಆಯೋಗ ಮುಂದೂಡಿದೆ. ಗೆಜೆಟೆಡ್ ಪ್ರೊಬೇಷನರಿ ಹುದ್ದೆ ನೇಮಕಾತಿ ಸಂಬಂಧ 1:3ರಂತೆ ಸಂದರ್ಶನಕ್ಕೆ ಅರ್ಹತಾ ಪಟ್ಟಿ ಬಿಡುಗಡೆ ಮಾಡಿತ್ತು. ಮಾ.23 ರಿಂದ ಸಂದರ್ಶನಕ್ಕೆ ದಿನಾಂಕ ನಿಗದಿ ಮಾಡಲಾಗಿತ್ತು. ಅಕ್ರಮದ ಆರೋಪ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸಂದರ್ಶನವನ್ನ ಮುಂದೂಡಿಕೆ ಮಾಡಲಾಗಿದೆ. ಮುಂದಿನ ಆದೇಶದವರೆಗೂ ಸಂದರ್ಶನ ಮುಂದೂಡಿಕೆ ಪುಟ 2ಕ್ಕೆ


## ಚಾಮುಂಡೇಶ್ವರಿ ದೇಗುಲದಲ್ಲಿ ಸೌದೆ ಬಳಸಿ ಪ್ರಸಾದ ತಯಾರಿ

**ಮೈಸೂರು:** ನಗರದ ಇತಿಹಾಸ ಪ್ರಸಿದ್ಧ ಚಾಮುಂಡೇಶ್ವರಿ ದೇವಾಲಯದಲ್ಲಿ ಸೌದೆ ಒಲೆಯಿಂದಲೇ ಪ್ರಸಾದ ತಯಾರಿಸಲಾಗುತ್ತಿದೆ. ಗ್ಯಾಸ್ ಪೂರೈಕೆ ಇಲ್ಲದಿದ್ದರೂ ಸಹ ಚಾಮುಂಡಿ ಬೆಟ್ಟಕ್ಕೆ ಬರುವ ಭಕ್ತರಿಗೆ ಪ್ರಸಾದ ನೀಡಲಾಗುತ್ತಿದೆ. ಸದ್ಯಕ್ಕೆ ಭಕ್ತರಿಗೆ ಪ್ರಸಾದ ವ್ಯವಸ್ಥೆ ನೀಡಲಾಗುತ್ತಿದೆ.

ಯುದ್ಧ ಪರಿಸ್ಥಿತಿಯಿಂದ ಭಾರತದಲ್ಲಿ ವಾಣಿಜ್ಯ ಹಾಗೂ ಅಡುಗೆ ಅನಿಲ ಸಿಲಿಂಡರ್ ಕೊರತೆಯ ಆತಂಕ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಗ್ಯಾಸ್ ಸಿಲಿಂಡರ್ ಅಭಾವದಿಂದ ಕರ್ನಾಟಕದ ದೇವಸ್ಥಾನದ ಪ್ರಸಾದಕ್ಕೂ ಬಿಸಿ ತಟ್ಟಿದೆ. ದೇವಸ್ಥಾನಗಳಲ್ಲಿ ಭಕ್ತರಿಗೆ ತಯಾರಿಸುವ ಪ್ರಸಾದಕ್ಕೆ ಗ್ಯಾಸ್ ಸಮಸ್ಯೆ ಎದುರಾಗಿದೆ. ಹೀಗಾಗಿ ಕೆಲ ದೇವಾಲಯಗಳು ಸೌದೆ ಒಲೆ ಮೊರೆ ಹೋಗಿವೆ.

## ಕಾರು ಅಪಘಾತ: ಪುರೋಹಿತ ಸಾವು

**ಕೋಲಾರ:** ಚಾಲಕನ ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಪುರೋಹಿತ ಸಾವನ್ನಪ್ಪಿದ ಘಟನೆ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಬದ್ದಿಪಲ್ಲಿ ಕ್ರಾಸ್ ಸಮೀಪ ನಡೆದಿದೆ. ಗುಡಿಪಲ್ಲಿ ಗ್ರಾಮದ ಲೋಕೇಶ್ (45) ಮೃತ ವ್ಯಕ್ತಿ. ಲೋಕೇಶ್ ಪುರೋಹಿತ ಕಾರ್ಯ ಮುಗಿಸಿ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ.



## ಮಂಡ್ಯ: ಕ್ರೀಡಾಂಗಣ ಕಾಮಗಾರಿಗೆ ಚಾಲನೆ

### 'ಖೇಲೋ ಇಂಡಿಯಾ'ದಿಂದ 14 ಕೋಟಿ ಅನುದಾನ | ಎಚ್‌ಡಿಕೆಯಿಂದ ಭೂಮಿಪೂಜೆ

**ಮಂಡ್ಯ:** ಜಿಲ್ಲೆಗೆ ಕೇಂದ್ರ ಸರ್ಕಾರದ ಖೇಲೋ ಇಂಡಿಯಾ ಯೋಜನೆಯಡಿ ಮಂಜೂರಾಗಿರುವ 14 ಕೋಟಿ ರೂ. ವೆಚ್ಚದ ಬಹುಪಯೋಗಿ ಒಳಾಂಗಣ ಕ್ರೀಡಾಂಗಣ ಕಾಮಗಾರಿಗೆ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಶನಿವಾರ ಭೂಮಿ ಪೂಜೆ ನೆರವೇರಿಸಿದರು.

ಮಂಡ್ಯದ ವಿಸಿ ಫಾರಂನಲ್ಲಿರುವ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನೂತನ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಕುಮಾರಸ್ವಾಮಿ ಮಾತನಾಡಿ, 'ಖೇಲೋ ಇಂಡಿಯಾ! ವೈಬ್ರೆಂಟ್ ಮಂಡ್ಯ' ನಿನಾದಕ್ಕೆ ಪೂರಕವಾಗಿ ಮಂಡ್ಯ ಜಿಲ್ಲೆಯಲ್ಲಿ ಕ್ರೀಡೆಯು ಉಜ್ವಲವಾಗಿ ಬೆಳೆದು ಹೆಚ್ಚು ಪ್ರಮಾಣದಲ್ಲಿ ಚಾಂಪಿಯನ್ ಗಳು ಹೊರಬರಲಿ ಎಂದು ಕರೆ ನೀಡಿದರು.

ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಮೇಲುಕೋಟೆ ವಿಧಾನಸಭೆ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಕೆ.ಆರ್. ಪೇಟೆ ಶಾಸಕ ಮಂಜುನಾಥ್ ಸೇರಿದಂತೆ ವಿವಿಧ ಜನಪ್ರತಿನಿಧಿಗಳು ಹಾಜರಿದ್ದರು.



### ವಿಶೇಷ ಚೇತನರಿಗೆ ವಾಹನ

ಕಾರ್ಯಕ್ರಮದಲ್ಲಿ 388 ಮಂದಿ ವಿಶೇಷ ಚೇತನ ಕ್ರೀಡಾಪಟುಗಳಿಗೆ ಟಿಸಿಎಸ್ ಕಂಪನಿ ಮತ್ತು ಭಾರತೀಯ ಉಕ್ಕು ಪ್ರಾಧಿಕಾರದ ಸಿಎಸ್ ಆರ್ ನಿಧಿಯಲ್ಲಿ ನೀಡಿರುವ ಎಲೆಕ್ಟ್ರಿಕ್ ವಾಹನವನ್ನು ವಿತರಣೆ ಮಾಡಲಾಯಿತು. ತದನಂತರ ಇನ್ಫೋಸಿಸ್ ಕಂಪನಿ ನೀಡಿರುವ 500 ಕಂಪ್ಯೂಟರ್ ಗಳು, 100 ಲ್ಯಾಪ್ ಟಾಪ್ ಗಳನ್ನು ಸರ್ಕಾರಿ ಶಾಲೆಗಳಿಗೆ ಹಸ್ತಾಂತರ ಮಾಡಲಾಯಿತು. ಪುಟ 2ಕ್ಕೆ

### ಮಂಡ್ಯಕ್ಕೆ ಕ್ರೀಡಾಪಟುಗಳು ಕೀರ್ತಿ ತನ್ನಿ

**ಮಂಡ್ಯ:** ಖೇಲೋ ಇಂಡಿಯಾ ಯೋಜನೆಯು ಭಾರತದ ತಳಮಟ್ಟದಲ್ಲಿ ಕ್ರೀಡಾ ಸಂಸ್ಕೃತಿ ಯನ್ನು ಪುನರುಜ್ಜೀವನಗೊಳಿಸಲು ಮತ್ತು ಭಾರತವನ್ನು ಶ್ರೇಷ್ಠ ಕ್ರೀಡಾ ರಾಷ್ಟ್ರವಾಗಿ ರೂಪಿಸಲು ಕೇಂದ್ರ ಸರ್ಕಾರ ಜಾರಿಗೆ ತಂದ ರಾಷ್ಟ್ರೀಯ ಕಾರ್ಯಕ್ರಮವಾಗಿದೆ.



ಮೊದಲ ಪುಟದಿಂದ

## ಒಡಿಶಾ ಶಾಸಕರ ಸಂಚಾರ

ಮೊದಲು ಚಾಮುಂಡಿಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿಯ ದರ್ಶನ ಪಡೆದರು. ಬಳಿಕ ವಿಶ್ವವಿಖ್ಯಾತ ಅಂಬಾವಿಲಾಸ ಅರಮನೆಯನ್ನು ಕಣ್ತುಂಬಿಕೊಂಡರು. ಈ ಸಂದರ್ಭದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಒಡಿಶಾದ ಕಾಂಗ್ರೆಸ್ ಶಾಸಕರೊಬ್ಬರು, ನಾವು ಅರಮನೆ ನೋಡಲು ಮಾತ್ರ ಬಂದಿದ್ದೇವೆ ಎಂದು ತಿಳಿಸಿದರು. ಇದೇ ಮಾ.16 ರಂದು ರಾಜ್ಯಸಭಾ ಚುನಾವಣೆ ನಡೆಯಲಿದ್ದು, ಒಡಿಶಾದ ಕಾಂಗ್ರೆಸ್ ಶಾಸಕರಿಗೆ ಬಿಜೆಪಿ ಆಪರೇಷನ್ ಕಮಲದ ಮೂಲಕ ಅಡ್ಡ ಮತದಾನ ಮಾಡಿಸುವ ಸಾಧ್ಯತೆ ಇದೆ. ಈ ಭೀತಿಯ ಹಿನ್ನೆಲೆ ಶಾಸಕರನ್ನು ಕರ್ನಾಟಕಕ್ಕೆ ಶಿಫ್ಟ್ ಮಾಡಲಾಗಿದೆ.

## 19 ಲಕ್ಷ ಕೋಟಿ ಉಡೀಸ್

ಇಲ್ಲಿಯವರೆಗೆ ಷೇರು ಮಾರುಕಟ್ಟೆಯ ಒಟ್ಟು 33.68 ಲಕ್ಷ ಕೋಟಿ ರೂಪಾಯಿ ಧೂಳೀಪಟವಾಗಿದೆ. ಇಡೀ ವಾರ ಷೇರುಪೇಟೆಯಲ್ಲಿ ಮಾರಾಟದ ಒತ್ತಡ ಹೆಚ್ಚಾಗಿದ್ದರಿಂದ ಸಣ್ಣ ಮತ್ತು ದೊಡ್ಡ ಹೂಡಿಕೆದಾರರು ದೊಡ್ಡ ಮಟ್ಟದ ಆರ್ಥಿಕ ಹಾನಿ ಅನುಭವಿಸಿದ್ದಾರೆ. ಶುಕ್ರವಾರದ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ ಒಂದೇ ದಿನ 1,470.50 ಅಂಕ ಅಥವಾ ಶೇ.1.93ರಷ್ಟು ಕುಸಿತ ಕಂಡು 74,563.92 ಕ್ಕೆ ಸ್ಥಿರವಾಯಿತು. ವಹಿವಾಟಿನ ಮಧ್ಯಂತರದಲ್ಲಿ ಸೆನ್ಸೆಕ್ಸ್ ಬರೋಬ್ಬರಿ 1,579 ಅಂಕಗಳಷ್ಟು ಇಳಿಕೆ ಕಂಡು ಆತಂಕ ಸೃಷ್ಟಿಸಿತ್ತು. ಇದರಿಂದ ಶುಕ್ರವಾರ ಒಂದೇ ದಿನ ಹೂಡಿಕೆದಾರರು 9.08 ಲಕ್ಷ ಕೋಟಿ ರೂಪಾಯಿ ಕಳೆದುಕೊಂಡಿದ್ದಾರೆ. ಇನ್ನು ರಾಷ್ಟ್ರೀಯ ಷೇರುಪೇಟೆ ನಿಫ್ಟಿ ಕೂಡ 488.05 ಅಂಕಗಳ ಕುಸಿತದೊಂದಿಗೆ 23,151.10 ಮಟ್ಟಕ್ಕೆ ಇಳಿಕೆಯಾಗಿದೆ. ಮಾರುಕಟ್ಟೆಯ ಈ ಭೀಕರ ಕುಸಿತಕ್ಕೆ ಹಲವು ಜಾಗತಿಕ ಕಾರಣಗಳಿವೆ. ಪ್ರಮುಖವಾಗಿ ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಸಂಘರ್ಷ ಮತ್ತು ಕಚ್ಚಾ ತೈಲ ಬೆಲೆಯಲ್ಲಿನ ಏರಿಕೆ ಭಾರತದಂತಹ ಆಮದು ಅವಲಂಬಿತ ದೇಶದ ಮಾರುಕಟ್ಟೆಯ ಮೇಲೆ ಗಂಭೀರ ಪರಿಣಾಮ ಬೀರಿದೆ. ಇದರ ಜೊತೆಗೆ ವಿದೇಶಿ ಹೂಡಿಕೆದಾರರು ಭಾರತೀಯ ಮಾರುಕಟ್ಟೆಯಿಂದ ನಿರಂತರವಾಗಿ ಬಂಡವಾಳ ಹಿಂತೆಗೆದುಕೊಳ್ಳುತ್ತಿರುವುದು ಮತ್ತು ರೂಪಾಯಿ ಮೌಲ್ಯ ದುರ್ಬಲ ಗೊಂಡಿರುವುದು ಹೂಡಿಕೆದಾರರ ಆತ್ಮವಿಶ್ವಾಸವನ್ನು ಕುಗ್ಗಿಸಿದೆ.

## ಸಿಲಿಂಡರ್ ಕೊಡಿಸಿದ ಸಿಎಂ ಸಿದ್ದು

ಮಾತನಾಡಿ ಸಿಲಿಂಡರ್ ಕೊಡಿಸಿದ್ದಾರೆ. ಹೀಗಾಗಿ ಹೋಟೆಲ್‌ಗಳಿಗೂ ಕೂಡ ದಿನಕ್ಕೆ ಒಂದೋ ಎರಡೋ ಸಿಲಿಂಡರ್ ಕೊಡಿಸಲು ಸಿಎಂ ಪ್ರಭಾವ ಬೀರಬೇಕು ಎಂದು ಮನವಿ ಮಾಡಿದ್ದಾರೆ.

## 23ರಿಂದ ವೈರಮುಡಿ ಬ್ರಹ್ಮೋತ್ಸವ

ಜನಸಂದಣಿಯಾಗದಂತೆ ಬ್ಯಾರಿಕೇಡ್ ಹಾಕಬೇಕು ಎಂದು ತಿಳಿಸಿದರು. ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. ಭಕ್ತಾದಿಗಳಿಗೆ ಅಗತ್ಯವಿರುವ ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್ ಮತ್ತು ಸಂಚಾರ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುವಂತೆ ಸೂಚಿಸಲಾಗಿದೆ ಎಂದು ಹೇಳಿದರು. ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿರುವುದರಿಂದ ಆರೋಗ್ಯ ಸೇವೆ, ಸಾರಿಗೆ ವ್ಯವಸ್ಥೆ ಮತ್ತು ಬಿಗಿ ಪೊಲೀಸ್ ಬಂದೋಬಸ್ತ್‌ಗೆ ಸಭೆಯಲ್ಲಿ ಆದ್ಯತೆ ನೀಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಆರ್.ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ವಿ.ಜೆ. ಶೋಭಾರಾಣಿ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಾಳಸಂತೆ ತಡೆಯಿರಿ: ಅಶೋಕ್

ಗಲೇ ಎಸ್ಮಾ ಜಾರಿ ಮಾಡಿದೆ. ಅಕ್ರಮ ಮಾರಾಟದ ವಿರುದ್ಧ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಸಿದ್ದರಾಮಯ್ಯ ಈ ಸಮಯದಲ್ಲಿ ರಾಜಕೀಯ ಮಾಡೋದು ಬಿಡಲಿ. ರಾಜ್ಯದ ಜನರಿಗೂ ಮನವಿ ಮಾಡುತ್ತೇನೆ. ಯುದ್ಧದ ಸಮಯ ಇದು ಸಹಕಾರ ಕೊಡಬೇಕು ಎಂದರು.

## ಕಠಿಣ ಕ್ರಮಕ್ಕೆ ಸೂಚನೆ–ಪರಂ

ದಿನಗಳವರೆಗೆ ಸಮಸ್ಯೆಗಳನ್ನು ಎದುರಿಸಬಹುದು. ಸಮಸ್ಯೆಯನ್ನು ಪರಿಹರಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ತಿಳಿಸಿದರು ಇರಾನ್ ಭಾರತಕ್ಕೆ ಕೆಲವು ವಿನಾಯಿತಿಗಳನ್ನು ನೀಡಿದ ನಂತರ, ಹಾರ್ಮುಜ್ ಜಲಸಂಧಿಯ ಮೂಲಕ ಎರಡು ಭಾರತೀಯ ಹಡಗುಗಳು ಮುಂಬೈ ತಲುಪಿವೆ. ಗಲ್ಫ್ ದೇಶಗಳಿಂದ ಅನಿಲ ಮತ್ತು ತೈಲ ಪೂರೈಕೆ ಶೀಘ್ರದಲ್ಲೇ ಸುಧಾರಿಸುತ್ತದೆ ಎಂಬ ಭರವಸೆಯನ್ನು ವ್ಯಕ್ತಪಡಿಸಿದರು.

## ಸಂದರ್ಶನ ಮುಂದೂಡಿಕೆ

ಮಾಡಿದೆ. ಸಂದರ್ಶನದ ದಿನಾಂಕ ವನ್ನು ಮುಂದೆ ತಿಳಿಸಲಾಗುವುದು ಎಂದು ಮಾಹಿತಿ ನೀಡಿದೆ.

## ಎ.18ಕ್ಕೆ ರಾಗ ಮತ್ತು ಆರೋಗ್ಯ

ಮೈಸೂರು: ಎನ್.ಆರ್.ಮೊಹಲ್ಲಾ ಶಿವಾಜಿ ರಸ್ತೆಯಲ್ಲಿರುವ ಉನ್ನತಿ ಸಂಸ್ಥೆ ವತಿಯಿಂದ ಸಮಾಜಕ್ಕೆ, ಸಂಗೀತದೊಂದಿಗೆ ಸ್ವಾಸ್ಥ್ಯಕ್ಕೂ ಅನುಕೂಲವಾಗುವ ರೀತಿಯ ರಾಗಾರೋಗ್ಯ (ರಾಗ ಮತ್ತು ಆರೋಗ್ಯ) ಎಂಬ ವಿನೂತನ ಶೈಲಿಯ ಕಾರ್ಯಕ್ರಮಗಳ ಸರಣಿಯ 5ನೇ ಕಾರ್ಯಕ್ರಮವನ್ನು ಏ.18ರಂದು ಸಂಜೆ 5 ಗಂಟೆಗೆ, ನಗರದ ಜೆ.ಕೆ.ಮೈದಾನದಲ್ಲಿರುವ ಎಂ.ಎಂ.ಸಿ ಪ್ಲಾಟಿನಮ್ ಜ್ಯೂಬಿಲಿ ಸಭಾಭವನದಲ್ಲಿ ಆಯೋಜಿಸಲಾಗಿದೆ. ಇಂತಹ ಕಾರ್ಯಕ್ರಮಗಳ ಮೂಲಕ ಸಂಸ್ಥೆಯು ಸಮಾಜಕ್ಕೆ ಸಂಗೀತದಲ್ಲಿನ ವಿಶಿಷ್ಟ ರಾಗಗಳು ಹಲವಾರು ರೋಗಗಳಲ್ಲಿನ ಒತ್ತಡಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯವಾಗಬಹುದೆಂಬ ಬಗೆಗೆ ಅರಿವನ್ನು ಮೂಡಿಸುವ ಸಾಮಾಜಿಕ ಕಾರ್ಯದಲ್ಲಿ ತೊಡಗಿಕೊಂಡಿದೆ ಎಂದು ರೂಪಶ್ರೀ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಕಾರ್ಯಕ್ರಮದಲ್ಲಿ ಸ.ರಿ.ಗ.ಮ.ಪ ಖ್ಯಾತಿಯ ಹಿನ್ನೆಲೆ ಗಾಯಕ ಮೈಸೂರಿನವರೇ ಆದ ಎಂ.ಆರ್.ಶ್ರೀಹರ್ಷ ಹಲವಾರು ರಾಗಗಳಲ್ಲಿ ಒಳಗೊಂಡಿರುವ ಕೆಲವು ಕೃತಿಗಳು, ಕೀರ್ತನೆಗಳು, ದಾಸರಪದಗಳು, ಭಾವಗೀತೆಗಳು, ಜಾನಪದ ಹಾಡುಗಳು, ಆಯ್ದ ರಾಗಾಧಾರಿತ ಚಲನ ಚಿತ್ರ ಗೀತೆಗಳನ್ನು ವೈಯಕ್ತಿಕ ಆರೋಗ್ಯಕ್ಕೆ ಹೇಗೆ ಅನುಕೂಲವಾಗುವುದೆಂಬ ನಿಟ್ಟಿನಲ್ಲಿ ಆಯಾ ರಾಗದ ವಿಶಿಷ್ಟ್ಯತೆಯನ್ನು ಪ್ರಸ್ತುತಪಡಿಸಲಿದ್ದಾರೆ.ಈ ಸಹಾಯಾರ್ಥ ಪ್ರದರ್ಶನಕ್ಕೆ 499ರೂ. ಮತ್ತು 999ರೂ. ಪ್ರತ್ಯೇಕ ದರಗಳನ್ನು ನಿಗದಿಪಡಿಸಲಾಗಿದೆ. ಈ ಕಾರ್ಯಕ್ರಮದಿಂದ ಬರುವ ಆದಾಯದ ಒಂದು ಭಾಗವನ್ನು ಸಾಮಾಜಿಕ ಸೇವೆ ಮೀಸಲಿಡುವುದಾಗಿ ಹೇಳಿದರು.



# ತಂಬಾಕು ಬೆಳೆಗೆ ಸಿಎಂ ಬೆಂಬಲ ಬೆಲೆ ಕೊಡಿಸಲಿ: ಸಾ.ರಾ.ಮಹೇಶ್



ಮೈಸೂರು: ಕೇಂದ್ರ ಸರ್ಕಾರದಿಂದ ತಂಬಾಕು ಬೆಳೆಗಾರರಿಗೆ ನ್ಯಾಯ ಸಿಗುವ ನಿರೀಕ್ಷೆಯಲ್ಲಿದ್ದೇವೆ. ಆದರೆ, ರೈತರ ಹಿತ ಕಾಯುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವೂ ತಂಬಾಕು ಬೆಳೆಗಾರರಿಗೆ ಬೆಂಬಲ ಬೆಲೆ ಘೋಷಣೆ ಮಾಡಲಿ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿದರು.

ನಗರದಲ್ಲಿ ಈ ತಂಬಾಕು ಬೆಳೆ ಸಂಬಂಧ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹುಣಸೂರು ಪಿರಿಯಾಪಟ್ಟಣದಲ್ಲಿ ಹೆಚ್ಚು ತಂಬಾಕು ಬೆಳೆಯಲಾಗುತ್ತದೆ. ಇದು ಸಿಎಂ ಕ್ಷೇತ್ರ ಕೆಲ ನಾಯಕರು ಐಟಿಸಿ ಕಂಪನಿಗೆ ಬೀಗ ಹಾಕಲು ಹೋಗಿದ್ದರು. ರಾಜ್ಯದಲ್ಲಿ ನೀರಾವರಿ ರೈತರ ಸಮಸ್ಯೆಗೆ ಸ್ಪಂದಿಸೋದು ದೇವೇಗೌಡರ ಕುಟುಂಬ ಮಾತ್ರವಾಗಿದೆ. ಐಟಿಸಿ ಲಾಭಿಯಿಂದ ನಮ್ಮ ರೈತರಿಗೆ ಅನ್ಯಾಯ ಆಗ್ತಿದೆ ಅನ್ನೋ ಲಾಭಿ ಇದೆ. ಮುಕ್ತ ಮಾರುಕಟ್ಟೆಯಲ್ಲಿ ತಂಬಾಕು ಖರೀದಿಗೆ ಎಲ್ಲ ಕಂಪನಿಗೂ ಅವಕಾಶ ಕೊಟ್ಟಿದ್ದಾರೆ. ಸಿದ್ದರಾಮಯ್ಯನವರೇ ನಮ್ಮ ಜಿಲ್ಲೆಯಲ್ಲಿ ರೈತರು ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ನೀವು ನಮ್ಮ ಜಿಲ್ಲೆಯವರೇ ಆಗಿದ್ದೀರಾ. ಕೇಂದ್ರ ಸರ್ಕಾರದ ತೀರ್ಮಾನಗಳಿಗೆ ನೀವು ಕೈ ಜೋಡಿಸಿ. ರೈತರಿಗೆ ರಾಜ್ಯ ಸರ್ಕಾರದಿಂದ ಬೆಂಬಲ ಬೆಲೆ ಕೊಡಿ. ನಮ್ಮ ರೈತರನ್ನ ಉಳಿಸಿಕೊಳ್ಳುವ ನೀವು ಮಾಡಿ. ಈ ಭಾಗದ ಕೈ ನಾಯಕರು ಈ ಬಗ್ಗೆ ಸಿಎಂ ಜೊತೆ ಮಾತನಾಡಲಿ ಎಂದರು.

ಶಾಸಕ ಜಿ.ಟಿ.ಹರೀಶ್ ಗೌಡ ಮಾತನಾಡಿ, ಮೈಸೂರು ಭಾಗದ 5 ತಾಲ್ಲೂಕುಗಳಲ್ಲಿ ತಂಬಾಕು ಬೆಳೆಯಲಾಗುತ್ತದೆ. ತಂಬಾಕಿಗೆ ಈಗ ಬೆಂಬಲ ಬೆಲೆ ಸಿಗುತ್ತಿಲ್ಲ. ಜನ ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದಾರೆ. ಈ ಬಗ್ಗೆ ಕೇಂದ್ರದ ಗಮನ ಸೆಳೆಯುವ ಕೆಲಸ ಮಾಡಿದ್ದೇವೆ. ಕಳೆದ ವರ್ಷ ಕೂಡ ಇದೆ ರೀತಿಯ ಸಮಸ್ಯೆ ಉಂಟಾಗಿತ್ತು. ಆ ವೇಳೆ ಸಂಸದ ಯದುವೀರ್, ಕೇಂದ್ರ ಸಚಿವ ಕುಮಾರಸ್ವಾಮಿಯವರು ಸಮಸ್ಯೆ ಬಗೆಹರಿಸಿದ್ದರು. ಈಗಲು ಸಮಸ್ಯೆ ಉಂಟಾಗಿದೆ, ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಿದೆ. ಐಟಿಸಿ ಕಂಪನಿ ಮೇಲೆ ಒತ್ತಡ ಹಾಕಬೇಕಿದೆ. ತಂಬಾಕು ಬೆಳೆ ರೈತರು ಸಾಕಷ್ಟು ನಷ್ಟ ಅನುಭವಿಸುತ್ತಿದ್ದಾರೆ. ರೈತರಿಗೆ ಐಟಿಸಿ ಕಂಪನಿ ನೀಡುತ್ತಿರುವ ಬೆಲೆ ಸಾಕಾಗುತ್ತಿಲ್ಲ. ತಂಬಾಕಿಗೆ ಬೆಂಬಲ ಬೆಲೆ ಸಿಗದೆ ಹುಣಸೂರು ತಾಲ್ಲೂಕಿನ ಓರ್ವ ರೈತ ಆತ್ಮಹತ್ಯೆಗೆ ಮುಂದಾಗಿದ್ದರು. ಕೇಂದ್ರ ಸಚಿವರ ಸೂಚನೆ ಮೇರೆಗೆ ಸ್ವಲ್ಪ ಚೇತರಿಕೆ ಕಂಡಿದೆ. ಈಗಲೂ ನಾವು ಸೂಕ್ತ ಪರಿಹಾರದ ನಿರೀಕ್ಷೆಯಲ್ಲಿದ್ದೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ವಿವೇಕಾನಂದ, ಮಾಜಿ ಶಾಸಕ ಅಶ್ವಿನ್ ಕುಮಾರ್, ಜೆಡಿಎಸ್ ನಗರಾಧ್ಯಕ್ಷ ಎಸ್.ಬಿ.ಎಂ.ಮಂಜು ಇನ್ನಿತರರು ಉಪಸ್ಥಿತರಿದ್ದರು.

### ಕೃತಕ ಅಭಾವ ಸೃಷ್ಟಿಸುವವರ ವಿರುದ್ಧ ಕ್ರಮ ಆಗಲಿ

ದೇಶದಲ್ಲಿ ವಾಣಿಜ್ಯ ಸಿಲಿಂಡರ್ ಅಭಾವ ವಿಚಾರವಾಗಿ ಸಾ.ರಾ.ಮಹೇಶ್ ಪ್ರತಿಕ್ರಯಿಸಿ, ಇದು ಕೃತಕ ಅಭಾವದ ಸೃಷ್ಟಿಯಾಗಿದೆ. ದೇಶದಲ್ಲಿ ಯಾವುದೇ ರೀತಿಯ ಗ್ಯಾಸ್ ಸಮಸ್ಯೆ ಇಲ್ಲ. ಯಾವ ಯಾವ ರಾಜ್ಯದಲ್ಲಿ ಗ್ಯಾಸ್ ರೀ ಫಿಲ್ಲಿಂಗ್ ಮಾಡಲಾಗ್ತಿದೆ ಅನ್ನೋ ಮಾಹಿತಿ ಇದೆ. ಕೃತಕ ಅಭಾವದವನ್ನ ಆಯಾ ರಾಜ್ಯಗಳು ತಡೆಗಟ್ಟಬೇಕು. ಕೃತಕ ಅಭಾವ ಉಂಟು ಮಾಡೋರ ವಿರುದ್ಧ ಕ್ರಮ ಆಗಬೇಕು ಎಂದರು.

# ಕೆಂಗಲ್‌ಗೆ ಕರ್ನಾಟಕ ರತ್ನ ನೀಡಿ

## ನಿಶ್ಚಲಾನಂದನಾಥ ಶ್ರೀ ಒತ್ತಾಯ । ಕೆಂಗಲ್ ಹನುಮಂತಯ್ಯ ಜಯಂತಿ



ಮೈಸೂರು: ಕರ್ನಾಟಕದ ಏಕೀಕರಣ ರೂವಾರಿಯಾಗಿರುವ ಕೆಂಗಲ್ ಹನುಮಂತಯ್ಯ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ಸರ್ಕಾರ ನೀಡಲಿ ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಪೀಠಾಧಿಪತಿ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅಭಿಪ್ರಾಯ ಪಟ್ಟರು.

ಕರ್ನಾಟಕ ಸೇನಾಪಡೆಯಿಂದ ನಗರದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಆಯೋಜಿಸಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರ ಜಯಂತಿ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿದರು. ಜಾತಿ ಎಂಬುದು ವಿಷವಿದ್ದಂತೆ ಹೀಗಾಗಿ ಯಾರು ಸಹ ಜಾತಿ ವ್ಯಮೋಹಕ್ಕೆ ಬಲಿಯಾಗಬಾರದು. ಶುದ್ಧ ರಾಜಕಾರಣಕ್ಕೆ ಹೆಸರಾದ ಕೆಂಗಲ್ ಹನುಮಂತರಾಯರು ಕರ್ನಾಟಕ ಏಕೀಕರಣದ ರೂವಾರಿಯಾಗಿದ್ದಾರೆ. ಅವರ ಹೆಸರು ಮುಂದಿನ ಪಿಳಿಗೆಗೂ ತಿಳಿಯುವ ನಿಟ್ಟಿನಲ್ಲಿ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಘೋಷಣೆ ಮಾಡಲಿ ಎಂದು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ನಾಡಿಗೆ ಅಪಾರವಾಗಿ ಸೇವೆ ಸಲ್ಲಿಸಿದ ಮಾಜಿ ಮುಖ್ಯಮುಖ್ಯಮಂತ್ರಿ ಹಾಗೂ ಸ್ವಾತಂತ್ರ?ಯ ಹೋರಾಟಗಾರ ಕೆಂಗಲ್ ಹನುಮಂತಯ್ಯ ಅವರ ಇತಿಹಾಸವನ್ನು ಹಾಗೂ ಅವರ ಸೇವೆಯನ್ನು ಮುಂದಿನ ಪೀಳಿಗೆಗೆ ತಿಳಿಸುವ ಕೆಲಸವಾಗಬೇಕು. ಇಂದು ಕರ್ನಾಟವನ್ನು ಅನುಭವಿಸುತ್ತಾ ರಾಜ್ಯದಲ್ಲಿ ಜೀವಿಸುತ್ತಿದ್ದೇವೆಂದರೆ ಪ್ರಮುಖ ಕಾರಣ ಕೆಂಗಲ್ ಹನುಮಂತಯ್ಯರಾಗಿದ್ದಾರೆ. ಇಂತಹ ನಾಯಕರನ್ನು ಬೇಗ ಮರೆಯುತ್ತೇವೆ. ಇಂದಿನ ಮಕ್ಕಳು ಇತಿಹಾಸವನ್ನು ಓದುವುದಿಲ್ಲ. ಕೇವಲ ಅಂತರ್ಜಾಲದಲ್ಲಿ ಹೋಗಿ ತಮಗೆ ಬೇಕಾದನ್ನು ತಿಳಿದುಕೊಳ್ಳುತ್ತಾರೆ ಎಂದು ವಿಷಾsಸಿದರು.

ಕೆಂಗಲ್ ಹನುಮಂತಯ್ಯ ಅವರ ಸಾಧನೆ, ಕೊಡುಗೆಗಳನ್ನು ಓದಿಸಬೇಕು. ಅವರ ಕಾಲದಲ್ಲಿ ನಿರ್ಮಾಣವಾದಂತಹ ಕಟ್ಟಡಗಳ ಬಗ್ಗೆ ತಿಳಿಸಬೇಕು. ಇಲ್ಲದಿದ್ದರೆ ಮಕ್ಕಳು ಅವರನ್ನು ಮರೆತುಬಿಡುತ್ತಾರೆ. ಪ್ರತಿಯೊಬ್ಬ ಪ್ರಜೆಯೂ ಸರಿಯಾದ ರೀತಿಯಲ್ಲಿ ಬಾಳ್ವೆ ಮಾಡಬೇಕು ಎಂದು ತಿಳಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕೆಂಗಲ್ ಹನುಮಂತಯ್ಯ ಸ್ವತಂತ್ರ?ಯಕ್ಕಾಗಿ ಹೋರಾಟ ಮಾಡಿ, ತಮ್ಮ ಜೀವನದುದ್ದಕ್ಕೂ ತ್ಯಾಗಗಳನ್ನು ಮಾಡಿ, ನೋವುಗಳನ್ನು ಅನುಭವಿಸಿ ಜೀವಿಸಿದವರು. ಅಂದು ಸ್ವತಂತ್ರ?ಯ ಪಡೆಯಬೇಕಾದರೆ ಅನೇಕ ಸವಾಲುಗಳನ್ನು ಎದುರಿಸಿದ್ದಾರೆ ಎಂದರು.

ಮುಖ್ಯಮಂತ್ರಿ ಪದವಿಗಾಗಿ ಅವರು ಸ್ವಾತಂತ್ರ್ಯ ಹೋರಾಟ ಮಾಡಲಿಲ್ಲ. ಕೇವಲ ಸ್ವತಂತ್ರ?ಯಕ್ಕಾಗಿಯೇ ಹೋರಾಟ ಮಾಡಿ ಗಾಂಧೀಜಿ ಅವರ ಅಹಿಂಸಾತ್ಮಕ ಹೋರಾಟದಲ್ಲಿ ಪ್ರೇರಿತರಾಗಿ 9 ಬಾರಿ ಸೆರೆಮನೆ ವಾಸ ಅನುಭವಿಸುತ್ತಾರೆ ಎಂದು ತಿಳಿಸಿದರು. ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್, ರಾಜ್ಯ ನಿರ್ದೇಶಕ ಡಾ. ಎಂ.ಬಿ.ಮಂಜೇಗೌಡ, ಕರ್ನಾಟಕ ಸೇನಾಪಡೆಯ ಅಧ್ಯಕ್ಷ ತೇಜೇಸ್ ಲೋಕೇಶ್ ಗೌಡ, ಕರ್ನಾಟಕ ಸೇನಾ ಪಡೆ ರಾಜ್ಯಾಧ್ಯಕ್ಷ ಚಾ ರಂ ಶ್ರೀನಿವಾಸ ಗೌಡ, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕೆ ಎನ್ ನಾಗೇಗೌಡ, ಪ್ರಭುಶಂಕರ, ಕೃಷ್ಣಪ್ಪ, ಪ್ರಜೀಶ್, ಹನುಮಂತಯ್ಯ, ನೇಹಾ, ಭಾಗ್ಯಮ್ಮ, ಅಂಬಾ ಅರಸ್, ಸುಜಾತಾ, ಕೆಪಿ ನಾಗಣ್ಣ, ರಾಧಾಕೃಷ್ಣ, ಪ್ರಭಾಕರ್, ಶಿವರಾಂ, ನಾರಾಯಣ ಗೌಡ, ತ್ಯಾಗರಾಜ್, ಗಣೇಶ್ ಪ್ರಸಾದ್, ಚಂದ್ರಶೇಖರ್, ಕೃಷ್ಣೇಗೌಡ, ಶ್ರೀನಿವಾಸ್, ಕುಮಾರ್, ರಘು ಅರಸ್, ಗೀತಾ ಗೌಡ, ಬಸವರಾಜು ಸೌಮ್ಯ ಸೇರಿ ಇನ್ನಿತರರು ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ಕ್ರೀಡಾಪಟುಗಳು ಕೀರ್ತಿ ತನ್ನಿ

ಕಾರ್ಯಕ್ರಮವಾಗಿದೆ. ಎಚ್.ಡಿ.ಕುಮಾರಸ್ವಾಮಿ ಅವರ ಪರಿಶ್ರಮದಿಂದ ಮಂಡ್ಯದಲ್ಲಿ ಈ ಸುಸಜ್ಜಿತ ಕ್ರೀಡಾಂಗಣ ಬರುತ್ತಿದೆ ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಹೇಳಿದರು.

ಮಂಡ್ಯದ ವಿಸಿ ಫಾರಂನಲ್ಲಿರುವ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನೂತನ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಮಂಡ್ಯ ನೆಲದಿಂದ ರಾಜ್ಯವಷ್ಟೇ ಅಲ್ಲ, ರಾಷ್ಟ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕ್ರೀಡಾಪಟುಗಳು ಬಂದಿದ್ದಾರೆ. ಆ ಪೈಕಿ ನಾನು ವಿಕಾಸಗೌಡ, ಕೆ.ಆರ್.ಶಿಲ್ಪಾ ಅವರನ್ನು ನೆನಪಿಸಿಕೊಳ್ಳಲು ಬಯಸುತ್ತೇನೆ. ಇಂತಹ ಅನೇಕ ಕ್ರೀಡಾಪಟುಗಳು ಮಂಡ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಮುಖ್ಯವಾಗಿ ವೀಲ್ ಚೇರ್ ಟೆನಿಸ್ ಆಟಗಾರ್ತಿ, ಭಾರತ ನಂಬರ್ ಒನ್ ವೀಲ್ ಚೇರ್ ಟೆನಿಸ್ ಆಟಗಾರ್ತಿ ಆಗಿರುವ ಶಿಲ್ಪಾ ಅವರು ಭಾರತದ ಕೀರ್ತಿಯನ್ನು ದೇಶ ವಿದೇಶಗಳಲ್ಲಿ ಬೆಳಗುತ್ತಿದ್ದಾರೆ. ಇಂತಹ ಅಸಂಖ್ಯಾತ ಪ್ರತಿಭೆಗಳು ಇಲ್ಲಿಂದ ಬರಬೇಕು ಎಂದು ಹಾರೈಸುತ್ತೇನೆ ಎಂದು ಅವರು ಹೇಳಿದರು.

ಕೇಂದ್ರದ ನರೇಂದ್ರ ಮೋದಿ ಸರ್ಕಾರ ಕಳೆದ ಹನ್ನೊಂದು ವರ್ಷಗಳಲ್ಲಿ ಕ್ರೀಡಾ ಪೂರಕ ವ್ಯವಸ್ಥೆ ಹೆಚ್ಚಿಸಲು ಗುರುತರವಾಗಿ ಕೆಲಸ ಮಾಡಿದೆ. ಕಳೆದ ಬಜೆಟ್ ನಲ್ಲಿ ಕ್ರೀಡಾ ಮೂಲಸೌಕರ್ಯ ವೃದ್ಧಿಗೆ 4,000 ಕೋಟಿ ರೂ. ಹಂಚಿಕೆ ಮಾಡಿದೆ. ಹತ್ತು ವರ್ಷಗಳ ಹಿಂದೆ ಈ ಉದ್ದೇಶಕ್ಕೆ ಕೇವಲ 1200 ಕೋಟಿ ರೂ. ಮಾತ್ರ ಕೊಡಲಾಗುತ್ತಿತ್ತು. ಅದರ ಪ್ರಮಾಣ ಈಗ ಮೂರೂವರೆ ಪಟ್ಟು ಹೆಚ್ಚಾಗಿದೆ ಎಂಬುದನ್ನು ಎಲ್ಲರೂ ಗಮನಿಸಬೇಕು ಎಂದು ಅವರು ಹೇಳಿದರು.

## ಇರಾನ್ ಗುಡ್ ನ್ಯೂಸ್

ನಿರ್ವಹಿಸುತ್ತದೆ. ಅಮೆರಿಕ, ಇಸ್ರೇಲ್ ಮತ್ತು ಈ ದೇಶಗಳಿಗೆ ಬೆಂಬಲ ನೀಡುವ ಯಾವುದೇ ಹಡಗುಗಳು ಹಾರ್ಮುಜ್ ಜಲಸಂಧಿಯನ್ನು ಪ್ರವೇಶಿಸಿದರೆ ಹೊಡೆದು ಹಾಕುತ್ತೇವೆ ಎಂದು ಇರಾನ್ ಎಚ್ಚರಿಕೆ ನೀಡಿದೆ. ಸದ್ಯ ಇರಾನ್ ಭಾರತ ಸೇರಿದಂತೆ ರಷ್ಯಾ, ಚೀನಾ, ಟರ್ಕಿ, ಪಾಕಿಸ್ತಾನದ ಕಂಟೈನರ್ ಹಡಗುಗಳ ಸಂಚಾರಕ್ಕೆ ಮಾತ್ರ ಅನುಮತಿ ನೀಡಿದೆ.

## ಅರಸು ಕಾಲೋನಿ ಅಭಿವೃದ್ಧಿಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ

ಮೈಸೂರು: ಕೆ.ಆರ್.ಕ್ಷೇತ್ರದ ವಾರ್ಡ್ ನಂ.62ರಲ್ಲಿ ಬರುವ ದೇವರಾಜ್ ಅರಸು ಕಾಲೋನಿಯಲ್ಲಿ 180ಲಕ್ಷ ರೂ.ಗಳ ಇಂಟರ್ ಲಾಕ್, ಚರಂಡಿ ಹಾಗೂ ಸಿಸಿ ರಸ್ತೆ ಕಾಮಗಾರಿ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿ ಪೂಜೆ ಮಾಡುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ವಾರ್ಡ್ ಅಧ್ಯಕ್ಷ ರಾಘವೇಂದ್ರ, ನಗರ ಪಾಲಿಕೆ ಮಾಜಿ ಸದಸ್ಯೆ ಶಾಂತಮ್ಮ ವಡಿವೇಲು, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲ್ ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಬಿಜೆಪಿ ಮುಖಂಡ ವಡಿವೇಲು, ಚಂದ್ರಣ್ಣ, ನಾಗೇಂದ್ರ, ದೀಪಕ್, ಕುಮಾರ್, ಶೋಭಾ, ಬೂತ್ ಅಧ್ಯಕ್ಷ ಮಹದೇವ, ನಿರ್ಮಿತಿ ಕೇಂದ್ರದ ಅಧಿಕಾರಿಗಳಾದ ಮಹೇಶ್ ಕುಮಾರ್, ರಮೇಶ್, ಮೇಘರಾಜ್ ಶೆಟ್ಟಿ ಮುಂತಾದವರು ಇದ್ದರು.



## ಶಾಂತಿಗಾಗಿ ಆಗ್ರಹಿಸಿ ಎಡಪಕ್ಷಗಳ ಪ್ರತಿಭಟನೆ



ಮೈಸೂರು: ಅಮೇರಿಕಾ–ಇಸ್ರೇಲ್ ಯುದ್ಧಕೋರ ನೀತಿ ಖಂಡಿಸಿ, ಯುದ್ಧ ಬೇಡ, ಶಾಂತಿಗಾಗಿ ಒತ್ತಾಯಿಸಿ ಇಂದು ಎಡಪಕ್ಷಗಳು ಹಾಗೂ ಪ್ರಗತಿಪರ ಸಂಘಟನೆಗಳಿಂದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಯಿತು.

ಶ್ರೀಮಂತ ಬಂಡವಾಳಶಾಹಿ ದೇಶಗಳಿಂದು ಬಿಕ್ಕಟ್ಟಿನಲ್ಲಿವೆ. ಈ ಬಿಕ್ಕಟ್ಟಿನಿಂದ ಹೊರ ಬರಲು ಇತರ ರಾಷ್ಟಗಳ ಮೇಲೆ ದಾಳಿ ನಡೆಸಿ ಅಲ್ಲಿನ ತೈಲ ಸೇರಿದಂತೆ ಇತರ ಸಂಪತ್ತನ್ನು ಲೂಟಿ ಮಾಡಲಾಗುತ್ತಿದೆ. ಅದರ ಭಾಗವಾಗಿ ಪ್ರಜಾಪ್ರಭುತ್ವ ಸ್ಥಾಪನೆ ಹೆಸರಿನಲ್ಲಿ, ಅಣುಶಕ್ತಿ ನೆಪದಲ್ಲಿ ತಮ್ಮ ಮಾತುಗಳನ್ನು ಕೇಳದ ಸಾರ್ವಭೌಮ ದೇಶಗಳ ಮೇಲೆ ದಾಳಿ ಮಾಡಲಾಗುತ್ತಿದೆ. ಅಲ್ಲದೇ ಶಾಲೆ– ಆಸ್ಪತ್ರೆಗಳ ಮೇಲೆ, ನಾಗರಿಕರ ಮೇಲೆ ದಾಳಿಮಾಡಿ ಕೊಲ್ಲಲಾಗುತ್ತಿದೆ.ಈ ಯುದ್ದಗಳಿಂದ ಮೊದಲು ಬಲಿಯಾಗುವುದು ಮಕ್ಕಳು, ಮಹಿಳೆಯರು ಹಾಗೂ ತೊಂದರೆಗಳಗಾಗುವವರು ರೈತ–ಕಾರ್ಮಿಕ, ಸಾಮಾನ್ಯ ಜನರು ಆದ್ದರಿಂದ ಈ ಯುದ್ಧ ಕೂಡಲೇ ನಿಲ್ಲಬೇಕು, ವಿಶ್ವ ಸಂಸ್ಥೆ, ಅಂತರಾಷ್ಟ್ರೀಯ ನ್ಯಾಯಾಲಯ ಮಧ್ಯಪ್ರದೇಶ ಮಾಡಬೇಕೆಂದು ಒತ್ತಾಯಿಸಿದರು. ಅಲ್ಲದೆ ಇರಾನ್ ಮೇಲಿನ ಅಮೇರಿಕಾ, ಇಸ್ರೇಲ್ ದಾಳಿಯಿಂದ ನಮ್ಮ ದೇಶವೂ ಸಂಕಷ್ಟಕ್ಕೀಡಾಗಿದ್ದು ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಪೂರೈಕೆ ಮೇಲೆ ಪರಿಣಾಮ ಬೀರಿ ಅಡುಗೆ ಅನಿಲದ ಕೊರತೆ ಉಂಟಾಗಿದೆ. ಬೆಲೆಗಳೂ ಏರಿಕೆ ಆಗುತ್ತಿದೆ ಕೂಡಲೇ ಕೇಂದ್ರ ಸರ್ಕಾರ ಯುದ್ಧ ನಿಲ್ಲಿಸುವಂತೆ ಅಮೇರಿಕಾವನ್ನು ಒತ್ತಾಯಿಸಬೇಕು, ದೇಶ ನಾಗರಿಕರಿಗೆ ತೊಂದರೆಯಾಗದಂತೆ ಕ್ರಮವಹಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ?ಯ, ಸಿಪಿಐ ಕಾರ್ಯದರ್ಶಿ ರಾಮಕೃಷ್ಣ, ಸಿಪಿಎಂಎಲ್ ಕಾರ್ಯದರ್ಶಿ ಜವರಯ್ಯ,ಎಸ್‌ಯುಸಿಐ ಕಾರ್ಯದರ್ಶಿ ರವಿ, ಪ್ರಗತಿಪರರಾದ ಟಿ.ಗುರುರಾಜ್, ಸವಿತಾ ಮಲ್ಲೇಶ್,ಒಡನಾಡಿ ಸ್ಟ್ಯಾನ್ಲಿ, ಲಕ್ಷ್ಮಣ್ ಹೊಸಕೋಟೆ, ರಾಜ್ಯ ರೈತ ಸಂಘದ ಹೊಸಕೋಟೆ ಬಸವರಾಜ್, ಕಾಳಚನ್ನೇಗೌಡ, ಕೆ.ಬಸವರಾಜ್, ಎನ್.ವಿಜಯ್‌ಕುಮಾರ್,ಜಂರಾಂ,ನೆಲೆ ಗೋಪಾಲ್ ಕೃಷ್ಣ,ಶಾಕುಂತಲ, ಬಾಲಾಜಿರಾವ್,ಪ್ರಭಾಕರ್,ಯಶೋಧರ, ಸೋಮರಾಜೇ ಅರಸ್ ಭಾಗವಹಿಸಿದ್ದರು.

# ಶೇ.25ರಷ್ಟು ಕಮರ್ಷಿಯಲ್ ಸಿಲಿಂಡರ್ ಪೂರೈಕೆಗೆ ಒತ್ತಾಯ

ಮೈಸೂರು: ಹೋಟೆಲ್ ಉದ್ಯಮವನ್ನು ತುರ್ತು ಸೇವಾ ವಲಯ ಎಂದು ಪರಿಗಣಿಸಿ ಸರ್ಕಾರ ಶೇ.25ರಷ್ಟು ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಮಾಡಬೇಕೆಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಒತ್ತಾಯಿಸಿದರು.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಬಳಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಅಡುಗೆ ಅನಿಲ ಸರಬರಾಜು ಕಂಪನಿಗಳಲ್ಲಿ ಕಮರ್ಷಿಯಲ್ ಸಿಲಿಂಡರ್‌ಗೆ ರೀಫಿಲ್ಲಿಂಗ್ ಮಾಡುವ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿತ್ತು. ಇದರಿಂದ ಹೋಟೆಲ್‌ಗಳಿಗೆ ಪೂರೈಕೆಯಾಗುತ್ತಿದ್ದ ಕಮರ್ಷಿಯಲ್ ಸಿಲಿಂಡರ್ ಲಭ್ಯವಾಗದೆ ಹೋಟೆಲ್ ಉದ್ಯಮ ಸಂಕಷ್ಟಕ್ಕೆ ಸಿಲುಕಿಸಿದೆ. ಸಿಲಿಂಡರ್ ಸಮಸ್ಯೆ ಕೇವಲ ಮೈಸೂರಿಗೆ ಮಾತ್ರವಲ್ಲದೆ ಎಲ್ಲೆಡೆ ಉಂಟಾಗಿದೆ. ಒಂದು ವಾರ ಕಾಯುವಂತೆ ಆಹಾರ ಇಲಾಖೆ ಸಚಿವ ಕೆ.ಹೆಚ್.ಮುನಿಯಪ್ಪ ಸಲಹೆ ನೀಡಿದ್ದಾರೆ. ಆದರೆ, ಒಂದು ವಾರ ಕಾಯುತ್ತಾ ಕುಳಿತರೆ ವ್ಯವಸ್ಥೆ ಅಯೋಮಯವಾಗಲಿದ್ದು, ಪ್ರವಾಸಿಗರು ಮಾತವಲ್ಲದೆ, ಹೋಟೆಲ್ ಅನ್ನೇ ನಂಬಿಕೊಂಡಿರುವ ಜನ, ರೈತರಿಗೂ ತೀವ್ರತರನಾದ ತೊಂದರೆಯಾಗಲಿದೆ. ಇದು ಮತ್ತೊಮ್ಮೆ ಕೋವಿಡ್ ಸಂಕಷ್ಟವನ್ನು ಉದ್ಯಮಕ್ಕೆ ತಂದು ಕೊಟ್ಟಿದೆ ಎಂದು ಅಸಮಾದಾನ ವ್ಯಕ್ತಪಡಿಸಿದರು.



ಸಿಲಿಂಡರ್ ಸಮಸ್ಯೆ ಉದ್ಭವಿಸಿರುವ ಹಿನ್ನೆಲೆಯಲ್ಲಿ ಮೈಸೂರಿನ ಪ್ರವಾಸೋದ್ಯಮಕ್ಕೂ ಧಕ್ಕೆಯಾಗುತ್ತಿದೆ. ಪ್ರತಿದಿನ 50 ಸಾವಿರ ಪ್ರವಾಸಿಗರು, ವಾರಾಂತ್ಯದಲ್ಲಿ 1.5 ಲಕ್ಷ ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಆದರೆ, ಸಿಲಿಂಡರ್ ಸಮಸ್ಯೆಯಿಂದಾಗಿ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಶೇ.50 ಕುಸಿದಿದೆ. ಕಾಯ್ದಿರಿಸಿದ ಕೊಠಡಿಗಳನ್ನು ರದ್ದು ಮಾಡುತ್ತಿದ್ದಾರೆ. ಕೆಲವರು ಊಟ ಸಿಗುತ್ತದಾ ಎಂದು ಪ್ರಶ್ನೆ ಮಾಡುತ್ತಿದ್ದಾರೆ. ವಾರದ ದಿನಗಳಲ್ಲಿ ದಿನವೊಂದಕ್ಕೆ 4ರಿಂದ 5 ಕೊಠಡಿಗಳಷ್ಟೇ ಬುಕ್ ಆಗುತ್ತಿದೆ. ವಾರಾಂತ್ಯದಲ್ಲಿ ಕಡಿಮೆ ಸಂಖ್ಯೆಯ ಪ್ರವಾಸಿಗರು ಮೈಸೂರಿಗೆ ಬರುತ್ತಿದ್ದಾರೆ. ಇದರಿಂದಾಗಿ ಪ್ರವಾಸೋದ್ಯಮಕ್ಕೆ ಚೈತನ್ಯ ತುಂಬುವುದಕ್ಕಾಗಿ ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಹೆಚ್ಚಿಸಬೇಕು ಎಂದರು.

ಹೋಟೆಲ್ ಹಾಗೂ ಫಾಸ್ಟ್‌ಫುಡ್‌ಗಳಲ್ಲಿ ಗೃಹ ಬಳಕೆಯ ಸಿಲಿಂಡರ್ ಬಳಕೆಯನ್ನು ಹೋಟೆಲ್ ಮಾಲೀಕರ ಸಂಘ ಬೆಂಬಲಿಸುವುದಿಲ್ಲ. ಈಗಾಗಲೇ ಫಾಸ್ಟ್‌ಫುಡ್‌ಗಳಲ್ಲಿ ಗೃಹ ಬಳಕೆ ಸಿಲಿಂಡರ್ ಬಳಸುತ್ತಿರುವುದನ್ನು ಪತ್ತೆ ಮಾಡಿ ಕ್ರಮ ಕೈಗೊಂಡಿದ್ದಾರೆ. ಇದು ಸ್ವಾಗತಾರ್ಹ. ಮೈಸೂರು ಭಾಗದಲ್ಲಿ ಗ್ಯಾಸ್ ಉತ್ಪಾಧಿಸುವ ಆರು ಖಾಸಗಿ ಕಂಪನಿಗಳಿದ್ದು, ಸರ್ಕಾರದ ಅನುಮತಿ ಪಡೆದು ಕಚ್ಚಾವಸ್ತು ಬಳಸಿ ಅಡುಗೆ ಅನಿಲ ಉತ್ಪಾಧಿಸುತ್ತಿವೆ. ಈಗ ಈ ಕಂಪನಿಗಳು 1700 ರೂ. ಮೌಲ್ಯದ ಸಿಲಿಂಡರ್ ಅನ್ನು 3500 ಸಾವಿರ ರೂ.ಗೆ ಮಾರಾಟ ಮಾಡುತ್ತಿವೆ. ಸೇವಾ ಕ್ಷೇತ್ರವಾಗಿರುವ ಹೋಟೆಲ್ ಉದ್ಯಮ ಸರ್ಕಾರಕ್ಕೆ ದೊಡ್ಡಮಟ್ಟದಲ್ಲಿ ತೆರಿಗೆ ಕಟ್ಟುತ್ತಿದ್ದರೂ, ಅವರ ಹಿತ ಕಾಯಲು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಸರ್ಕಾರ ಸಿಲಿಂಡರ್ ಪೂರೈಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಆಸ್ಪತ್ರೆಯಂತೆ ಹೋಟೆಲ್ ಉದ್ಯಮವೂ ಮಹತ್ವದ್ದಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಹೋಟೆಲ್ ಉದ್ಯಮಿಗಳಾದ ಎ.ಆರ್.ರವೀಂದ್ರ ಭಟ್, ಅರುಣ್, ಸುಬ್ರಹ್ಮಣ್ಯ ತಂತ್ರಿ ಇದ್ದರು.

### 25ಸಾವಿರ ಮಂದಿ ಅತಂತ್ರದ ಆತಂಕ

ಮೈಸೂರಲ್ಲಿ ಹೋಟೆಲ್ ಉದ್ಯಮವನ್ನು ನಂಬಿಕೊಂಡಿರುವ 25 ಸಾವಿರಕ್ಕೂ ಹೆಚ್ಚು ಸಿಬ್ಬಂದಿಗಳಿದ್ದಾರೆ. ರಾಜ್ಯದಲ್ಲಿ 13ಲಕ್ಷ ಹೋಟೆಲ್ ಸಿಬ್ಬಂದಿಗಳಿದ್ದಾರೆ. ಇವೆರಲ್ಲರ ಕುಟುಂಬಗಳು ಅತಿಥ್ಯ ಉದ್ಯಮವನ್ನೇ ನಂಬಿಕೊಂಡಿದ್ದಾರೆ. ಈಗಾಗಲೇ ಹಲವು ಹೋಟೆಲ್‌ಗಳಲ್ಲಿ ಇಂಡೆಕ್ಷನ್ ಸ್ಟೌ, ಸೌದೆ, ಮರದ ಹೊಟ್ಟು, ಭತ್ತದ ಹೊಟ್ಟಿನ ಹೊಲೆಯಿಂದ ಆಹಾರ ಪದಾರ್ಥ ತಯಾರಿಸುವ ಮೂಲಕ ಹೋಟೆಲ್‌ಗಳು ಗ್ರಾಹಕರಿಗೆ ಸೇವೆ ಒದಗಿಸುತ್ತಿವೆ. ಹೀಗಾಗಿ ಕನಿಷ್ಠ ಸಿಲಿಂಡರ್ ಒದಗಿಸಲಿ.

–ಸಿ.ನಾರಾಯಣಗೌಡ

# ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ



ಗುಂಡ್ಲುಪೇಟೆ: ತಾಲೂಕು ಕಬ್ಬಹಳ್ಳಿ ಗ್ರಾಮದ ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಹಿಳಾ ಸಬಲೀಕರಣ ಕೋಶ ಮತ್ತು ಐಕ್ಯೂ ಎ ಸಿ ಸಹಯೋಗದಲ್ಲಿ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಮಹಿಳಾ ಸಾಧಕೀಯರ ಸನ್ಮಾನ" ಕಾರ್ಯಕ್ರಮ ಹಾಗೂ ಮಹಿಳಾ ಸಾಧಕೀಯರ ಭಾವಚಿತ್ರಗಳ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

ಸನ್ಮಾನವನ್ನು ಸ್ವೀಕರಿಸಿದ ಹುಣಸಿನಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಬಿ ನಾಗರತ್ನಮ್ಮ ಅವರು ಮಾತನಾಡುತ್ತಾ "ಹೆಣ್ಣು ಮನೆಯ ಕಣ್ಣು, ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎಂಬ ನುಡಿಗಳ ಮೂಲಕ ಮಹಿಳಾ ಸಾಧಕೀಯರ ಆದರ್ಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಐಕ್ಯೂಎಸಿ ಸಂಚಾಲಕ ಮಹದೇವಸ್ವಾಮಿ ಮಾತನಾಡಿ"ಭಾರತದ ಸಂಸ್ಕೃತಿ ಪರಂಪರೆಯಲ್ಲಿ ಸ್ತ್ರೀಗೆ ವಿಶೇಷ ಸ್ಥಾನಮಾನವಿದ್ದು, ಸಂವಿಧಾನದಲ್ಲಿ ಮಹಿಳೆಗೆ ಸಮಾನ ಅವಕಾಶಗಳನ್ನು ಕಲ್ಪಿಸಿದ್ದು, ಪ್ರಸ್ತುತ ಸಮಾಜದ ಎಲ್ಲಾ ರಂಗಗಳಲ್ಲಿಯೂ ಮಹಿಳೆಯು ತಮ್ಮದೇ ಆದ ವಿಶೇಷ ಛಾಪನ್ನು ಮೂಡಿಸಿದ್ದಾರೆ. ಗ್ರಾಮೀಣ ಮಹಿಳಾ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆದು ಅಷ್ಟಕ್ಕೆ ಸೀಮಿ ತವಾಗದೆ ಉದ್ಯೋಗಸ್ಥರಾಗಿ, ನಾಯಕತ್ವ ಪಡೆದು ಅಭಿವೃದ್ಧಿಯ ಚಾಲಕರಾಗಬೇಕು" ಎಂದರು.

ಪ್ರಾಂಶುಪಾಲರಾದ ಡಾ.ಕವಿತಾ ಮಾತನಾಡುತ್ತ "ಸಮ ಸಮಾಜ ಕಟ್ಟುವಲ್ಲಿ ಹೆಣ್ಣು ಮಕ್ಕಳ ಪಾತ್ರ ಮಹತ್ತರವಾದದ್ದು ಮತ್ತು ಯುದ್ಧ ವಿರೋಧಿಯಾಗಿ ಶಾಂತಿ ಕಟ್ಟುವ ಅದಮ್ಯ ಚೈತನ್ಯ ಹೆಣ್ಣು. ಹೆಣ್ಣನ್ನು ಶೋಷಿಸದೆ ಬೆಳೆಸುವಲ್ಲಿ ಪ್ರತಿಯೊಬ್ಬರು ಭಾಗಿಯಾಗಬೇಕು" ಎಂದರು. ಕಾರ್ಯಕ್ರಮವನ್ನು ಮಹಿಳಾ ಸಬಲೀಕರಣ ಕೋಶದ ಸಂಚಾಲಕ ಅಮೂಲ್ಯ ಆಯೋಜಿಸಿದ್ದರು. ಪ್ರಾಧ್ಯಾಪಕ ಡಾ. ತೇಜಸ್ವಿನಿ, ಉಪನ್ಯಾಸಕರುಗಳಾದ ರೂಪ, ಶಾಲಿನಿ, ವಿದ್ಯಾರ್ಥಿ ಪ್ರತಿನಿಧಿ ಐಶ್ವರ್ಯ, ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

### ಮಣಿಪಾಲ್ ಜಂಕ್ಷನ್‌ನ ಫ್ಲೈ ಓವರ್ ಬ್ರಿಡ್ಜ್ ಕಾಮಗಾರಿ ಸ್ಥಳಕ್ಕೆ ಯದುವೀರ್ ಭೇಟಿ

# ಫ್ಲೈ ಓವರ್ ಬ್ರಿಡ್ಜ್ ಕಾಮಗಾರಿ ಪರಿಶೀಲಿಸಿದ ಸಂಸದ




ಮೈಸೂರು:ಮೈಸೂರು-ಕೊಡಗು ಲೋಕ ಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮ ರಾಜ ಒಡೆಯರ್ ಅವರು ಶನಿವಾರ ನಗರದ ಕೆಂಪೇಗೌಡ ವೃತ್ತ (ಮಣಿಪಾಲ್ ಜಂಕ್ಷನ್) ನಲ್ಲಿ ನ್ಯಾಷನಲ್ ಹೈವೇ ಅಥಾರಿಟಿ ಆಫ್ ಇಂಡಿಯಾ ವತಿಯಿಂದ ನಡೆಯುತ್ತಿರುವ ಫ್ಲೈ ಓವರ್ ಬ್ರಿಡ್ಜ್ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಕಾಮಗಾರಿಗೆ ಸಂಬಂಧಿಸಿದ ಅನುಮೊ ೀದನೆ 2026ರ ಜ.19ರಂದು ನವದೆಹಲಿಯಲ್ಲಿ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಂತರ ನೀಡಲಾಗಿತ್ತು. ಅದರ ಅನ್ವಯವಾಗಿ ನಡೆಯು ತ್ತಿರುವ ಕಾಮಗಾರಿಗಳ ಪ್ರಗತಿಯನ್ನು ಸಂಸದ ಯದುವೀರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಮಾತನಾಡಿದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕಾಮಗಾರಿಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಎನ್‌ಎಚ್‌ಎಐ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಕಾಮಗಾರಿಗಳಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆ ಉಂಟಾಗದಂತೆ ನೋಡಿ ಕೊಳ್ಳಬೇಕು. ವಾರಾಂತ್ಯಗಳಲ್ಲಿ ಹೆಚ್ಚಿನ ವಾಹನ ಸಂಚಾರ ಇರುವುದರಿಂದ ಹೆಚ್ಚುವರಿ ಟ್ರಾಫಿಕ್ ಪೊಲೀಸರನ್ನು ನಿಯೋಜಿಸುವ ಬಗ್ಗೆ ಟ್ರಾಫಿಕ್ ಪೊಲೀಸ್ ಅಧಿಕಾರಿಗಳೊಂದಿಗೆ ಮಾತನಾಡು ತ್ತೇನೆ. ಜೊತೆಗೆ ಕಾಮಗಾರಿಗಳು ಅತ್ಯುತ್ತಮ ಗುಣಮಟ್ಟದಲ್ಲಿ ನಡೆಯಬೇಕು ಹಾಗೂ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿ ನಿರ್ವಹಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದು ಹೇಳಿದರು.

ಈ ಯೋಜನೆಯಿಂದ ಈ ಜಂಕ್ಷನ್ ನಲ್ಲಿ ರುವ ಟ್ರಾಫಿಕ್ ಬಾಟಲ್ ನೇಕ್ ಸಮಸ್ಯೆ ನಿವಾ ರಣೆಯಾಗಲಿದೆ. ಜೊತೆಗೆ ಮೈಸೂರು ಬೆಂಗ ಳೂರು ರಸ್ತೆಯ ಪ್ರವೇಶ ಹಾಗೂ ನಿರ್ಗಮನ ವ್ಯವಸ್ಥೆಯನ್ನೂ ಈ ಯೋಜನೆಯಡಿ ಸುಧಾರಿಸಲಾಗುತ್ತದೆ. ಇದರಿಂದ ಈ ರಸ್ತೆಯನ್ನು ಬಳಸುವ ಎಲ್ಲಾ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾ ಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಎನ್‌ಎಚ್‌ಎಐ ಯೋಜನಾ ನಿರ್ದೇಶಕ , ಮಹಾನಗರ ಪಾಲಿಕೆಯ ಇಂಜಿನಿಯರ್ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳು ಉಪಸ್ಥಿತರಿದ್ದರು.

## ವಿಕಸಿತ ಭಾರತದ ಕಲ್ಪನೆ ಎಲ್ಲರಿಗೂ ತಿಳಿಸಿ: ಯದುವೀರ್



ಮೈಸೂರು: ಕೇಂದ್ರದ ನರೇಂದ್ರಮೋದಿಯವರ ವಿಕಸಿತ, ಸದೃಢ ಭಾರತದ ಕಲ್ಪನೆಯನ್ನು ಪ್ರತಿಯೊಬ್ಬ ಜನರಿಗೂ ತಲುಪುವಂತೆ ಮಾಡುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕಿದೆ ಎಂದು ಸಂಸದ ಯಧುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗ್ರಾಮಾಂತರ ಬಿಜೆಪಿಯಿಂದ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ನೇತೃತ್ವದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೃಷಿ ಒಪ್ಪಂದದ ಕುರಿತು ಕಾಂಗ್ರೆಸ್ ಪಕ್ಷ ಸೃಷ್ಟಿಸುತ್ತಿರುವ ಗೊಂದಲ ಮತ್ತು ರೈತರಿಗೆ ಆಗುವ ಅನುಕೂಲ ಹಾಗೂ ಅನಾನುಕೂಲದ ರೈತ ಮೋರ್ಚಾ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪ್ರತಿಪಕ್ಷವಾದ ಕಾಂಗ್ರೆಸ್ ಬಿಜೆಪಿಯ ಪ್ರತಿಯೊಂದು ಕಾರ್ಯವನ್ನು ವಿರೋಧಿಸುವ ಮೂಲಕ ಜನರ ಹಿತವನ್ನು ಮರೆಯುತಿವೆ. ಹೀಗಾಗಿ ಬಿಜೆಪಿ ಕಾರ್ಯಕರ್ತರು ಮೋದಿಯವರ ಚಿಂತನೆಯನ್ನು ತಿಳಿಸುವ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ರಾಜ್ಯ ರೈತ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಡಾ.ನವೀನ್ ಮಾತನಾಡಿ, ಭಾರತ ಅಮೇರಿಕಾದ ಕೃಷಿ ಒಪ್ಪಂದ ರೈತರ ಪರ ಇದೆ. ಆದರೆ, ಸುಖಾ ಸುಮ್ಮನೆ ಕಾಂಗ್ರೆಸ್ ಪಕ್ಷ ಹಾಗೂ ಇತರರು ಆರೋಪ ಮಾಡುತ್ತಾರೆ. ನಾವೆಲ್ಲ ಚಿಂತನೆ ಮಾಡಬೇಕು. ಗ್ರಾಮೀಣ ಭಾಗದ ರೈತರಿಗೆ ತಮ್ಮ ಆರ್ಥಿಕತೆ ಅಭಿವೃದ್ಧಿ ಮಾಡಲು ಗುಡಿ ಕೈಗಾರಿಕೆ ಮಾಡಲು ಸ್ವ ಸಹಾಯ ಸಂಘಗಳನ್ನು ಮಾಡಲು ಸ್ಕಿಲ್ ಡೆವಲಪ್ ಮೆಂಟ್ ಮಾಡಿಕೊಂಡು ವಸ್ತುಗಳನ್ನು ಮಾರಾಟ ಮಾಡಲು ಉಪಯೋಗ ಆಗುತ್ತದೆ. ಮಹಿಳೆಯರು ಸ್ವಯಂ ಆಗಿ ತಾವು ಬೆಳೆದ ಉತ್ಪನ್ನ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಬಹುದು. ಬೇರೆ ಒಪ್ಪಂದಗಳಿಗೆ ಹೋಲಿಸಿದರೆ ಈ ಒಪ್ಪಂದ ಬೇರೆ ವಿಶೇಷ. ಕೇಂದ್ರ ಸರಕಾರ ಯಾವುದೇ ರಾಜಿ ಮಾಡಿಕೊಂಡಿಲ್ಲ. ಯಾವ ಟ್ರಾಂಪ್ ಗೂ ತಲೆಬಾಗಿಲ್ಲ. ನಮ್ಮ ದೇಶದ ಘನತೆಯನ್ನು ಇಟ್ಟುಕೊಂಡು ಟ್ರೇಡ್ ಅಗ್ರಿಮೆಂಟ್ ಆಗಿದೆ. ನಮಗೆ ರಾಷ್ಟ್ರವೇ ಮೊದಲು, ಕೇವಲ ಭದ್ರತೆಗೆ ಸೀಮಿತ ಇಲ್ಲ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಉತ್ಪನ್ನಗಳಿಗೆ ಡಬಲ್ ಬೆಲೆ ಆಗುವ ಕೆಲಸ ಆಗಿದೆ ಎಂದರು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಬಿಜೆಪಿ ಮಾಜಿ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಇನ್ನಿತರರು ಉಪಸ್ಥಿತರಿದ್ದರು.

# ಮೈಸೂರಲ್ಲಿ ಒಡನಾಡಿಗಳ ಜಾಗೃತಿ ಯೋಗ ಪ್ರದರ್ಶನ



ಮೈಸೂರು: ಹೆಣ್ಣು ಮಕ್ಕಳು, ಮಹಿಳೆಯರ ಕಳ್ಳ ಸಾಗಾಣೆ, ಲೈಂಗಿಕ ಶೋಷಣೆ, ಯುದ್ಧದ ವಿರುದ್ಧ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಒಡನಾಡಿ ಸೇವಾಸಂಸ್ಥೆ ಆಯೋಜಿಸಿದ್ದ ಯೋಗ ಸ್ಟಾಪ್ ಟ್ರಾಫಿಕಿಂಗ್ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ನೂರಾರು ಭಾಗವಹಿಸಿ ಗಮನ ಸೆಳೆದರು.

ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾದಲ್ಲಿ ಒಡನಾಡಿ ಸೇವಾ ಸಂಸ್ಥೆ ಆಯೋಜಿಸಿದ್ದ 18ನೇ ಅಂತಾರಾಷ್ಟ್ರೀಯ ಯೋಗ ಕಾರ್ಯಕ್ರಮ ಯೋಗ ಸ್ಟಾಪ್ ಟ್ರಾಫಿಕಿಂಗ್ ಮಾನವೀಯ ಸಮತೆಗಾಗಿ ಒಂದು ದಿನ- ಒಂದು ಧ್ವನಿ, ಜಾಗೃತಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಯೋಗಾಸನ ಮಾಡುವ ಮೂಲಕ ಜನಾಂದೋಲನ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿ, ಮಹಿಳೆಯ ಮೇಲೆ ಸಮಾಜದಲ್ಲಿ ಸಾಕಷ್ಟು ಶೋಷಣೆಗಳು ನಡೆಯುತ್ತಿದ್ದು, ಮಾನವ ಕಳ್ಳ ಸಾಗಾಣೆ ನಡೆಯುತ್ತಿದೆ. ಇದರ ವಿರುದ್ಧ ಹೋರಾಡು ವುದು ಸಮಾಜದ ಹಾಗೂ ಪ್ರತಿಯೊಬ್ಬರ ಜವಬ್ದಾರಿ ಮತ್ತು ಬದ್ಧತೆ ಈ ನಿಟ್ಟಿನಲ್ಲಿ ಒಡನಾಡಿ ಸಂಸ್ಥೆ ಸಾಕಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದೆ ಎಂದರು.

ಒಡನಾಟಿಯ ಸ್ಟ್ಯಾನ್ಲಿ ಮಾತನಾಡಿ, ಒಡನಾಡಿ ಕಳೆದ ಮೂರು ದಶಕಗಳಿಂದ ವಾನವ ಸಾಗಾಣಿಕೆ, ಲೈಂಗಿಕ ದೌರ್ಜನ್ಯ ಹಾಗೂ ಸಾವಾಜಿಕ ಸಮಸ್ಯೆಗಳು ಶೋಷಣೆ ವಿರುದ್ಧ ಹೋರಾಡುತ್ತಾ, ಸಮಷ್ಟಿ ಪ್ರಜ್ಞೆಯಿಂದ ಕಾರ್ಯ ನಿರ್ವಹಿಸುತ್ತಿದೆ. ಕಳೆದ 18 ವರ್ಷಗಳಿಂದ ಯೋಗ ಸ್ಟಾಪ್ ಟ್ರಾಫಿಕಿಂಗ್ ಎಂಬ ಆಶಯದಲ್ಲಿ ಯೋಗವನ್ನು ಅಸ್ತ್ರವನ್ನಾಗಿಟ್ಟುಕೊಂಡು, ಸಾಧ್ವಿಕವಾದ ಪ್ರತಿರೋಧ, ಪ್ರತಿಭಟನೆ ನಡೆಸುತ್ತಿದ್ದೇವೆ. ಮಾನವೀಯ ಮೌಲ್ಯವನ್ನು ಕ್ರೋಢಿಕರಿಸಿ, ಸಮಾಜದಕ್ಕೆ ಸಂದೇಶವನ್ನು ರವಾನಿಸಿ, ಸಮಾನರತೆಗಾಗಿ ಹೋರಾಡುವ ಅವಶ್ಯಕತೆ ಯಿದೆ ಎಂದರು. ಮೈಸೂರು ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಪ್ರಧಾನ ಕಾಯದರ್ಶಿ ಹೊಸಕೋಟೆ ಬಸವರಾಜು, ಯೋಗಾ ಒಕ್ಕೂಟದ ಪ್ರತಿನಿಧಿ ಡಾ.ಮೂರ್ತಿ, ಸಮತ ವೇದಿಕೆ ಪ್ರೊ.ಲತಾಬಿದ್ದಪ್ಪ, ಒಡನಾಡಿಯ ಹೆಣ್ಣು ಮಕ್ಕಳ ಪ್ರತಿನಿಧಿ ಲಲಿತಾ ಮತ್ತಿತರರಿದ್ದರು.

## ಇಂದು ಮಹಿಳೆಯರಿಗೆ ನಾನಾ ಸ್ಪರ್ಧೆ



ಮೈಸೂರು: ನಗರದ ಶ್ರೀರಾಂಪುರ ಶ್ರೀ ಚನ್ನಕೇಶವಸ್ವಾಮಿ ವಿದ್ಯಾ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಚನ್ನಕೇಶವಸ್ವಾಮಿ ಪ್ರೌಢಶಾಲೆ, ಅಶೋಕ ಪ್ರೌಢಶಾಲೆ, ಅಶೋಕಪುರಂ ಹಾಗೂ ಸಿ.ಕೆ. ಡ್ರೀಮ್ ಲ್ಯಾಂಡ್‌ಪ್ರೀ ಸ್ಕೂಲ್‌ಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಮಹಿಳಾ ಅಂತಾರಾಷ್ಟ್ರೀಯ ದಿನಾಚರಣೆ ಪ್ರಯುಕ್ತ ಭಾನುವಾರ (ಮಾ.15) ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಶ್ರೀರಾಂಪುರ, ಪರಸಯ್ಯನಹುಂಡಿ, ಶ್ರೀ ಚನ್ನಕೇಶವಸ್ವಾಮಿ ಪ್ರೌಢಶಾಲೆಯಲ್ಲಿ 16 ವರ್ಷಕ್ಕೂ ಮೇಲ್ಪಟ್ಟ ಮಹಿಳೆಯರಿಗೆ ವಿವಿಧ ಕ್ರೀಡಾ ಸ್ಪರ್ಧಾ ಚಟುವಟಿಕೆಗಳನ್ನು (ರಂಗೋಲಿ ಸ್ಪರ್ಧೆ,ಹಗ್ಗ ಜಗ್ಗಾಟ, ಥ್ರೋಬಾಲ್, ಮ್ಯೂಸಿಕಲ್ ಚೇರ್, ಕೆರೆ ದಡ ಮತ್ತು ಗುಂಡು ಎಸೆತ ಸ್ಪರ್ಧೆಗಳು)ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಆಡಳಿತಾಧಿಕಾರಿ ಸುಶೀಲಾ ಪವಾರ್ ತಿಳಿಸಿದರು.

ಎಲ್ಲಾ ಸ್ಪರ್ಧೆಗಳಲ್ಲೂ ಮಹಿಳೆಯರು ಉಚಿತವಾಗಿ ಭಾಗವಹಿಸಬಹುದಾಗಿದೆ. ಮಾ.22ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಸ್ಪರ್ಧಾ ವಿಜೇತರಿಗೆ ಆಕರ್ಷಕ ಬಹುಮಾನಗಳನ್ನು ಗಣ್ಯ ಅತಿಥಿಗಳು ವಿತರಿಸುವರು. ಲಲಿತಾ ಜಿ.ಟಿ.ದೇವೇಗೌಡ, ವಿಭಾವಸು ದೀಪಕ್, ಪಲ್ಲವಿ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.ಆಸಕ್ತರು ಮಾಹಿತಿಗಾಗಿ ಮೊ: 96114,95551, 9611545551 ಅನ್ನು ಸಂಪರ್ಕಿಸಬಹುದು. ಸಂಸ್ಥೆಯ ದಿವ್ಯಶ್ರೀ, ಪೂಜಾ, ನಂದಿನಿ ಸುದ್ದಿಗೋಷ್ಠಿಯಲ್ಲಿ ಇದ್ದರು.

## ಹುತಾತ್ಮ ಯೋಧರ ತಾಯಂದಿರು, ಮಡದಿಯರಿಗೆ ಸನ್ಮಾನ

ಮೈಸೂರು: ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಹುತಾತ್ಮ ಯೋಧರ ತಾಯಂದಿರು ಮತ್ತು ಮಡದಿಯರನ್ನು ಸನ್ಮಾನಿಸಿದರು.

ನಗರದ ಪುರಭವನದಲ್ಲಿ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸೃಷ್ಟಿಯಲ್ಲಿ ಗಂಡು, ಹೆಣ್ಣು ಪ್ರಮುಖರು. ಇಬ್ಬರಲ್ಲಿ ಒಬ್ಬರಿಲ್ಲದೇ ಇದ್ದರೇ ಸೃಷ್ಟಿಯೇ ಅಪೂರ್ಣ. ಇಬ್ಬರು ಸಮಾನರಾದರೂ ಸಮಾಜದಲ್ಲಿ ಹಲವಾರು ವಿಷಯದಲ್ಲಿ ಹೆಣ್ಣನ್ನು ಧಮನ ಮಾಡುವ ಕೆಲಸಗಳಯ ನಡೆಯುತ್ತದೆ. ರಾಜಕೀಯವಾಗಿ ಅಧಿಕಾರ ಪಡೆಯುವ ಸಂದರ್ಭದಲ್ಲಿ ಗಂಡು ಹೆಣ್ಣಿನ ಜಿದ್ದಾಟದಲ್ಲಿ ಮಹಿಳೆಯರಿಗೆ ಅದು ಸಾಧ್ಯವಾಗುವುದಿಲ್ಲ. ಮಹಿಳೆಯರು, ಮಕ್ಕಳು ಮತ್ತು ಮನೆಯನ್ನು ಪೋಷಣೆ ಮಾಡುತ್ತಾರೆ. ಅವರನ್ನು ಕಟುಂಬಕ್ಕೆ ಸೀಮಿತ ಮಾಡಿ ಕೆಲವು ಪುರುಷರು ಈ ರೀತಿ ಕಟ್ಟುಪಾಡು ಮಾಡಿದ್ದಾರೆ. ಅದಕ್ಕೆ ಧರ್ಮದ ತಳುಕು ಹಾಕಿದ್ದಾರೆ. ಮಹಿಳೆ ಆಗುವುದಕ್ಕೂ ಮುನ್ನ ಅವರೂ ಮನುಷ್ಯೆ ಎಂಬದನ್ನು ಅರಿತುಕೊಳ್ಳಬೇಕು. ಸಮಾಜಕ್ಕೆ ಏನಾದರೂ ನೀಡಬೇಕು ಎಂಬ ಹಂಬಲಗಳಿವೆ. ಈ ನಿಟ್ಟಿನಲ್ಲಿ ಮಹಿಳೆಯರ ಆಕಾಂಕ್ಷಿಗಳನ್ನು ಹತ್ತಿಕ್ಕಿವ ಕೆಲಸ ಮಾಡಬಾರದು ಎಂದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಮಾತನಾಡಿ, ಹಕ್ಕು, ನ್ಯಾಯ, ಕ್ರಮ ಈ ವರ್ಷದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಮುಖ್ಯ ಸಂದೇಶವಾಗಿದ್ದು, ಹಣ್ಣು ತನ್ನ ಹಕ್ಕಿನ ಬಗ್ಗೆ ತಿಳಿದುಕೊಳ್ಳಬೇಕು ಇಲ್ಲದಿದ್ದರೆ ಅದು ಸಾವಿಗೆ ಸಮಾನ. ಅಂಬೇಡ್ಕರ್ ಹೇಳಿರುವಂತೆ ಶಿಕ್ಷಣ ಮಹಿಳೆಯರಿಗೆ ಶಕ್ತಿಯಾಗಿದೆ. ಅದನ್ನು ಪ್ರತಿಯೊಬ್ಬರೂ ಪಡೆಯಬೇಕು ಎಂದರು. ಮೈಸೂರು ಜಿಲ್ಲಾ ಪತ್ರಕರ್ತರ ಅಧ್ಯಕ್ಷ ಕೆ.ದೀಪಕ್, ಸಮಿತಿಯ ರಾಜ್ಯಾಧ್ಯಕ್ಷೆ ವಿಪಿ.ಸುಶೀಲಾ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ರಾಜೇಶ್, ಎಂ.ಪುಟ್ಟರಾಜು, ಅಮೀನ ಬೇಗಂ, ವೈ.ಬಿ.ಈಶ್ವರ್, ಪರಮೇಶ್, ಎನ್.ಕೆ.ಸುದರ್ಶನ್, ಹೆಚ್.ಟಿ.ಪಾರ್ವತಿ ಇನ್ನಿತರರು ಉಪಸ್ಥಿತರಿದ್ದರು.



## ಆಹಾರ ಕಿಟ್ ವಿತರಿಸಿದ ಶಾಸಕ



ಮೈಸೂರು: ರಂಜಾನ್ ಹಬ್ಬದ ಪ್ರಯುಕ್ತ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ 15 ಸಾಮಾಗ್ರಿಗಳನ್ನು ಒಳಗೊಂಡ ಆಹಾರ ಕಿಟ್ ಅನ್ನು 3,000ಕ್ಕೂ ಹೆಚ್ಚು ಮುಸಲ್ಮಾನ್ ಕುಟುಂಬದವರಿಗೆ ವಿತರಣೆ ಮಾಡಿದರು.

ಬಳಿಕ ಮಾತನಾಡಿ, ರಂಜಾನ್ ವೇಳೆಯಲ್ಲಿ ಒಂದು ತಿಂಗಳ ಕಾಲ ಎಲ್ಲರೂ ಶ್ರದ್ಧಾ ಭಕ್ತಿಯ ಪ್ರಾರ್ಥನೆ ಸಲ್ಲಿಸುತ್ತಾರೆ. ಪ್ರತಿ ವರ್ಷದಂತೆ ಈ ಬಾರಿಯೂ ಅಂತಹವರ ಕುಟುಂಬಕ್ಕೆ ಅಗತ್ಯ ಆಹಾರ ಕಿಟ್ ನೀಡಿ ಶುಭ ಕೋರಲಾಗುತ್ತಿದೆ. ನಮ್ಮದೂ ಎಲ್ಲಾ ಸಮುದಾಯದ ಪರವಾಗಿ ಇರುವ ಸರ್ಕಾರವಾಗಿದೆ. ಅದರಲ್ಲೂ ಅಲ್ಪಸಂಖ್ಯಾತರ ಹಿತಕಾಪಾಡಲು ಕಾಂಗ್ರೆಸ್ ಬದ್ಧವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಸುಹೇಲ್ ಬೇಗ್ ಉಪಸ್ಥಿತರಿದ್ದರು.

## ಅಭಿವೃದ್ಧಿ ವಿಚಾರದಲ್ಲಿ ಸುಳ್ಳು ಮಾಹಿತಿ



ಮೈಸೂರು: ಸಾಲಿಗ್ರಾಮ ತಾಲೂಕಿನ ಕೆರೆಯ ಕೋಡಿಯಿಂದ ಹಳ್ಳಿ ಮೈಸೂರು ರಸ್ತೆಯವರೆಗೆ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗೆ ರೈತರು ಜಮೀನು ನೀಡಲು ಮುಂದಾಗುತ್ತಿಲ್ಲವೆಂದು ಕೆ.ಆರ್.ನಗರ ಶಾಸಕ ಡಿ.ರವಿಶಂಕರ್ ವಿಧಾನಸಭೆ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಜಿಪಂ ಮಾಜಿ ಸದಸ್ಯ ಸಾ.ರಾ.ನಂದೀಶ್ ಆರೋಪಿಸಿದರು.

ಸಾಲಿಗ್ರಾಮದ ಮಾರ್ಗದಲ್ಲಿ 165 ಕಿ.ಮೀ. ರಸ್ತೆ ಅಭಿವೃದ್ಧಿಯಾಗಿದೆ.ಆದರೆ, 600 ಮೀಟರ್‌ನಷ್ಟು ಅಭಿ ವೃದ್ಧಿಯಾಗಿಲ್ಲ. ಆದರೆ, ರೈತರು ಜಮೀನು ನೀಡುತ್ತಿಲ್ಲ. ಟೆಂಪೋ ಮಾಲೀಕರ ಸಂಘದವರ ಸಹಕಾರ ನೀಡುತ್ತಿಲ್ಲ, ಪರಿಹಾರ ಪಡೆದವರು ಜಮೀನು ನೀಡುತ್ತಿಲ್ಲ ಎಂದು ಹೇಳಿದ್ದಾರೆ. ಅಲ್ಲದೇ, ಸಭೆ ನಡೆಸಿ ಮಾಹಿತಿ ನೀಡಿದ್ದೇನೆ ಎಂದು ಹೇಳಿದ್ದಾರೆ.

ಯಾವಾಗ ಸಭೆ ನಡೆಸಿದ್ದಿರಾ? ಯಾವ ರೈತರು ಜಮೀನು ನೀಡುತ್ತಿಲ್ಲ ಎಂದು ಹೇಳಲಿ ಎಂದು ಪ್ರಶ್ನಿಸಿದರು.ಕೆ.ಆರ್.ನಗರ ಜನತೆ, ನಿಮ್ಮನ್ನು ನಂಬಿ ಗೆದ್ದು ಕಳುಹಿಸಿದ್ದಾರೆ. ಆದರೆ,ಅಭಿವೃದ್ಧಿ ವಿಚಾರದಲ್ಲಿ ದಿಕ್ಕು ತಪ್ಪಿಸುವ ಕೆಲಸ ಮಾಡಬೇಡಿ. ನಿಮ್ಮ ಪಕ್ಷದವರೇ ಪರಿಹಾರ ಪಡೆದು, ಜಮೀನು ನೀಡಲು ಸರಕಾರಕ್ಕೆ ಸತಾಯಿಸುತ್ತಿದ್ದಾರೆ. ಆ ರಸ್ತೆಯಲ್ಲಿರುವ ತಮ್ಮ ತೋಟದಲ್ಲಿ 50 ವರ್ಷಕ್ಕಿಂತ ಹಳೆಯ ತೆಂಗಿನ ಮರಗಳನ್ನು ಕಡಿದು ಹಾಕಲಾಗಿದೆ. ಫಲ ನೀಡುತ್ತಿದ್ದ ಮರಗಳನ್ನು ಕಡಿಯಲು ಅಧಿಕಾರಿಗಳಿಗೆ ಅನುಮತಿ ನೀಡಿದವರು ಯಾರು? ಎಂದು ಕಿಡಿಕಾರಿದರು. ಸಾ.ರಾ.ಮಹೇಶ್ ಸಚಿವರಾಗಿದ್ದಾಗ, ಸಾಲಿಗ್ರಾಮ ರಸ್ತೆಯ ಅಭಿವೃದ್ಧಿ ಕಾಮಗಾರಿಗಳು ನಡೆದಿತ್ತು. ಶೇ.30 ರಷ್ಟು ಬಾಕಿ ಇರುವ ಕಾಮಗಾರಿಯ ಬಗ್ಗೆ, ವಿಧಾನ ಸಭೆಯಲ್ಲಿ ಸುಳ್ಳು ಮಾಹಿತಿ ನೀಡಿ ಕ್ಷೇತ್ರದ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಿರಾ? ಇಂತಹ ಸುಳ್ಳು ಮಾಹಿತಿಯನ್ನು ಹಂಚಿಕೊಳ್ಳಲು ವಿಧಾನಸಭೆ ಯಲ್ಲಿ ಸ್ಪೀಕರ್ ಅನುಮತಿ ನೀಡಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್.ಎಸ್.ಮಂಜುನಾಥ್, ಮಹೇಶ್, ಕರುಣಕರ್, ನಾಗೇಂದ್ರ ಇದ್ದರು

## ಎಚ್.ಡಿ.ಕೋಟೆ: ನೀರು ಪೂರೈಸದ ಪಿಡಿಒ ವಿರುದ್ಧ ಗ್ರಾಮಸ್ಥರ ಆಕ್ರೋಶ



ಎಚ್.ಡಿ.ಕೋಟೆ: ಸಮರ್ಪಕವಾಗಿ ಕುಡಿಯುವ ನೀರು ಒದಗಿಸುವಂತೆ ಒಂದೆರೆಡು ತಿಂಗಳುಗಳಿಂದ ಎಷ್ಟೇ ಮನವಿ ಮಾಡಿದರೂ, ಸಮಸ್ಯೆ ಬಗೆಹರಿಸಲು ಮುಂದಾಗದ ಗ್ರಾ.ಪಂ ಪಿಡಿಒ ವಿರುದ್ಧ ಸಿದ್ದಾಪುರ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚಕ್ಕೋಡನಹಳ್ಳಿ ಗ್ರಾ.ಪಂ ವ್ಯಾಪ್ತಿಯ ಸಿದ್ದಾಪುರ ಗ್ರಾಮದಲ್ಲಿ ಸಾವಿರ ಜನಸಂಖ್ಯೆಯಿದೆ. ಕುಡಿಯುವ ನೀರು ಒದಗಿಸುವಂತೆ ಸಾಕಷ್ಟು ಬಾರಿ ಮನವಿ ಮಾಡಿದರೂ ಪ್ರಯೋಜನವಾಗದ ಹಿನ್ನೆಲೆ, ಗ್ರಾಮಸ್ಥರೆಲ್ಲರೂ ಒಗ್ಗೂಡಿ ಖಾಲಿ ಕೊಡಗಳನ್ನು ಪ್ರದರ್ಶಿಸಿ, ಗ್ರಾ.ಪಂ ವಿರುದ್ಧ ದಿಕ್ಕಾರದ ಘೋಷಣೆ ಕೂಗುತ್ತಿದ್ದು, ಪಿಡಿಒ ಗ್ರಾಮಕ್ಕೆ ಆಗಮಿಸುವಂತೆ ಪಟ್ಟು ಹಿಡಿದದ್ದರು. ಪಿಡಿಒ ಸೋಲೋಮನ್ ರಾಜು ಬರುತ್ತಿದ್ದಂತೆಯೇ ಆಕ್ರೋಶಗೊಂಡ ಜನರು ಕೆಲ ಕಾಲ ಮಾತಿನ ಚಕಮಕಿ ನಡೆಸಿದರು. ಇನ್ನೆರಡು ದಿನಗಳಲ್ಲಿ ಸಮಸ್ಯೆ ಬಗೆಹರಿಸುತ್ತೇನೆ ಎಂದು ಪ್ರತಿಭಟನಾ ನಿರತರನ್ನು ಮನವೊಲಿಸಲು ಪಿಡಿಒ ಮುಂದಾಗುತ್ತಿದ್ದಂತೆ, ಪ್ರತಿಭಟನಾ ನಿರತರ ಆಕ್ರೋಶ ದುಪ್ಪಟ್ಟಾಯಿತು. ತಕ್ಷಣವೇ ಒಂದು ಟ್ಯಾಂಕರ್ ನೀರು ತರಿಸಿದ ಸೋಲೆಮನ್ ರಾಜು ಗ್ರಾಮಸ್ಥರು ದಾಹತಣಿಸಲು ಮುಂದಾದರು. ಇನ್ನೆರಡು ದಿನಗಳಲ್ಲಿ ಸಮರ್ಪಕ ನೀರು ಒದಗಿಸದಿದ್ದರೆ ಪ್ರತಿಭಟನೆ ತೀವ್ರಗೊಳಿಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದರು.

ಗ್ರಾಮದ ಮುಖಂಡ ಗಣೇಶ್ ನಾಯಕ ಮಾತನಾಡಿ, ಕಾಡಂಚಿನ ಗ್ರಾಮವಾದ ಸಿದ್ದಾಪುರದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ವಾಸಿಸುತ್ತಾರೆ. ಆದರೆ ಗ್ರಾಮದಲ್ಲಿ ಹಲವು ತಿಂಗಳಿಂದ ಕುಡಿಯುವ ನೀರಿನ ಸಮಸ್ಯೆ ಇದೆ. ನೀರಿನ ಸಮಸ್ಯೆ ಬಗೆಹರಿಸುವಂತೆ ಸಾಕಷ್ಟು ಬಾರಿ ಗ್ರಾಮಸ್ಥರು ಪಿಡಿಒ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಇಂದು ಪ್ರತಿಭಟನೆಗೆ ಮುಂದಾಗಿದ್ದೇವೆ ಎಂದರು. ಗ್ರಾಮಸ್ಥರಾದ ಸಿದ್ದರಾಜು, ಸುರೇಶ್, ಸುನೀಲ್, ವೆಂಕ ಟೇಶ್, ಶಂಕರ ನಾಯಕ್, ಯೋಗೇಶ್, ವಿನೋದ್, ಜಯರಾಮ್, ಮನೋಜ್, ಮಹದೇವಸ್ವಾಮಿ, ಬಸವರಾಜು, ನೀಲಿ ಬಾಯಿ, ಲಕ್ಷ್ಮಿ ಬಾಯಿ, ನಾಗನಾಯಕ್, ಪದ್ಮ, ರುದ್ರೇಶ್, ಮಂಜು, ಶಿಲ್ಪಾ, ಕೃಷ್ಣ, ಲಕ್ಷ್ಮಣ ನಾಯಕ್, ಕುಮಾರ್ ಸೇರಿದಂತೆ ಗ್ರಾಮಸ್ಥರು ಇದ್ದರು.

### ಸ್ವಚ್ಛ ಸರ್ವೇಕ್ಷಣೆ 2026 ಕ್ಕೆ ಸಿದ್ಧತೆ

# ಎಲ್ಲೆಂದರಲ್ಲಿ ಕಸ ಎಸೆದರೆ ಬೀಳಲಿದೆ ದಂಡ





ಗುಂಡ್ಲುಪೇಟೆ: ಪಟ್ಟಣವನ್ನು ಕಸ ಮುಕ್ತಗೊಳಿಸಲು ಮತ್ತು 'ಸ್ವಚ್ಛ ಸರ್ವೇಕ್ಷಣೆ 2026' ರಲ್ಲಿ ಉನ್ನತ ಶ್ರೇಯಾಂಕ ಪಡೆಯುವ ನಿಟ್ಟಿನಲ್ಲಿ ಪುರಸಭೆ ಆಡಳಿತವು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ. ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಎಲ್ಲೆಂದರಲ್ಲಿ ಕಸ ಸುರಿಯುವವರ ಮೇಲೆ ನಿಗಾ ಇರಿಸಿ ದಂಡ ವಿಧಿಸಲು ಆಡಳಿತಾಧಿಕಾರಿ ದಿನೇಶ್ ಕುಮಾರ್ ಮೀನಾ ಆದೇಶಿಸಿದ್ದಾರೆ.

**ಸಿಸಿಟಿವಿ ಕಣ್ಗಾವಲು ಎಲ್ಲೆಲ್ಲಿ?**

ಪಟ್ಟಣದ ಪ್ರಮುಖ ವೃತ್ತಗಳು ಹಾಗೂ ಕಸದ ಸಮಸ್ಯೆ ಹೆಚ್ಚಿರುವ ಈ ಕೆಳಗಿನ ಸ್ಥಳಗಳಲ್ಲಿ ಈಗಾಗಲೇ ಸಿಸಿಟಿವಿ ಅಳವಡಿಸಲಾಗಿದೆ: ಕೆಇಬಿ ರಸ್ತೆ ಮತ್ತು ಶಿವಾನಂದ ವೃತ್ತ, ಪುರಸಭೆ ಕಚೇರಿ ಮುಂಭಾಗ, ನಾಯಕರ ಬೀದಿ ಮತ್ತು ಮದ್ದಾನೇಶ್ವರ ಸ್ಕೂಲ್ ರಸ್ತೆ, ಅಂಬೇಡ್ಕರ್ ವೃತ್ತ, ಈ ಸ್ಥಳಗಳಲ್ಲಿ ಕಸ ಹಾಕುವ ಪ್ರಮಾಣ ಕಡಿಮೆಯಾದ ನಂತರ, ಈ ಕ್ಯಾಮೆರಾಗಳನ್ನು ಕಸದ ಸಮಸ್ಯೆ ಇರುವ ಪಟ್ಟಣದ ಇತರ ಭಾಗಗಳಿಗೆ ಸ್ಥಳಾಂತರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆಡಳಿತಾಧಿಕಾರಿ ದಿನೇಶ್ ಕುಮಾರ್ ಮೀನಾ ಮತ್ತು ಪುರಸಭೆ ಮುಖ್ಯ ಅಧಿಕಾರಿ ಎಸ್ ಸರವಣ ಮನವಿ ಸಾರ್ವಜನಿಕರು ಎಲ್ಲೆಂದರಲ್ಲಿ ಕಸ ಬಿಸಾಡದೆ, ಪುರಸಭೆಯ ಕಸ ಸಂಗ್ರಹಣಾ ವಾಹನಗಳಿಗೆ ಮಾತ್ರ ಕಸ ನೀಡಬೇಕು. ಸಿಸಿಟಿವಿ ದೃಶ್ಯಾವಳಿಗಳ ಮೂಲಕ ನಿಯಮ ಉಲ್ಲಂಘಿಸುವವರನ್ನು ಗುರುತಿಸಿ ಅವರಿಗೆ ದಂಡ ವಿಧಿಸಲಾಗುವುದು. ಪ್ರತಿಯೊಬ್ಬ ನಾಗರಿಕರು ಸ್ವಚ್ಛ ಸರ್ವೇಕ್ಷಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಗುಂಡ್ಲುಪೇಟೆಯ ಗೌರವ ಹೆಚ್ಚಿಸಬೇಕೆಂದು ಅಧಿಕಾರಿಗಳು ಕೋರಿದ್ದಾರೆ.

**ನಮ್ಮ ಪಟ್ಟಣಕ್ಕೆ ಪ್ರಶಸ್ತಿ ಸಿಗಲಿ**

ಭಾರತಾದ್ಯಂತ ನಗರ ಸ್ಥಳೀಯ ಸಂಸ್ಥೆಗಳ ನಡುವೆ ಸ್ವಚ್ಛತಾ ಸ್ಪರ್ಧೆ ನಡೆಯಲಿದ್ದು, ಮನೆ ಮನೆ ಕಸ ಸಂಗ್ರಹಣೆ, ಪ್ಲಾಸ್ಟಿಕ್ ನಿಷೇಧ, ಹಸಿ ಕಸದಿಂದ ಗೊಬ್ಬರ ತಯಾರಿಕೆ, ಸಾರ್ವಜನಿಕ ಶೌಚಾಲಯಗಳ ಸ್ವಚ್ಛತೆ ಹಾಗೂ ಪೌರಕಾರ್ಮಿಕರ ಆರೋಗ್ಯದಂತಹ ವಿಷಯಗಳ ಮೇಲೆ ಶ್ರೇಯಾಂಕ ನೀಡಲಾಗುತ್ತದೆ. ಗುಂಡ್ಲುಪೇಟೆ ಪಟ್ಟಣವು 'ಸ್ವಚ್ಛ ಪಟ್ಟಣ' ಎಂಬ ಹೆಗ್ಗಳಿಕೆಗೆ ಪಾತ್ರವಾಗಲು ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿದೆ.

# ಮಾ.15ರಂದು ರಾಮನಗರದಲ್ಲಿ "ಕೆಂಗಲ್ ಹನುಮಂತಯ್ಯ ನೆನಪು" ಕಾರ್ಯಕ್ರಮ

## * ಹನುಮಂತಯ್ಯ ಅವರು ಸ್ವಾಭಿಮಾನದ ರಾಜಕರಣಿ–ಕೆ.ಶೇಷಾದ್ರಿ

**ರಾಮನಗರ:** ಇದೇ ಮಾರ್ಚ್ 15ರಂದು ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ "ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ನೆನಪು" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.

ನಗರಸಭೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.



ದಕ್ಷತೆ ಮತ್ತು ಸ್ವಾಭಿಮಾನದ ರಾಜಕಾರಣಕ್ಕೆ ಹೆಸರಾಗಿದ್ದ ಕೆಂಗಲ್ ಅವರು ರಾಮನಗರ ತಾಲ್ಲೂಕಿನವರು. ಅವರ ವಿಚಾರ ಧಾರೆಗಳನ್ನು ಇಂದಿನ ಪೀಳಿಗೆಗೆ ತಿಳಿಸಕೊಡಬೇಕಾಗಿದೆ. ಮುಂದೆಯು ಇದು ಮುಂದುವರೆಯಬೇಕಾಗಿದೆ. ಹೀಗಾಗಿ ಕೆಂಗಲ್ ನೆನಪು ಎಂಬ ಕಾರ್ಯಕ್ರಮವನ್ನು ಜನ ಜಾಗೃತಿ ವೇದಿಕೆ ಹಾಗೂ ನಮ್ಮವರು ಸಂಘಟನೆಗಳು ಆಯೋಜಿಸಿರುವುದಾಗಿ ತಿಳಿಸಿದರು.

ಕೆಂಗಲ್ ಹನುಮಂತಯ್ಯ ಅವರು ರಾಜ್ಯದ ಪ್ರಥಮ ಚುನಾಯಿತ ಮುಖ್ಯಮಂತ್ರಿ. ರಾಮನಗರ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಬೆಂಗಳೂರನ್ನು ರಾಜಧಾನಿಯನ್ನಾಗಿ ಘೋಷಿಸಿದ ಕೀರ್ತಿ ಇವರಿಗಿದೆ. ರಾಜಧಾನಿ ಬೆಂಗಳೂರಿನಲ್ಲಿರುವ ವಿಧಾನಸೌಧ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ವಿಧಾನಸೌಧದ ಪ್ರವೇಶ ದ್ವಾರದಲ್ಲಿ " ಸರ್ಕಾರದ ಕೆಲಸ ದೇವರ ಕೆಲಸ" ಎಂದು ಬರೆಸಿದ್ದಾರೆ. ಜನಸೇವೆ ಬಗ್ಗೆ ಕೆಂಗಲ್ ಅವರಿಗಿದ್ದ ಬದ್ಧತೆಗೆ ಈ ವಾಕ್ಯ ಸಾಕ್ಷಿಯಾಗಿದೆ. ಇಂತಹ ಮೇರು ವ್ಯಕ್ತಿತ್ವದ ರಾಜಕಾರಣಿ ರಾಮನಗರದವರು ಎಂಬುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ ಎಂದರು.

ಕಾರ್ಯಕ್ರಮದ ವೇಳೆ ಕೆಂಗಲ್ ಹನುಂತಯ್ಯ ಅವರ ಬಗ್ಗೆ ಕಿರು ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಗುವುದು ಎಂದು ಅವರು ತಿಳಿಸಿದರು.

ಕೆಂಗಲ್ ಪ್ರತಿಮೆ ಮಂಟಪ ಸೌಂದರ್ಯ ಹೆಚ್ಚಿಸುವ ಕಾಮಗಾರಿ ಹಳೇ ಬಸ್ ನಿಲ್ದಾಣ ಬಳಿ ಇರುವ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ ಇರುವ ಮಂಟಪದ ಸೌಂಧರ್ಯವನ್ನು ಇಮ್ಮಡಿಗೊಳಿಸುವ ನಿಟ್ಟಿನಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರತಿಮೆಯ ಸುತ್ತ ಹುಲ್ಲು ಹಾಸು ಹಾಸಲಾಗುವುದು. ದೀಪಗಳ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ, ಮಂಟಪಗಳ ನಿರ್ಮಾಣಕ್ಕೆ ಶ್ರಮಿಸಿದ ಪ್ರೊ. ಎಂ.ಶಿವನಂಜಯ್ಯ, ಬಮೂಲ್ ನಿರ್ದೇಶಕ ಪಿ.ನಾಗರಾಜು ಅವರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ಹೇಳಿದರು.

ಮಾ.15ರಂದು ನಡೆಯುವ ಕೆಂಗಲ್ ಅವರ ನೆನಪು ಕಾರ್ಯಕ್ರಮವನ್ನು ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಉದ್ಘಾಟಿಸುವರು. ತಾವು ಅಧ್ಯಕ್ಷತೆ ವಹಿಸುವುದಾಗಿ ಅವರು ತಿಳಿಸಿದರು. ಕೆಂಗಲ್ ರಾಜಕಾರಣ, ಬದುಕು ಮತ್ತು ಸಾಧನೆ ಕುರಿತು ಡಾ.ತಲಕಾಡು ಚಿಕ್ಕರಂಗೇಗೌಡ ಮಾತನಾಡಲಿದ್ದಾರೆ. ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್, ಲೇಖಕ ಜಿ.ಶಿವಣ್ಣ, ಸಾಹಿತಿ ಡಾ.ಬೈರಮಂಗಲ ರಾಮೇಗೌಡ, ಚಿಂತಕ ಡಾ. ದೊಡ್ಡಬೋರಯ್ಯ, ಸಾಹಿತಿಗಳಾದ ಸೂ.ಚಿ.ಗಂಗಾಧರಯ್ಯ, ಡಾ.ರವಿಕುಮಾರ್ ಬಾಗಿ, ರೈತ ಮುಖಂಡರಾದ ಅನುಸೂಯಮ್ಮ ಸೇರಿದಂತೆ ರಾಜಕಾರಣಿಗಳು, ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು, ಚುನಾಯಿತ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು.

ಕೆಂಗಲ್‌ನಲ್ಲಿರುವ ಹುನುಂತಯ್ಯ ಅವರ ಸಮಾಧಿ ಮತ್ತು ಮಂಟಪದ ದುರಸ್ಥಿ ವಿಚಾರದಲ್ಲಿ ಸುದ್ದಿಗಾರರು ಗಮನ ಸೆಳೆದಾಗ ಪ್ರತಿಕ್ರಿಯಿಸದ ಅವರು ತಾವು ಈ ವಿಚಾರದಲ್ಲಿ ಚನ್ನಪಟ್ಟಣ ಕ್ಷೇತ್ರದ ಶಾಸಕ ಸಿ.ಪಿ.ಯೋಗೇಶ್ವರ್ ಅವರ ಬಳಿ ಮಾತನಾಡುವುದಾಗಿ ತಿಳಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ತರುವುದಾಗಿ ಹೇಳಿದರು.

**ಫ್ಲೆಕ್ಸ್ ಕಟ್ಟಿದರೆ ಕ್ರಮದ ಎಚ್ಚರಿಕೆ!**

**ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ ಇರುವ ಮಂಟಪಕ್ಕೆ ಫ್ಲೆಕ್ಸ್ ಕಟ್ಟುವುದು, ಬಿತ್ತಿ ಪತ್ರ ಅಂಟಿಸುವುದನ್ನು ನಿಷೇಧಿಸಲಾಗಿದೆ. ಹಾಗೊಮ್ಮೆ ಈ ನಿಯಮವನ್ನು ಉಲ್ಲಂಘಿಸಿದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಹಾಗೂ ದಂಡ ವಿಧಿಸುವುದಾಗಿ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಎಚ್ಚರಿಸಿದ್ದಾರೆ.**

# ನ್ಯುಮೋನಿಯಾದಿಂದ ಮರಣ ಪ್ರಮಾಣ ಹೆಚ್ಚಳ, ಲಿಸಿಕಾ ಯೋಜನೆಗೆ ಸಂಸದ ಡಾ.ಸಿ.ಎನ್.ಮಂಜುನಾಥ್ ಮನವಿ

## ಆಯುಷ್ಮಾನ್ ಯೋಜನೆ: ವಿಮಾ ಮೊತ್ತ 8 ಲಕ್ಷಕ್ಕೆ ಏರಿಸಲು ಆಗ್ರಹ

**ರಾಮನಗರ:** ಗರ್ಭಾಶಯ ಕ್ಯಾನ್ಸರ್ ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಬಾಲಕಿಯರಿಗೆ ಎಚ್.ಪಿ.ವಿ. ಲಸಿಕೆ ಕಾರ್ಯಕ್ರಮವನ್ನು ಆರಂಭಿಸಿರುವುದನ್ನು ಶ್ಲಾಘಿಸಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್, ಹಿರಿಯ ನಾಗರೀಕರಿಗೆ ನ್ಯುಮೋನಿಯಾ ಸೋಂಕು ನಿರೋಧಕ ಲಸಿಕಾ ಕಾರ್ಯಕ್ರಮವನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದ್ದಾರೆ.



ಲೋಕಸಭೆಯ ಕಲಾಪದಲ್ಲಿ ಭಾಗವಹಿಸಿದ್ದ ಅವರು ಕೇಂದ್ರ ಸರ್ಕಾರದ ಗಮನ ಸೆಳೆದಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಯಸ್ಕರು ವಿಶೇಷವಾಗಿ ಹಿರಿಯ ನಾಗರೀಕರು ನ್ಯುಮೋನಿಯಾ ಸೋಂಕಿನಿಂದ ಮೃತಪಡುತ್ತಿರುವ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಈ ವಿಚಾರದಲ್ಲೂ ಎಚ್.ಪಿ.ವಿ ಲಸಿಕೆಗೆ ನೀಡಿದಷ್ಟೇ ಮಹತ್ವವನ್ನು ನೀಡಬೇಕು ಎಂದು ಮನವಿ ಮಾಡಿದರು. ಪ್ರತಿ ವರ್ಷ ಸುಮಾರು 4 ರಿಂದ 5 ಮಿಲಿಯನ್ ನಾಗರೀಕರು ನ್ಯೂಮೋನಿಯಾ ಮತ್ತು ಸಂಬಂಧಿತ ಸಮಸ್ಯೆಗಳಿಂದ ಬಳಲುತ್ತಿದ್ದುಖುಎ. ಮರಣ ಪ್ರಮಾಣವೂ ಹೆಚ್ಚಾಗುತ್ತಿದೆ ಎಂದು ಲಸಿಕಾ ಕಾರ್ಯಕ್ರಮದ ಅವಶ್ಯಕತೆ ಬಗ್ಗೆ ಅವರು ಅಂಕಿ – ಅಂಶಗಳನ್ನು ನೀಡಿದರು.

### ಆಯುಷ್ಮಾನ್ ಭಾರತ: ವಿಮಾ ಮೊತ್ತ ಹೆಚ್ಚಳಕ್ಕೆ ಆಗ್ರಹ

ಆಯುಷ್ಮಾನ್ ಭಾರತ ಯೋಜನೆ ವಿಶ್ವದ ಅತಿ ದೊಎಡ್ಡ ಆರೋಗ್ಯ ರಕ್ಷಣಾ ಯೋಜನೆಗಳಲ್ಲಿ ಒಂದಾಗಿದೆ. ಸಧ್ಯ ಈ ಯೋಜನೆಯ ಲಾಭವನ್ನು ದೇಶದ 55 ಕೋಟಿ ಮಂದಿ ಪಡೆಯುತ್ತಿದ್ದುಖುಎ. ಈ ಯೋಜನೆಯಡಿ 1300 ವೈದ್ಯಕೀಯ ಕ್ರಮಗಳು ಒಳಗೊಂಡಿವೆ. ಇನ್ನು 600 ಚಿಕಿತ್ಸೆಗಳನ್ನು ಸೇರಿಸಬೇಕು ಎಂದು ಡಾ.ಸಿ. ಎನ್.ಮಂಜುನಾಥ್ ಒತ್ತಾಯಿಸಿದರು.

ಆಯುಷ್ಮಾನ್ ಭಾರತ ಯೋಜನೆಯಡಿ ಕುಟುಂಬವೊಂದಕ್ಕೆ ಸಧ್ಯ 5 ಲಕ್ಷ ರೂಗಳ ವಿಮಾ ಮಿತಿ ಜಾರಿಯಲ್ಲಿದೆ. ಈ ಮಿತಿಯನ್ನು 8 ಲಕ್ಷ ರೂಗಳಿಗೆ ಏರಿಸಬೇಕು ಎಂದು ಅವರು ಸರ್ಕಾರವನ್ನು ಆಗ್ರಹಿಸಿದರು.

### ಕೈಗಾರಿಕಾ ತ್ಯಾಜ್ಯ: ಮೂರನೇ ಹಂತದ ಶುದ್ದೀಕರಣಕ್ಕೆ ಮನವಿ

ನಗರೀಕರಣ ಮತ್ತು ಕೈಗಾರಿಕರಣದ ಪರಿಣಾಮವಾಗಿ ಬೆಂಗಳೂರು ಸೇರಿದಂತೆ ಇತರ ಮಹಾನಗರಗಳಲ್ಲಿ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಈ ತ್ಯಾಜ್ಯವನ್ನು ಸರಿಯಾಗಿ ಸಂಸ್ಕರಿಸದೆ ಕೆರೆಗಳು ಮತ್ತು ನದಿಗಳಿಗೆ ಬಿಡಲಾಗುತ್ತಿದೆ. ಇದರ ಪರಿಣಾಮ ಸಾರ್ವಜನಿಕರ ಮತ್ತು ಜಾನುವಾರುಗಳ ಆರೋಗ್ಯಕ್ಕೆ ಹಾನಿಯಾಗುತ್ತಿದೆ. ಇನ್ನೊಂದೆಡೆ ಕೃಷಿ ಬೆಳೆ ಹಾಗೂ ಪರಿಸರದ ಮೇಲು ದುಷ್ಪರಿಣಾಮ ಬೀರುತ್ತಿದೆ. ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಪ್ರದೇಶಗಳಲ್ಲಿ ತರಕಾರಿ, ಹಣ್ಣುಗಳು ಮುಂತಾದ ಆಹಾರ ಪದಾರ್ಥಗಳಲ್ಲಿ ಸೀಸ, ಆರ್ಸನಿಕ್, ಫಾಸ್ಫೊರಸ್, ಲೋಹ ಹೀಗೆ ಹಾನಿಕಾರಕ ಅಂಶಗಳು ಪತ್ತೆಯಾಗಿವೆ. ಆಸ್ಪತ್ರೆಗಳ ತ್ಯಾಜ್ಯವನ್ನು ಸಂಸ್ಕರಿಸಿದ ರೀತಿಯಲ್ಲೇ ಕೈಗಾರಿಕಾ ತ್ಯಾಜ್ಯವನ್ನು ಸಂಸ್ಕರಿಸಬೇಕು. ಮೂರನೇ ಹಂತದ ಶುದ್ದೀಕರಣಕ್ಕೂ ಒಳಪಡಿಸಬೇಕು ಎಂದ ಅವರು ಈ ವಿಚಾರದಲ್ಲಿ ಕೇಂದ್ರ ಜಲಶಕ್ತಿ ಇಲಾಖೆ, ಪರಿಸರ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ಮನವಿ ಮಾಡಿದರು.

### ಎಕ್ಸ್‌ಪ್ರೆಸ್ ರಸ್ತೆ: ವಿಶ್ರಾಂತಿ ಕೇಂದ್ರದ ಕೊರತೆ

ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ರಸ್ತೆ ಸುಮಾರು 150 ಕಿಮೀ ಉದ್ದವಿದೆ. ಮಧ್ಯದಲ್ಲಿ ಚಾಲಕರು, ಪ್ರಯಾಣಿಕರಿಗಾಗಿ ವಿಶ್ರಾಂತಿ ಕೇಂದ್ರದ ಕೊರತೆ ಇದೆ. ರಾಮನಗರ ಜಿಲ್ಲಾಡಳಿತ ಸುಮಾರು 8.5 ಎಕರೆ ಭೂಮಿಯನ್ನು ವಿಶ್ರಾಂತಿ ಕೇಂದ್ರಕ್ಕಾಗಿ ಗುರುತಿಸಿದೆ. ವಿಶ್ರಾಂತಿ ಕೇಂದ್ರದ ಜೊತೆಗೆ ಗೊಂಬೆಗಳ ಉದ್ಯಾನವನ, ರೇಷ್ಮೆ ಮ್ಯೂಸಿಯಂ ಸ್ಥಾಪಿಸಿದರೆ ಪ್ರವಾಸೋಧ್ಯಮವನ್ನು ಉತ್ತೇಜಿಸಿದಂತಾಗುತ್ತದೆ ಎಂದು ಸಂಸದ ಮಂಜುನಾಥ್ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದರು.

ತಮ್ಮ ಕ್ಷೇತ್ರದಲ್ಲಿ ಆನೆ–ಮಾನವ ಸಂಘರ್ಷ ಹೆಚ್ಚಾಗುತ್ತಿದೆ. ಕೃಷಿಭೂಮಿ, ಕೃಷಿ ಬೆಳೆ ನಾಶವಾಗುತ್ತಿದೆ. ರೈತರಿಗೆ ಆರ್ಥಿಕ ನಷ್ಟವಾಗುತ್ತಿದೆ. ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

# ಬಿ.ರಾಚಯ್ಯ ಜೋಡಿ ರಸ್ತೆ ಅಭಿವೃದ್ಧಿ ಗೆ 3.80 ಕೋಟಿ ಬಿಡುಗಡೆ: ಶಾಸಕರಿಂದ ರಸ್ತೆ ಪರಿಶೀಲನೆ

**ಚಾಮರಾಜನಗರ:** ನಗರದ ಬಿ.ರಾಚಯ್ಯ ಜೋಡಿ ರಸ್ತೆ ಅಭಿವೃದ್ಧಿಗಾಗಿ 3.80 ಕೋಟಿ ರೂ.ಬಿಡುಗಡೆಯಾಗಿರುವ ಹಿನ್ನೆಲೆಯಲ್ಲಿ ಎಂಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಇಂದು ರಸ್ತೆಗೆ ಭೇಟಿ ನೀಡಿ ಪರಿಶೀಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ನಗರದ ಬಿ.ರಾಚಯ್ಯ ಜೋಡಿರಸ್ತೆಯ ಭುವನೇಶ್ವರಿ ವೃತ್ತದಿಂದ 1200 ಮೀಟರ್ ಅಪಘಾತ ವಲಯ ರಸ್ತೆ ಅಭಿವೃದ್ಧಿ, ರಸ್ತೆ ಸುರಕ್ಷತಾ ಅಭಿವೃದ್ಧಿ ಪಡಿಸಲಾಗುತ್ತದೆ ಎಂದರು.

**▸▸ ಅಪಘಾತ ವಲಯ ಅಭಿವೃದ್ಧಿ ಪಡಿಸಲಾಗುತ್ತದೆ: ಸಿ.ಪುಟ್ಟರಂಗಶೆಟ್ಟಿ**

ಈ ಸಂದರ್ಭದಲ್ಲಿ ನಾಮನಿರ್ದೇಶನ ಸದಸ್ಯ ಎಂ.ಸ್ವಾಮಿ, ಇಂಜಿನಿಯರ್ ವಿನೋದ್ ಹಾಜರಿದ್ದರು.



## ಜಿಎನ್‌ಎಂ ಶಾಲೆಯಲ್ಲಿ ಹೆಚ್ಚು ಅಂಕ ಪಡೆದು ಮೂವರು ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ

**ಚಾಮರಾಜನಗರ:** ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ಸರ್ಕಾರಿ ಶುಶ್ರೂಷಕ ತರಬೇತಿ ಕೇಂದ್ರದಲ್ಲಿ ಕಳೆದ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಇಬ್ಬರು ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಶಾಲೆಯನ್ನು ನಡೆದ ಸರಳ ಕಾರ್ಯಕ್ರಮದಲ್ಲಿ 2025–26 ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಅಧಿಕ ಅಂಕಗಳಿಸಿ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ ಜಿ.ಎನ್. ಎಂ. ಶಾಲೆಯ ವಿಧ್ಯಾರ್ಥಿಗಳಾದ 3ನೇ ವರ್ಷದ ವಿದ್ಯಾರ್ಥಿ ಕು.ಪ್ರೇಮಾ (ಶೇ. 81) 2ನೇ ವರ್ಷದ ವಿದ್ಯಾರ್ಥಿ ಕು. ಮಾನಸ ವೈ ( ಶೇ. 80) ಹಾಗೂ ಕು. ಕೀರ್ತನಾ (ಶೇ. 80) ಅತ್ಯುತ್ತಮ ಶ್ರೇಣ ಯಲ್ಲಿ ಪಾಸಾಗಿದೆ. ಹಾಗೂ 35 ವಿದ್ಯಾರ್ಥಿಗಳು ಪ್ರಥಮ ದರ್ಜೆ ಮತ್ತು 21 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಜಿ.ಎನ್.ಎಂ ಶಾಲೆಯ ಪ್ರಾಂಶುಪಾಲರಾದ ಕೆ. ಕಮಲ ತಿಳಿಸಿ, ವಿದ್ಯಾರ್ಥಿನಿಯರ ಸಾಧನೆಗೆ ಪ್ರಶಂಸೆ ವ್ಯಕ್ತಪಡಿಸಿದರು.

ಸಂಸ್ಥೆಯ ಆಡಳಿತಾಧಿಕಾರಿ ಡಾ.ಆಶಾ. ಎಸ್ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿ, ನಸಿರ್‌ಂಗ್ ತರಬೇತಿಯಲ್ಲಿ ಉತ್ತಮ ಸಾಧನೆ ಮಾಡಿರುವ ಮಕ್ಕಳನ್ನು ಅಭಿನಂದಿಸಿದರು. ದಾನಿಗಳು ಇಚ್ಛಿಸಿದ್ದಲ್ಲಿ ಪುಸ್ತಕ ರೂಪದಲ್ಲಿ ದಾನ ಮಾಡಿ ಮಕ್ಕಳನ್ನ ಪ್ರೊತ್ಸಾಹಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮೈಸೂರಿನ ಪ್ರಾಥಮಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರದ ಅಧಿಕಾರಿ ವೆಂಕಟಲಕ್ಷ್ಮಿ, ರವಿಚಂದ್ರ ಪಿ, ಜಿ.ಎನ್.ಎಂ ಶಾಲೆಯ ಪ್ರಾಂಶುಪಾಲರಾದ ಕೆ. ಕಮಲ, ಭೋಧಕರಾದ ಸೌಮ್ಯ, ಕಾವ್ಯಶ್ರೀ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ಹ್ಯಾಂಡ್ ಎಂಬ್ರಾಯ್ಡರಿ ಉಚಿತ ತರಬೇತಿ

## ರಾಮನಗರದಲ್ಲಿ ಬಜ್ ಇಂಡಿಯಾ ಸಂಸ್ಥೆ ವತಿಯಿಂದ ಪ್ರಮಾಣಪತ್ರ ವಿತರಣೆ

**ರಾಮನಗರ:** ಮಹಿಳೆಯರನ್ನು ಕೌಶಲ್ಯಯುತವಾಗಿ ಮತ್ತು ಆರ್ಥಿಕವಾಗಿ ಸಬಲರನ್ನಾಗಿಸುವ ಮಹತ್ವಾಕಾಂಕ್ಷೆಯೊಂದಿಗೆ ಟೊಯೋಟಾ ಗೋಸೆಯ್ ಸೌತ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ರಾಮನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಮೈಸೂರಿನ ಅಥರ್ವ ಅಕಾಡೆಮಿ ಇವರ ಸಂಯುಕ್ತ ಆಶ್ರಯದಲ್ಲಿ ತಾಲ್ಲೂಕಿನ ಚನ್ನಮಾನಹಳ್ಳಿ ಗ್ರಾಮದಲ್ಲಿ ಉಚಿತ ಹ್ಯಾಂಡ್ ಎಂಬ್ರಾಯ್ಡರಿ (ಕೈ ಕಸುತಿ) ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಯಶಸ್ವಿಯಾದ ತರಬೇತಿ ನಂತರ ಅಭ್ಯರ್ಥಿಗಳಿಗೆ ಪ್ರಮಾಣ ವಿತರಣಾ ಸಮಾರಂಭ ನಡೆಯಿತು. ಈ ತರಬೇತಿ ಕಾರ್ಯಕ್ರಮದ ಯಶಸ್ಸಿನಲ್ಲಿ ಬಜ್ ಇಂಡಿಯಾ ಸಂಸ್ಥೆಯ ಕೊಡುಗೆ ಅಪಾರವಾಗಿದೆ, ವಿಶೇಷವಾಗಿ ಸಂಸ್ಥೆಯ ಪ್ರಮುಖರಾದ ಪೂರ್ಣಿಮಾ ರವರ ಶ್ರಮವಿದೆ ಎಂದು ಅಭ್ಯರ್ಥಿಗಳು ಶ್ಲಾಘಿಸಿದರು. ಈ ಉಚಿತ ತರಬೇತಿಯ ಬಗ್ಗೆ ರಾಮನಗರದ ಕೈಗಾರಿಕಾ ವಲಯದ ಸುತ್ತಮುತ್ತಲಿನ ಗ್ರಾಮಗಳ ಮಹಿಳೆಯರಿಗೆ ಸೂಕ್ತ ಮಾರ್ಗದರ್ಶನ ಸಿಕ್ಕಿದೆ. ತರಬೇತಿಗೆ ಸೇರುವಂತೆ ಪ್ರೇರೇಪಿಸುವಲ್ಲಿ ಪೂರ್ಣಿಮ ಪ್ರಮುಖ ಪಾತ್ರವಹಿಸಿದ್ದರು ಎಂದು ಅಭ್ಯರ್ಥಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದುರ.

ಕಾರ್ಯಕ್ರಮದಲ್ಲಿ ಟಿಜಿಎಸ್‌ಐನ್‌ನ ವ್ಯವಸ್ಥಾಪಕ ನಿರ್ದೇಶಕ ಬಿಜಯ್ ಕೃಷ್ಣ ಶ್ರೇಷ್ಠ, ಉಪ ವ್ಯವಸ್ಥಾಪಕ ಎ.ಮಂಜುನಾಥ್, ಅಥರ್ವ ಅಕಾಡೆಮಿ ಮೈಸೂರಿ ಪ್ರಮುಖರಾದ ಗೀತಾ ಉಪಸ್ಥಿತರಿದ್ದರು.



**ಮಹಿಳೆಯರ ಸಬಲೀಕರಣಕ್ಕೆ ಬಜ್ ಇಂಡಿಯಾ ಕೊಡುಗೆ**

ತರಬೇತಿ ವಿಚಾರವಾಗಿ ಮಾತನಾಡಿದ ಪೂರ್ಣಿಮ ಅವರು, ಬಜ್ ಇಂಡಿಯಾ ಸಂಸ್ಥೆಯು ಮಹಿಳೆಯರಿಗಾಗಿ ಕೌಶಲ್ಯ ಅಭಿವೃದ್ಧಿ ತರಬೇತಿ, ಹಸಿರು ತರಬೇತಿ (ಉಡಿಜಜಟ ಖಿಣುಟಟಟುಟಿ) ಮತ್ತು ವ್ಯಾಪಾರ ತರಬೇತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ನೀಡುತ್ತಿದೆ. ಈ ತರಬೇತಿಗಳ ಫಲವಾಗಿ ಈಗಾಗಲೇ ಅನೇಕ ಮಹಿಳೆಯರ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆ ಕಂಡಿದ್ದು, ಹಲವಾರು ಮಹಿಳೆಯರು ಆತ್ಮವಿಶ್ವಾಸದಿಂದ ತಮ್ಮದೇ ಆದ ಸ್ವಂತ ವ್ಯಾಪಾರವನ್ನು ಆರಂಭಿಸಿ ಯಶಸ್ವಿಯಾಗಿದ್ದಾರೆ ಮತ್ತು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ ಎಂದು ತಿಳಿಸಿದರು. ತರಬೇತಿ ಪಡೆದ ಮಹಿಳೆಯರು ತಮ್ಮ ಮನೆಯಲ್ಲೇ ಸ್ವಯಂ ಉದ್ಯೋಗ ಆರಂಭಿಸಲು ಉತ್ತಮ ಅವಕಾಶಗಳನ್ನು ಕಲ್ಪಿಸಿದೆ ಎಂದು ತಿಳಿಸಿದರು.

## ವೀರಶೈವ ಲಿಂಗಾಯತ ಮಹಿಳಾ ಪಾರ್ವತಿ ಬಳಗದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ

**ಚಾಮರಾಜನಗರ:** ವೀರಶೈವ ಲಿಂಗಾಯತ ಮಹಿಳಾ ಪಾರ್ವತಿ ಬಳಗದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಹಿಳೆಯರು ರಾಷ್ಟ್ರನಾಯಕರ ಹಾಗೂ ವೀರ ಮಹಿಳೆಯರ ವೇಶಗಳನ್ನು ಧರಿಸಿ ಕಾರ್ಯಕ್ರವನ್ನು ನಡೆಸಿಕೊಟ್ಟರು. ಮಹಿಳೆಯ ಕುರಿತು ಮಾತನಾಡಿದ ಡಾ.ಶ್ವೇತಾ ಶಶಿಧರ್ ಮಹಿಳೆಯರು ಎಲಾ ಕ್ಷೇತ್ರದಲ್ಲು ಸೇವೆ ಸಲ್ಲಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಮಹಿಳೆಯರಿಗೆ ಉತ್ತಮ ಸ್ಥಾನವಿದೆ, ಸಾಂಸ್ಕೃತಿಕವಾಗಿಯು ಮಹಿಳೆಯರು ಸಾಧನೆಯನ್ನು ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಮಹಿಳೆಯರ ದಿನಾಚರಣೆಯಲ್ಲಿ ಗೌರವಿಸುವುದು ಶ್ಲಾಘನೀಯ ಎಂದರು.

ವೀರಶೈವ ಲಿಂಗಾಯತ ಮಹಿಳಾ ಪಾರ್ವತಿ ಬಳಗ ಸದಸ್ಯರಾದ ಆಶಾ ಅವರು ಮಾತನಾಡಿ ಮಹಿಳೆಯರು ಮನೆ ಯಿಂದ ಹೊರಗೆ ಬರೋದೇ ಕಷ್ಟ, ಆ ರೀತಿ ಇರುವಾಗ. ನಾವು ವೇಷ ಭೂಷಣ ತೊಟ್ಟು ಸಾಧಕಿಯರನ್ನು ನೆನಸಿ ಕೊಳ್ಳುವುದಕ್ಕೆ, ಸಾಕ್ಷಿಯಾಗಿ ಮಹಿಳಾ ಜಯಂತಿ ಕಾರ್ಯಕ್ರಮಕ್ಕೆ ಅರ್ಥವನ್ನು ಕೊಟ್ಟಿದ್ದೇವೆ.

ಕಾರ್ಯಕ್ರಮದಲ್ಲಿ ವಿವಿದ ವೇಷ ಭೂಷಣವನ್ನು ಅಶ್ವಿನಿ, ಆಶಾ, ಕೋಮಲ, ರಾಜೇಶ್ವರಿ, ಶಶಿಕಲಾ, ಸುಜಾತ, ರಾಣಿ, ಶ್ವೇತಾ, ಲತಾ, ಪವಿತ್ರ, ವೈದ್ಯರಾದ ಶ್ವೇತಾ ಶ್ವೇತಾ ಶಿಧರ್,ವಕಿಲರಾದ ಮಮತಾ, ವಸತಮ್ಮ, ಕಾರ್ಯಕ್ರಮ ನಡೆಸಿಕೊಟ್ಟರು.



## ಹೆಣ್ಣು ಮಕ್ಕಳಿಗೆ ವಂಚನೆ ಮಾಡುತ್ತಿದ್ದ ಆರೋಪಿಯ ಬಂಧನ

ರಾಮನಗರ: ಫೇಸ್ ಬುಕ್ ಮೂಲಕ ಪರಿಚಯ ಮಾಡಿಕೊಂಡು, ಸ್ನೇಹ ಬೆಳೆಸಿ, ನಂತರ ತನಗೆ ಹಣದ ಅವಶ್ಯಕತೆ ಇರುವುದಾಗಿ ತಿಳಿಸಿ ಹಣ ಹಾಗೂ ಚಿನ್ನದ ಆಭರಣಗಳನ್ನು ಪಡೆದು ಹಿಂದಿರುಗಿಸದೆ ಮೋಸ ಮಾಡಿದ ಆರೋಪಿಯನ್ನು ಚನ್ನಪಟ್ಟಣ ತಾಲ್ಲೂಕಿನ ಎಂ.ಕೆ.ದೊಡ್ಡಿ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯು ಅಮಾಯಕ ಹೆಣ್ಣು ಮಕ್ಕಳನ್ನು ನಂಬಿಸಿ, ಹೆದರಿಸಿ, ಹಣ ವಸೂಲಿ ಮಾಡುವ ಪ್ರವೃತ್ತಿಯುಳ್ಳವನಾಗಿದ್ದು ಈತನ ವಿರುದ್ದ ಬೆಂಗಳೂರು ನಗರದಲ್ಲಿ ಹಲವು ಪ್ರಕರಣಗಳು ದಾಖಲಾಗಿವೆ. ಆರೋಪಿಯನ್ನು ಬಂಧಿಸಿರುವ ಪೊಲೀಸರು ಆತನಿಂದ ಸುಮಾರು 1,05,000/ ರೂ ನಗದು ಹಣವನ್ನು ವಶಪಡಿಸಿಕೊಂಡಿದ್ದಾರೆ. ಪ್ರಕರಣವನ್ನು ಪತ್ತೆ ಮಾಡಿ ಆರೋಪಿಯನ್ನು ಬಂಧಿಸುವಲ್ಲಿ ಎಂಕೆ ದೊಡ್ಡಿ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಾದ ಸಂತೋಷ, ಮಲ್ಲಿಕಾರ್ಜುನ, ಸುನಂದಮ್ಮ, ಪಾಪಣ್ಣರವರ ತಂಡವು ಯಶಸ್ವಿಯಾಗಿದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

# ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಮಾಡಿ ಶಾಲೆಗೆ ಕೀರ್ತಿತರ ಬೇಕು

**ಬಸವಪುರ ಉನ್ನತಿಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಜಿ.ಶಿವಕುಮಾರಸ್ವಾಮಿ ವಿದ್ಯಾರ್ಥಿಗಳಿಗೆ ಸಲಹೆ**

**ಚಾಮರಾಜನಗರ:** ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಮಾಡಿ ಶಾಲೆಗೆ ಕೀರ್ತಿತರ ಬೇಕು. ಹೆಚ್ಚಿನ ಶಿಕ್ಷಣದಿಂದ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ಬಸವಪುರ ಉನ್ನತಿಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಜಿ.ಶಿವಕುಮಾರಸ್ವಾಮಿ ತಿಳಿಸಿದರು.

ತಾಲ್ಲೂಕಿನ ಬಸವಾಪುರ ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ನಡೆದ2025–2026ನೇ ಸಾಲಿನ 8ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಮತ್ತು ಶಾರಾದ ದೇವಿ ಪೂಜೆ ಕಾಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಹಿತ ವಚನ ಹೇಳಿದರು. ಈ ಶಾಲೆಯಲ್ಲಿ ಸುಮಾರು 8 ವರ್ಷಗಳ ಕಾಲ ವಿದ್ಯಾಭ್ಯಾಸ ಮುಗಿಸಿ 9ನೇ ತರಗತಿಗೆ ಬೇರೆ ಶಾಲೆಗೆ ಹೊಗುತ್ತೀದ್ದಿರಿ,ಎಲ್ಲಾ ವಿದ್ಯಾರ್ಥಿಗಳು ಶ್ರದ್ದೆಯಿಂದ ವಿದ್ಯೆಗೆ ಗೌರವ ಕೊಡಬೇಕು ಶಿಕ್ಷಣವು ನಿಮ್ಮ ಬದುಕನ್ನುಉತ್ತಮವಾಗಿಸುತ್ತದೆ ಎಂದು ಹೇಳಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕರಾದ ಸಿ.ಮಲ್ಲಿಕಾರ್ಜುನ ಅವರು ಮಾತನಾಡಿ ಮನೆಯಲ್ಲಿ ತಾಯಿ,ತಂದೆಗೆ ಗೌರವಕೊಡುವುದು ಒಂದು ಶಿಕ್ಷಣ, ಮನೆಯೇ ಮೊದಲ ಪಾಠಶಾಲೆ, ನಂತರ ಶಾಲೆಯಲ್ಲಿ ನಿಮ್ಮ ವಿದ್ಯಾಭ್ಯಾಸ ಪ್ರಾರಂಭವಾಗುತ್ತದೆ. ವಿದ್ಯಾರ್ಥಿಗಳು ಮೊಬೈಲ್ ಪೋನ್ ಬಳಕೆಯಿಂದ ದೂರವಿದ್ದರೆ. ಶಿಕ್ಷಣ ನಿಮಗೆ ವರದಾನವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಗುರುವಂದನೆ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷ ಪ್ರಭುಸ್ವಾಮಿ, ಉಪಾಧ್ಯಕ್ಷೆ ಮಂಗಳಾಗೌರಿ, ಸದಸ್ಯರಾದ ಮಹದೇವಯ್ಯ ಶಾಲಾ ಶಿಕ್ಷಕರಾದ ಆರ್.ವಿನೋದ್.ಟಿ,ಜಿ,ಟಿ, ದೈಹಿಕ ಶಿಕ್ಷಣ ಶಿಕ್ಷಕ ಪಿ.ಗೋವಿಂದನ್, ಪಿ. ಎಸ್.ಟಿ ಶಿಕ್ಷಕರಾದ ಮಹದೇವಪ್ರಸಾದ್, ಜ್ಯೋತಿ, ಜಿ.ಪಿ.ಟಿ ಶಿಕ್ಷಕರಾದ ಕೆ.ಪ್ರವೀಣ್ ಹಾಗೂ ಶಾಲಾ ಪೋಷಕರು ಭಾಗವಹಿಸಿದ್ದರು.



# ರಂಜಾನ್ ಶಾಂತಿ, ಸಹೋದರತ್ವ, ದೈವಭಕ್ತಿಯ ಸಂದೇಶ ಸಾರುತ್ತದೆ

## ಜಿಲ್ಲಾಧಿಕಾರಿ ಶ್ರೀರೂಪ ಹೇಳಿಕೆ । ನಗರದ ಮರ್ಸಿ ಪಬ್ಲಿಕ್ ಸ್ಕೂಲ್‌ನಲ್ಲಿ ಇಫ್ತಿಯಾರ್ ಕೂಟ

**ಚಾಮರಾಜನಗರ:** ಮುಸಲ್ಮಾನರ ಪವಿತ್ರ ಹಬ್ಬಗಳ ಪೈಕಿ ಒಂದಾದ ರಂಜಾನ್ ಹಬ್ಬವು ಶಾಂತಿ, ಸಹೋದರತ್ವ, ದೈವ ಭಕ್ತಿಯ ಸಂದೇಶವನ್ನು ಸಾರುತ್ತದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಹೇಳಿದರು.

ನಗರದ ಗಾಳೀಪುರ ಬಡಾವಣೆಯಲ್ಲಿರುವ ಮರ್ಸಿ ಪಬ್ಲಿಕ್ ಸ್ಕೂಲ್‌ನಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಏರ್ಪಡಿಸಿದ್ದ ಇಫ್ತಿಯಾರ್ ಕೂಟದಲ್ಲಿ ಭಾಗವಹಿಸಿ ಮಾತನಾಡಿದರು.

ಮುಂಜಾನೆಯಿಂದ ಸೂರ್ಯಾಸ್ತದವರೆಗೆ ಉಪಾವಾಸ ವಿರುತ್ತಾರೆ. ಇಸ್ಲಾಂ ಐದು ಕಂಬಗಳಲ್ಲಿ ಒಂದಾದ ಉಪವಾಸವು ದೇಹ, ಮನಸ್ಸಿನ ನಿಯಂತ್ರಣವನ್ನು ಕಲಿಸುತ್ತದೆ. ದೇವನೊಬ್ಬ ನಾಮಹಲವು ಎಂಬಂತೆ ಎಲ್ಲ ಧರ್ಮಗಳು, ಜಾತಿಗಳು ಒಗ್ಗೂಡಿ. ಬಾಳಿದರೆ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದರು.

ಮರ್ಸಿ ಪಬ್ಲಿಕ್ ಶಿಕ್ಷಣ ಸಂಸ್ಥೆಯವರು ರಂಜಾನ್ ಪ್ರಯುಕ್ತ ಶಾಲೆಯಲ್ಲಿ ಇಫ್ತಿಯಾರ್ ಕೂಟ ಅಯೋಜಿಸಿ ಜಿಲ್ಲಾ ಮಟ್ಟದ ಅಧಿಕಾರಿಗಳು, ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳ ಪ್ರಮುಖರನ್ನು ಆಹ್ವಾನಿಸಿ ಆಚರಣೆ ಮಾಡುತ್ತಿರುವುದು ಒಂದು ವಿಶೇಷ, ಅರ್ಥಪೂರ್ಣ ಕಾರ್ಯಕ್ರಮ ಇದಾಗಿದೆ. ಎಲ್ಲ ಹಬ್ಬವನ್ನು ಎಲ್ಲರೂ ಸೇರಿ ಆಚರಣೆ ಮಾಡುವುದರಿಂದ ತುಂಬಾ ಸಂಭ್ರಮ ಇರುತ್ತದೆ. ವಿವಿಧತೆಯಲ್ಲಿ ಏಕತೆ ಹೊಂದಿರುವ ದೇಶದಲ್ಲಿ ನಾವೆಲ್ಲರೂ ಭಾರತೀಯರು, ಎಲ್ಲ ಧರ್ಮಿಯರು ಅಣ್ಣತಮ್ಮಂದಿರಂತೆ ಬಾಳಿದರೆ ದೇಶ ಕೂಡ ಅಭಿವೃದ್ಧಿ ಹೊಂದುತ್ತದೆ ಎಂದರು.



ಇಫ್ತಿಯಾರ್ ಕೂಟ ಅಯೋಜಿಸಿರುವ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ಹಾಗೂ ಮುಸ್ಲಿಂ ಭಾಂದವರಿಗೆ ಈ ಮೂಲಕ ರಂಜಾನ್ ಹಬ್ಬ ಶುಭಾಶಯ ಕೋರುವೆ ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ಜಿ.ಪಂ.ಸಿಇಒ ಮೋನಾರೋತ್ ಮಾತನಾಡಿ ರಂಜಾನ್ ಹಬ್ಬದ ಶುಭಾಶಯ ಕೋರಿದರು.

ಕಾರ್ಯಕ್ರಮದಲ್ಲಿ ಮುಸ್ಲಿಂ ಧರ್ಮದ ಗುರುಗಳಾದ ಮುಫ್ತಾಹ ಮದನಿ,ಡಾ.ರಾಹಿಪಿದಾಯಿ, ಚುಡಾಧ್ಯಕ್ಷ ಮಹಮ್ಮದ್ ಅಸ್ಗರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಪಾಟೀಲ್, ಎಪಿಪಿ ವಸೀಂ, ಅನ್ಸರ್ ಖಾನ್, ನಗರಸಭಾ ಮಾಜಿ ಸದಸ್ಯರಾದ ಎಂ.ಮಹೇಶ್, ಅಬ್ರಾರ್ ಅಹಮದ್, ಕಲೀಲ್ ಉಲ್ಲಾ, ಮೊಹಮ್ಮದ್ ಅಮೀಕ್, ಎಂವೈಎಫ್ ಶಾಲೆಯ ಆಡಳಿತಾಧಿಕಾರಿ ಮೊಹಮ್ಮದ್ ಸಾಬೀರ್, ಹುದಾ ಪಬ್ಲಿಕ್ ಶಾಲೆ ಅಧ್ಯಕ್ಷ ಇಸಾನ್ ಜಾವಿದ್ ಇತರರು ಹಾಜರಿದ್ದರು.

# ಸಂಕ್ಷಿಪ್ತ ಸುದ್ದಿ

## ವಿಚಾರ ಸಂಕಿರಣ

**ಮೈಸೂರು:** ಮೈಸೂರು ವಿಶ್ವವಿದ್ಯಾನಿಲಯದ ಕನ್ಸಾರಟಿಯಮ್ ಫಾರ್ ಎಜ್ಯುಕೇಷನಲ್ ಕಮ್ಯುನಿಕೇಷನ್ ನವದೆಹಲಿ ಮತ್ತು ಶೈಕ್ಷಣಿಕ ಬಹುಮಾಧ್ಯಮ ಸಂಶೋಧನ ಕೇಂದ್ರ (ಇ.ಎಂ.ಆರ್.ಸಿ) ಇವರ ಸಹಯೋಗದೊಂದಿಗೆ ಆಯೋಜಿಸುತ್ತಿರುವ "Transforming Education for the Future Intelligent, Inclusive and Immersive Learning" ಎಂಬ ವಿಷಯ ಕುರಿತು 2 ದಿನದ ರಾಷ್ಟ್ರೀಯ ವಿಚಾರ ಸಂಕಿರಣವು ಮಾರ್ಚ್ 16 ಹಾಗೂ 17 ರಂದು ಬೆಳಗ್ಗೆ 10–30 ಗಂಟೆಗೆ ಮಾನಸಗಂಗೋತ್ರಿಯ ಬಹದ್ದೂರ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡಿಸ್ ಇಲ್ಲಿ ನಡೆಯಲಿದೆ ಎಂದು ಶೈಕ್ಷಣಿಕ ಬಹುಮಾಧ್ಯಮ ಸಂಶೋಧನ ಕೇಂದ್ರ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾಂತಿಗಾಗಿ ಆಗ್ರಹಿಸಿ ಎಡಪಕ್ಷಗಳ ಪ್ರತಿಭಟನೆ

**ಮೈಸೂರು:** ಅಮೇರಿಕಾ – ಇಸ್ರೇಲ್ ಯುದ್ಧಕೋರ ನೀತಿ ಖಂಡಿಸಿ, ಯುದ್ಧ ಬೇಡ, ಶಾಂತಿಗಾಗಿ ಒತ್ತಾಯಿಸಿ ಇಂದು ಎಡಪಕ್ಷಗಳು ಹಾಗೂ ಪ್ರಗತಿಪರ ಸಂಘಟನೆಗಳಿಂದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಯಿತು.

ಶ್ರೀಮಂತ ಬಂಡವಾಳಶಾಹಿ ದೇಶಗಳಿಂದು ಬಿಟ್ಟಕ್ಕಿನಲ್ಲಿವೆ. ಈ ಬಿಕ್ಕಟ್ಟಿನಿಂದ ಹೊರಬರಲು ಇತರ ರಾಷ್ಟ್ರಗಳ ಮೇಲೆ ದಾಳಿ ನಡೆಸಿ ಅಲ್ಲಿನ ತೈಲ ಸೇರಿದಂತೆ ಇತರ ಸಂಪತ್ತನ್ನು ಲೂಟಿ ಮಾಡಲಾಗುತ್ತಿದೆ. ಅದರ ಭಾಗವಾಗಿ ಪ್ರಜಾಪ್ರಭುತ್ವ ಸ್ಥಾಪನೆ ಹೆಸರಿನಲ್ಲಿ, ಅಣುಶಕ್ತಿ ನೆಪದಲ್ಲಿ ತಮ್ಮ ಮಾತುಗಳನ್ನು ಕೇಳದ ಸಾರ್ವಭೌಮ ದೇಶಗಳ ಮೇಲೆ ದಾಳಿ ಮಾಡಲಾಗುತ್ತಿದೆ. ಅಲ್ಲದೇ ಶಾಲೆ– ಆಸ್ಪತ್ರೆಗಳ ಮೇಲೆ, ನಾಗರಿಕರ ಮೇಲೆ ದಾಳಿಮಾಡಿ ಕೊಲ್ಲಲಾಗುತ್ತಿದೆ.ಈ ಯುದ್ಧಗಳಿಂದ ಮೊದಲು ಬಲಿಯಾಗುವುದು ಮಕ್ಕಳು, ಮಹಿಳೆಯರು ಹಾಗೂ ತೊಂದರೆಗಳಗಾಗುವವರು ರೈತ– ಕಾರ್ಮಿಕ, ಸಾಮಾನ್ಯ ಜನರು ಆದ್ದರಿಂದ ಈ ಯುದ್ಧ ಕೂಡಲೇ ನಿಲ್ಲಬೇಕು, ವಿಶ್ವ ಸಂಸ್ಥೆ, ಅಂತರಾಷ್ಟ್ರೀಯ ನ್ಯಾಯಾಲಯ ಮಧ್ಯಪ್ರದೇಶ ಮಾಡಬೇಕೆಂದು ಒತ್ತಾಯಿಸಿದರು. ಅಲ್ಲದೆ ಇರಾನ್ ಮೇಲಿನ ಅಮೇರಿಕಾ, ಇಸ್ರೇಲ್ ದಾಳಿಯಿಂದ ನಮ್ಮ ದೇಶವೂ ಸಂಕಷ್ಟಕ್ಕೀಡಾಗಿದ್ದು ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಪೂರೈಕೆ ಮೇಲೆ ಪರಿಣಾಮ ಬೀರಿ ಅಡುಗೆ ಅನಿಲದ ಕೊರತೆ ಉಂಟಾಗಿದೆ. ಬೆಲೆಗಳೂ ಏರಿಕೆ ಆಗುತ್ತಿದೆ ಕೂಡಲೇ ಕೇಂದ್ರ ಸರ್ಕಾರ ಯುದ್ಧ ನಿಲ್ಲಿಸುವಂತೆ ಅಮೇರಿಕಾವನ್ನು ಒತ್ತಾಯಿಸಬೇಕು, ದೇಶ ನಾಗರಿಕರಿಗೆ ತೊಂದಯಾಗದಂತೆ ಕ್ರಮವಹಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಈ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ?ಯ, ಸಿಪಿಐ ಕಾರ್ಯದರ್ಶಿ ರಾಮಕೃಷ್ಣ, ಸಿಪಿಎಂಲ್ ಕಾರ್ಯದರ್ಶಿ ಜವರಯ್ಯ,ಎಸ್‌ಯುಸಿಐ ಕಾರ್ಯದರ್ಶಿ ರವಿ, ಪ್ರಗತಿಪರರಾದ ಟಿ.ಗುರುರಾಜ್, ಸವಿತಾ ಮಲ್ಲೇಶ್,ಒಡನಾಡಿ ಸ್ಟ್ಯಾನ್ಲಿ, ಲಕ್ಷ್ಮಣ್ ಹೊಸಕೋಟೆ, ರಾಜ್ಯ ರೈತ ಸಂಘದ ಹೊಸಕೋಟೆ ಬಸವರಾಜ್, ಕಾಳಚನ್ನೇಗೌಡ,ಕೆ.ಬಸವರಾಜ್, ಎನ್.ವಿಜಯ್‌ಕುಮಾರ್,ಜಯರಾಂ,ನೆಲೆ ಗೋಪಾಲ್ ಕೃಷ್ಣ,ಶಾಕುಂತಲ, ಬಾಲಾಜಿರಾವ್,ಪ್ರಭಾಕರ್,ಯಶೋಧರ, ಸೋಮರಾಜೇ ಅರಸ್,ರಾಜೇಂದ್ರ, ಶ್ರೀಕಾಂತ್, ಸುಬ್ರಹ್ಮಣ್ಯ, ರಾಘವೇಂದ್ರ,ಬಾಲಕೃಷ್ಣ ಮುಂತಾದವರು ಭಾಗವಹಿಸಿದ್ದರು.

## ಆಯುಷ್ಮಾನ್ ಯೋಜನೆ: ವಿಮಾ ಮೊತ್ತ 8 ಲಕ್ಷಕ್ಕೆ ಏರಿಸಲು ಆಗ್ರಹ

# ನ್ಯುಮೋನಿಯಾದಿಂದ ಮರಣ ಪ್ರಮಾಣ ಹೆಚ್ಚಳ, ಲಸಿಕಾ ಯೋಜನೆಗೆ ಸಂಸದ ಡಾ.ಸಿ.ಎನ್.ಮಂಜುನಾಥ್ ಮನವಿ

**ರಾಮನಗರ:** ಗರ್ಭಾಶಯ ಕ್ಯಾನ್ಸರ್ ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಬಾಲಕಿಯರಿಗೆ ಎಚ್.ಪಿ.ವಿ. ಲಸಿಕೆ ಕಾರ್ಯಕ್ರಮವನ್ನು ಆರಂಭಿಸಿರುವುದನ್ನು ಶ್ಲಾಘಿಸಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್. ಮಂಜುನಾಥ್, ಹಿರಿಯ ನಾಗರೀಕರಿಗೆ ನ್ಯುಮೋನಿಯಾ ಸೋಂಕು ನಿರೋಧಕ ಲಸಿಕಾ ಕಾರ್ಯಕ್ರಮವನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದ್ದಾರೆ.



ಲೋಕಸಭೆಯ ಕಲಾಪದಲ್ಲಿ ಭಾಗವಹಿಸಿದ್ದ ಅವರು ಕೇಂದ್ರ ಸರ್ಕಾರದ ಗಮನ ಸೆಳೆದಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಯಸ್ಕರು ವಿಶೇಷವಾಗಿ ಹಿರಿಯ ನಾಗರೀಕರು ನ್ಯುಮೋನಿಯಾ ಸೋಂಕಿನಿಂದ ಮೃತಪಡುತ್ತಿರುವ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಈ ವಿಚಾರದಲ್ಲೂ ಎಚ್.ಪಿ.ವಿ ಲಸಿಕೆಗೆ ನೀಡಿದಷ್ಟೇ ಮಹತ್ವವನ್ನು ನೀಡಬೇಕು ಎಂದು ಮನವಿ ಮಾಡಿದರು. ಪ್ರತಿ ವರ್ಷ ಸುಮಾರು 4 ರಿಂದ 5 ಮಿಲಿಯನ್ ನಾಗರೀಕರು ನ್ಯುಮೋನಿಯಾ ಮತ್ತು ಸಂಬಂಧಿತ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಮರಣ ಪ್ರಮಾಣವೂ ಹೆಚ್ಚಾಗುತ್ತಿದೆ ಎಂದು ಲಸಿಕಾ ಕಾರ್ಯಕ್ರಮದ ಅವಶ್ಯಕತೆ ಬಗ್ಗೆ ಅವರು ಅಂಕಿ – ಅಂಶಗಳನ್ನು ನೀಡಿದರು.

**ಆಯುಷ್ಮಾನ್ ಭಾರತ:** ವಿಮಾ ಮೊತ್ತ ಹೆಚ್ಚಳಕ್ಕೆ ಆಗ್ರಹ

ಆಯುಷ್ಮಾನ್ ಭಾರತ ಯೋಜನೆ ವಿಶ್ವದ ಅತಿ ದೊಎಡ್ಡ ಆರೋಗ್ಯ ರಕ್ಷಣಾ ಯೋಜನೆಗಳಲ್ಲಿ ಒಂದಾಗಿದೆ. ಸಧ್ಯ ಈ ಯೋಜನೆಯ ಲಾಭವನ್ನು ದೇಶದ 55 ಕೋಟಿ ಮಂದಿ ಪಡೆಯುತ್ತಿದ್ದಾರೆ. ಈ ಯೋಜನೆಯಡಿ 1300 ವೈದ್ಯಕೀಯ ಕ್ರಮಗಳು ಒಳಗೊಂಡಿವೆ. ಇನ್ನು 600 ಚಿಕಿತ್ಸೆಗಳನ್ನು ಸೇರಿಸಬೇಕು ಎಂದು ಡಾ.ಸಿ.ಎನ್. ಮಂಜುನಾಥ್ ಒತ್ತಾಯಿಸಿದರು.

ಆಯುಷ್ಮಾನ್ ಭಾರತ ಯೋಜನೆಯಡಿ ಕುಟುಂಬವೊಂದಕ್ಕೆ ಸಧ್ಯ 5 ಲಕ್ಷ ರೂಗಳ ವಿಮಾ ಮಿತಿ ಜಾರಿಯಲ್ಲಿದೆ. ಈ ಮಿತಿಯನ್ನು 8 ಲಕ್ಷ ರೂಗಳಿಗೆ ಏರಿಸಬೇಕು ಎಂದು ಅವರು ಸರ್ಕಾರವನ್ನು ಆಗ್ರಹಿಸಿದರು.

**ಕೈಗಾರಿಕಾ ತ್ಯಾಜ್ಯ:** ಮೂರನೇ ಹಂತದ ಶುದ್ದೀಕರಣಕ್ಕೆ ಮನವಿ

ನಗರೀಕರಣ ಮತ್ತು ಕೈಗಾರಿಕರಣದ ಪರಿಣಾಮವಾಗಿ ಬೆಂಗಳೂರು ಸೇರಿದಂತೆ ಇತರ ಮಹಾನಗರಗಳಲ್ಲಿ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಈ ತ್ಯಾಜ್ಯವನ್ನು ಸರಿಯಾಗಿ ಸಂಸ್ಕರಿಸದೆ ಕೆರೆಗಳು ಮತ್ತು ನದಿಗಳಿಗೆ ಬಿಡಲಾಗುತ್ತಿದೆ. ಇದರ ಪರಿಣಾಮ ಸಾರ್ವಜನಿಕರ ಮತ್ತು ಜಾನುವಾರುಗಳ ಆರೋಗ್ಯಕ್ಕೆ ಹಾನಿಯಾಗುತ್ತಿದೆ. ಇನ್ನೊಂದೆಡೆ ಕೃಷಿ ಬೆಳೆ ಹಾಗೂ ಪರಿಸರದ ಮೇಲು ದುಷ್ಪರಿಣಾಮ ಬೀರುತ್ತಿದೆ. ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಪ್ರದೇಶಗಳಲ್ಲಿ ತರಕಾರಿ, ಹಣ್ಣುಗಳು ಮುಂತಾದ ಆಹಾರ ಪದಾರ್ಥಗಳಲ್ಲಿ ಸೀಸ, ಆರ್ಸನಿಕ್, ಫಾಸ್ಪೊರಸ್, ಲೋಹ ಹೀಗೆ ಹಾನಿಕಾರಕ ಅಂಶಗಳು ಪತ್ತೆಯಾಗಿವೆ. ಆಸ್ಪತ್ರೆಗಳ ತ್ಯಾಜ್ಯವನ್ನು ಸಂಸ್ಕರಿಸಿದ ರೀತಿಯಲ್ಲೇ ಕೈಗಾರಿಕಾ ತ್ಯಾಜ್ಯವನ್ನು ಸಂಸ್ಕರಿಸಬೇಕು. ಮೂರನೇ ಹಂತದ ಶುದ್ದೀಕರಣಕ್ಕೂ ಒಳಪಡಿಸಬೇಕು ಎಂದ ಅವರು ಈ ವಿಚಾರದಲ್ಲಿ ಕೇಂದ್ರ ಜಲಶಕ್ತಿ ಇಲಾಖೆ, ಪರಿಸರ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ಮನವಿ ಮಾಡಿದರು.

**ಎಕ್ಸ್‌ಪ್ರೆಸ್ ರಸ್ತೆ:** ವಿಶ್ರಾಂತಿ ಕೇಂದ್ರದ ಕೊರತೆ

ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ರಸ್ತೆ ಸುಮಾರು 150 ಕಿಮೀ ಉದ್ದವಿದೆ. ಮಧ್ಯದಲ್ಲಿ ಚಾಲಕರು, ಪ್ರಯಾಣಿಕರಿಗಾಗಿ ವಿಶ್ರಾಂತಿ ಕೇಂದ್ರದ ಕೊರತೆ ಇದೆ. ರಾಮನಗರ ಜಿಲ್ಲಾಡಳಿತ ಸುಮಾರು 8.5 ಎಕರೆ ಭೂಮಿಯನ್ನು ವಿಶ್ರಾಂತಿ ಕೇಂದ್ರಕ್ಕಾಗಿ ಗುರುತಿಸಿದೆ. ವಿಶ್ರಾಂತಿ ಕೇಂದ್ರದ ಜೊತೆಗೆ ಗೊಂಬೆಗಳ ಉದ್ಯಾನವನ, ರೇಷ್ಮೆ ಮ್ಯೂಸಿಯಂ ಸ್ಥಾಪಿಸಿದರೆ ಪ್ರವಾಸೋಧ್ಯಮವನ್ನು ಉತ್ತೇಜಿಸಿದಂತಾಗುತ್ತದೆ ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದರು. ತಮ್ಮ ಕ್ಷೇತ್ರದಲ್ಲಿ ಆನೆ–ಮಾನವ ಸಂಘರ್ಷ ಹೆಚ್ಚಾಗುತ್ತಿದೆ. ಕೃಷಿಭೂಮಿ, ಕೃಷಿ ಬೆಳೆ ನಾಶವಾಗುತ್ತಿದೆ. ರೈತರಿಗೆ ಆರ್ಥಿಕ ನಷ್ಟವಾಗುತ್ತಿದೆ. ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

# ಮಾ.15 ರಂದು ನಗರದಲ್ಲಿ ಒಳ ಮೀಸಲಾತಿ ಸಾಧಕ– ಬಾಧಕ ಕುರಿತ ವಿಚಾರ ಸಂಕಿರಣ: ಆರ್. ಮಹದೇವ್



**ಚಾಮರಾಜನಗರ:** ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ, ಗಡಿ ಕಟ್ಟೆ ಯಜಮಾನರುಗಳು ಹಾಗೂ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ಸಂರಕ್ಷಣಾ ಸಮಿತಿ ಸಹಯೋಗದಲ್ಲಿ ಮಾ.15 ರಂದು ನಗರದಲ್ಲಿ ಒಳ ಮೀಸಲಾತಿ ಸಾಧಕ–ಬಾಧಕ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ತಾ.ಪಂ. ಮಾಜಿ ಅಧ್ಯಕ್ಷ ಆರ್. ಮಹದೇವ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ವಿಚಾರ ಸಂಕಿರಣ ನಡೆಯಲಿದ್ದು, ಮೈಸೂರಿನ ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶಸ್ವಾಮೀಜಿ ದಿವ್ಯಸಾನಿಧ್ಯ ವಹಿಸಲಿದ್ದಾರೆ. ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜ್ಯ ಎಸ್ಸಿ, ಎಸ್ಟಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಅವರು ವಿಚಾರ ಮಂಡನೆ ಮಾಡಲಿದ್ದಾರೆ ಎಂದರು.

ಒಳ ಮೀಸಲಾತಿ ನೀಡುವ ಸಂಬಂಧ ಬಲಗೈ ಸಮುದಾಯಕ್ಕೆ ಭಾರಿ ನ್ಯಾಯವಾಗಿದ್ದು, ನ್ಯಾ. ನಾಗಮೋಹನ್ ದಾಸ್ ಅವರು ನಮ್ಮ ಸಮುದಾಯಕ್ಕೆ ದೊಡ್ಡ ವಂಚನೆ ಮಾಡಿದ್ದಾರೆ. ಹೀಗಾಗಿ ರಾಜ್ಯ ಸರ್ಕಾರ ನಾಗಮೋಹನ್ ದಾಸ್ ಆಯೋಗದ ವರದಿಯನ್ನು ತಿರಸ್ಕಾರ ಮಾಡಬೇಕೆಂಬುವುದು ನಮ್ಮೆಲ್ಲ ಒಕ್ಕೊರಲಿನ ಅಭಿಪ್ರಾಯವಾಗಿದೆ. ಮೀಸಲಾತಿ ಹಂಚಿಕೆಯ ಗೊಂದಲದಲ್ಲಿ ಬಿಂದು ಅನುಷ್ಠಾನ ಗೊಂದಲವಾಗಿದೆ. ಇದರಿಂದ ಪರಿಶಿಷ್ಟ ಜಾತಿ 101 ಜಾತಿಗಳಿಗೂ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ಬಿಂದು ಅನುಷ್ಠಾನ ಬಗ್ಗೆ ನಮ್ಮಲ್ಲಿಯೇ ಗೊಂದಲವಿದೆ. ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ನಾವುಗಳು ಸಹ ಭಾಗವಹಿಸಿದ್ದೇವೆ. ಇದರ ಬಗ್ಗೆ ಅರಿವು ಕಡಿಮೆ ಇದೆ. ಹೀಗಾಗಿ ನಮ್ಮ ಜನರಕ್ಕೆ ಈ ಬಗ್ಗೆ ಜಾಗೃತಿ ಮೂಡಿಸುವ ಜೊತೆಗೆ ರೋಸ್ಟರ್ ಬಿಂದು ಪದ್ದತಿಯನ್ನು ಸಮರ್ಪಕವಾಗಿ ಹಂಚಿಕೆಯಾಗಬೇಕು. ಪ್ರವರ್ಗ 1 , 2 ಮತ್ತು 3ಕ್ಕು ಸಮಾನವಾಗಿ ಹಂಚಿಕೆಯಾಗಬೇಕು. ಕೇವಲ ಪ್ರವರ್ಗ 1ಕ್ಕೆ ಇದರಿಂದ ಹೆಚ್ಚಿನ ಅನುಕೂಲವಾಗುತ್ತಿದೆ. ಇದರ ಬಗ್ಗೆ ನಮ್ಮ ನಾಯಕರು ಈಗಾಗಲೇ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಇದರ ಬಗ್ಗೆ ಎಲ್ಲರು ತಿಳಿದುಕೊಳ್ಳಬೇಕಾಗಿದೆ ಎಂದರು.

ಈ ಕಾರ್ಯಕ್ರಮಕ್ಕೆ ಬಲಗೈ ಸಮುದಾಯದ ಮಾಜಿ ಶಾಸಕರು, ಗಡಿಕಟ್ಟೆ ಯಜಮಾನರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಯುವಕರು, ಸರ್ಕಾರಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ವಿಚಾರ ಸಂಕಿರಣವನ್ನು ಯಶಸ್ವಿಗೊಳಿಸಿಕೊಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಅಯ್ಯನಪುರ ಶಿವಕುಮಾರ್, ಹೊಬ್ಬಸೂರು ರಂಗಸ್ವಾಮಿ, ನಗರಸಭಾ ಮಾಜಿ ಸದಸ್ಯ ಆರ್.ಪಿ.ನಂಜುಂಡಸ್ವಾಮಿ, ನಲ್ಲೂರು ಮಹದೇವಸ್ವಾಮಿ, ಚಾಮುಲ್ ನಿರ್ದೇಶಕ ಕಮರವಾಗಿ ರೇವಣ್ಣ, ಸೋಮಣ್ಣ, ನಾಗವಳ್ಳಿ ನಾಗಯ್ಯ ಇತರರು ಹಾಜರಿದ್ದರು.

## ಹರವೆ ಭಾಗದ ಗ್ರಾಮ ಸಂಪರ್ಕಗಳ ರಸ್ತೆ ಅಭಿವೃದ್ಧಿ ವಿಶೇಷ ಆದ್ಯತೆ: ಶಾಸಕ ಗಣೇಶ ಪ್ರಸಾದ್

# 1.50 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ ಚಾಲನೆ


**ಚಾಮರಾಜನಗರ:** ತಾಲೂಕಿನ ಹರವೆ ಭಾಗದ ಗ್ರಾಮ ಸಂಪರ್ಕ ಗಳ ರಸ್ತೆಯ ಅಭಿವೃದ್ಧಿ ವಿಶೇಷ ಆದ್ಯತೆ ನೀಡಲಾಗಿದೆ ಎಂದು ಗುಂಡ್ಲುಪೇಟೆ ಕ್ಷೇತ್ರದ ಶಾಸಕ ಹೆಚ್.ಎಂ.ಗಣೇಶಪ್ರಸಾದ್ ಹೇಳಿದರು.

ಕ್ಷೇತ್ರದ ಮಲೆಯೂರು ಗ್ರಾಮದ ಸೋಮೇಶ್ವರ ದೇವಸ್ಥಾನದ ರಸ್ತೆಯಿಂದ ಹರವೆ ಮಾರ್ಗದ 1 ಕಿ.ಮಿ ರಸ್ತೆ ಅಭಿವೃದ್ಧಿ 1.50 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಗುಂಡ್ಲುಪೇಟೆ ಕ್ಷೇತ್ರವ್ಯಾಪ್ತಿಗೆ ಹರವೆ ಹೋಬಳಿ 5 ಪಂಚಾಯತಿ ಗಳು ಸೇರ್ಪಡೆ ಯಾದ ಬಳಿಕ ನಮ್ಮ ತಂದೆ ಮಾಜಿ ಸಚಿವರಾದ ದಿವಂಗತ ಹೆಚ್.ಎಸ್. ಮಹದೇವಪ್ರಸಾದ್ ಅವರು ವಿಶೇಷ ಆಶಕ್ತಿ ವಹಿಸಿ ಈ ಭಾಗದ ಮೂಲಭೂತ ಸೌಲಭ್ಯಗಳಾದ ರಸ್ತೆ, ಕುಡಿಯುವ ನೀರು, ಶಾಲಾ–ಕಾಲೇಜು ಅಭಿವೃದ್ಧಿ, ಸಮುದಾಯ ಭವನಗಳ ನಿರ್ಮಾಣ, ಸನುಧಾಯ ಆಧರಿತ ಕಾರ್ಯಕ್ರಮಗಳ ಹೆಚ್ಚು ಒತ್ತು ನೀಡಿದರು ನಂತರ ನಮ್ಮ ತಾಯಿ ಮಾಜಿ ಸಚಿವರಾದ ಗೀತಾಮಹದೇವಪ್ರಸಾದ್ ಈಗ ನಾನು ಶಾಸಕನಾಗಿ ಅವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ.ಕಳೆದ ಎರಡು ವರ್ಷಗಳ ಅವಧಿಯಲ್ಲಿ ಈ ಭಾಗದ ರಸ್ತೆಗಳ ಅಭಿವೃದ್ಧಿ 10 ಕೋಟಿ ವೆಚ್ಚ ಮಾಡಲಾಗಿದೆ. ಎಂದರು.

ಮಲೆಯೂರಿನಿಂದ ಹರವೆ ಮಾರ್ಗದ ರಸ್ತೆ ಯು ಶಿಥಿಲಗೊಂಡಿದ್ದು, ಪಿಡಬ್ಲೂಡಿ ಇಲಾಖೆ ಯಿಂದ ಮೊದಲ ಹಂತ ಮರೆಯೂರಿನಿಂದ 1 ಕಿ.ಮೀ.ರಸ್ತೆ ಅಭಿವೃದ್ಧಿ ಹಾಗೂ ಎರಡನೇಯ ಹಂತದಲ್ಲಿ 1 ಕೋಟಿ ವೆಚ್ಚದಲ್ಲಿ ಹರವೆ ಗುಂಡ್ಲರಸ್ತೆ ಅಭಿವೃದ್ಧಿ ಗೆ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿಜಿ.ಪಂ.ಮಾಜಿ ಸದಸ್ಯ ನವೀನ್ ಕೆರೆಹಳ್ಳಿ, ಮುಖಂಡರಾದ ಮೂಡ್ನಾಕೂಡು ಕುಮಾರ್, ಮಲೆಯೂರು ಅನಂದ್, ರಾಜಪ್ಪ, ನಾಗಪ್ಪ, ಎಂ.ಬಿ.ರೇವಣ್ಣ, ಹರವೆ ರಂಗಸ್ವಾಮಿ, ನಾಗೇಶ್, ಮಹಾದೇವಸ್ವಾಮಿ, ಸಿ.ಸಿದ್ದರಾಜು, ಕೆರೆಹಳ್ಳಿ ರೇವಣ್ಣ, ಮಲೆಯೂರು ಗಿರೀಶ್, ಗುರುಸಿದ್ದೇಗೌಡ, ಕೆಬ್ಬೇಪುರ ಹರೀಶ್, ಗುತ್ತಿಗೆದಾರ ಮಂಜುನಾಥ್‌ಇತರರು ಹಾಜರಿದ್ದರು.





## ಗಂಡನನ್ನು ಹುಡುಕಿಕೊಡಿ ಪ್ಲೀಸ್

ಆನ್‌ಲೈನ್ ಬೆಡ್ಡಿಂಗ್ ಚಟದಿಂದ ಮನೆಯಲ್ಲಿದ್ದ ಚಿನ್ನಾ ಸೇರಿ23 ಲಕ್ಷ ರೂ. ಹಣವನ್ನು ನನ್ನ ಗಂಡ ಕಳೆದು ಪರಾರಿಯಾಗಿದ್ದಾನೆ. ಆತನನ್ನು ಹುಡುಕಿಕೊಡಿ ಎಂದು ಪೊಲೀಸರು ಬಳಿ ಬೇಡಿಕೊಳ್ಳುತ್ತಿದ್ದೇನೆ ಎಂದು ಮೇಘನಾ ತಿಳಿಸಿದರು.

# ದೂರು ಸ್ವೀಕರಿಸಲ್ಲ,ಲಂಚ ಕೇಳುತ್ತಾರೆ

## ಮಹಿಳಾ ಆಯೋಗದ ಅಧ್ಯಕ್ಷೆ ಬಳಿ ಬಂತೂ 450ಕ್ಕೂ ಹೆಚ್ಚು ದೂರು

**ಮೈಸೂರು:** ಪೊಲೀಸ್ ಠಾಣೆಯಲ್ಲಿ ದೂರು ಸ್ವೀಕರಿಸುತ್ತಿಲ್ಲ. ಇದಾಗಿಯೂ ಕೆಲವರು ಲಂಚ ಕೇಳುತ್ತಾರೆ, ಕೆಲವರು ಅಸಭ್ಯ ವಾಗಿ ವರ್ತಿಸುತ್ತಿದ್ದಾರೆಂಬಿತ್ಯಾದಿ 450ಕ್ಕೂ ದೂರುಗಳು ರಾಜ್ಯ ಮಹಿಳಾ ಆಯೋಗದ ಸಭೆಯಲ್ಲಿ ಕೇಳಿ ಬಂದವು.

ನಗರದ ಪ್ರಾದೇಶಿಕ ಆಯುಕ್ತರ ಕಚೇರಿ ಆವರಣದಲ್ಲಿ ನಡೆದ ಮನೆ ಮನೆಗೆ ಮಹಿಳಾ ಆಯೋಗ ವಿಶೇಷ ಕಾರ್ಯಕ್ರಮದಲ್ಲಿ 450ಕ್ಕೂ ಹೆಚ್ಚು ದೂರುಗಳು ಕೇಳಿ ಬಂದವು. ಸಭೆಯ ಅಧ್ಯಕ್ಷತೆವಹಿಸಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ಮಾತನಾಡಿ, 450 ಕ್ಕೂ ಹೆಚ್ಚು ಅಹವಾಲುಗಳು ಬಂದಿದ್ದು, 150ಕ್ಕೂ ದೂರು ದಾಖಲಿಸಿಕೊಂಡಿದ್ದೇವೆ. ವಿಶೇಷ ಎಂದರೆ ಮಂಡ್ಯದಿಂದಲೂ ಹೆಚ್ಚಿನ ಮಂದಿ ಬಂದಿದ್ದರು. ಪ್ರಮುಖವಾಗಿ ವಿದ್ಯಾರ್ಥಿನಿಲಯಗಳಲ್ಲಿ ಸಮಸ್ಯೆ ಕಂಡು ಬಂದಿದೆ. ವಿದ್ಯಾರ್ಥಿ ನಿಲಯಗಳಲ್ಲಿ ಆರೋಗ್ಯ ತಪಾಸಣೆ ಕಡ್ಡಾಯ ಹಾಗೂ ಕಿಟ್ ವಿತರಣೆಯೂ ಕಡ್ಡಾಯವಾಗಿದೆ. ಜತೆಗೆ ತಾಲ್ಲೂಕು ಮಟ್ಟದ ಪಿಎಚ್ ಸಿ,ಸಿ ಎಚ್ ಸಿಗಳಲ್ಲಿಯೂ ತಾಯಿ– ಮಗುವಿನ ಆಸ್ಪತ್ರೆಯಲ್ಲಿ ಕುಡಿಯುವ ನೀರು, ಶೌಚಾಲಯ ಸ್ವಚ್ಚತೆ ನಿಯಮದನುಸಾರ ಇರಲೇಬೇಕು ಎಂದರು.

**ಆಂತರಿಕ ದೂರು ಸಮಿತಿ ಕಡ್ಡಾಯ:** ಜಿಲ್ಲಾಧಿಕಾರಿ ಕಚೇರಿಯಿಂದ ಖಾಸಗಿ ಎಲ್ಲಾ ಕಡೆಗಳಲ್ಲಿ ಮಹಿಳಾ ಮುಖ್ಯಸ್ಥೆ ಹಾಗೂ ಸ್ಥಳೀಯ ಎನ್ ಜಿಓ ಹಾಗೂ ವಕೀಲರನ್ನು ಒಳಗೊಂಡ ಆಂತರಿಕ ಸಮಿತಿಕಡ್ಡಾಯವಾಗಿ ರಚನೆ ಆಗಿರಲೇಬೇಕು. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆಂದರು. ಎರಡು ಪ್ರಕರಣಗಳಲ್ಲಿ ಮಹಿಳಾ ಕಾರ್ಮಿಕರಿಗೆ ತೊಂದರೆ ಆಗಿದ್ದು, ಈ ಬಗ್ಗೆ ಸಂಬಂಧಿಸಿದ ಕಾರ್ಮಿಕ ಅಧಿಕಾರಿಗಳಿಗೆ ಸೂಚಿಸಿ ಈ ಬಗ್ಗೆ ವರದಿ ನೀಡುವಂತೆ ಸೂಚಿಸಿದ್ದೇನೆಂದರು.

ಋತುಚಕ್ರ ರಜೆಯ ವಿಚಾರವಾಗಿ ಕಡ್ಡಾಯವಾಗಿ ರಜೆ ನೀಡಬೇಕಿದೆ. ನನ್ನ ಗಮನಕ್ಕೆ ಬಂದರೆ ತಕ್ಷಣ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗುವುದು. ಸರ್ಕಾರದವರಿಗೆ ಕಡ್ಡಾಯವಾಗಿ ಋತು ಚಕ್ರ ರಜೆ ಸಿಗಲಿದೆ ಎಂದರು.

# ನೌಕರರು ಕರ್ತವ್ಯ ನಿಷ್ಠೆಯಿಂದ ಕಾರ್ಯ ನಿರ್ವಹಿಸಬೇಕು : ಚಲುವರಾಯಸ್ವಾಮಿ



**ಮಂಡ್ಯ:** ಜಿಲ್ಲೆಯಲ್ಲಿ ಕಂದಾಯ ಇಲಾಖೆ ನೌಕರರು ಕರ್ತವ್ಯ ನಿಷ್ಠೆಯಿಂದ ಕಾರ್ಯ ನಿರ್ವಹಿಸಿ ಜಿಲ್ಲೆಯ ಅಭಿವೃದ್ದಿಗೆ ಶ್ರಮಿಸಬೇಕು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ರವರು ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖೆ ನೌಕರರ ಸಂಘ (ರಿ)ಬೆಂಗಳೂರು ಕಂದಾಯ ನೌಕರರ ಸಂಘದ ಭವನ ಕಟ್ಟಡ ಹಾಗೂ ಜಿಲ್ಲಾ ಕಂದಾಯ ಇಲಾಖೆ ನೌಕರರ ಮತ್ತು ನಿವೃತ್ತ ನೌಕರರ ಗೃಹ ನಿರ್ಮಾಣ ಕಚೇರಿನ್ನು ಉದ್ಘಾಟನಾ ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಂದಾಯ ನೌಕರರ ಸಂಘದ ನಿವೃತ್ತ ನೌಕರರ ಗೃಹ ನಿರ್ಮಾಣ ಕಟ್ಟಡ ಬೃಹತ್ ಕಟ್ಟಡವಾಗಿ ನಿರ್ಮಾಣ ವಾಗಿದ್ದು, ಕಂದಾಯ ಇಲಾಖೆ ನೌಕರರ ಸಮಸ್ಯೆಯನ್ನು ಬಗೆಹರಿಸಲು ಬೃಹತ್ ಕಟ್ಟಡ ನಿರ್ಮಾಣ ಆಗಿದ್ದು ನೌಕರರು ಸದುಪಯೋಗ ಪಡಿಸಿಕೊಳ್ಳಿ ಎಂದು ಹೇಳಿದರು

ಕಂದಾಯ ಇಲಾಖೆಯ ನೌಕರರಿಗೆ ಮತ್ತು ನಿವೃತ್ತ ನೌಕರರಿಗೆ ಹಾರೈಸಿದರು.

ಅಪರ ಜಿಲ್ಲಾಧಿಕಾರಿ ಬಿ. ಸಿ ಶಿವಾನಂದಮೂರ್ತಿ ಮಾತನಾಡಿ ನೌಕರರ ಪರಿಶ್ರಮ ದಿಂದ ಈ ಕಟ್ಟಡ ನಿರ್ಮಾಣ ವಾಗಿದೆ.

ನಿವೃತ್ತಿ ಹೊಂದಿರುವ ನೌಕರರ ಸಮಸ್ಯೆ ಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕಟ್ಟಡ ಮಾಡಲಾಗಿದೆ ಎಂದು ತಿಳಿಸಿದರು

ಜಿಲ್ಲೆಯಲ್ಲಿ ಎಲ್ಲಾ ಕಂದಾಯ ಇಲಾಖೆಯ ನೌಕರರು ನಿಷ್ಠೆಯಿಂದ ಕೆಲಸ ಮಾಡಬೇಕು ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆಂಗೇರಿ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರು ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿರವರು ದಿವ್ಯ ಸಾನಿಧ್ಯ ವಹಿಸಿದ್ದರು.

ಪಾಂಡವಪುರ ಉಪ ವಿಭಾಗಾಧಿಕಾರಿ ಶ್ರೀನಿವಾಸ್, ಕರ್ನಾಟಕ ರಾಜ್ಯ ಸಹಕಾರಿ ಕಂದಾಯ ಇಲಾಖೆ ನೌಕರ ಸಂಘದ ಜಿಲ್ಲಾಧ್ಯಕ್ಷರಾದ ಡಿ. ತಮ್ಮಣ್ಣ ಗೌಡ ಉಪಸ್ಥಿತರಿದ್ದರು.

# ತಂಬಾಕು ಬೆಳೆಗಾರರ ಸಮಸ್ಯೆ ಇತ್ಯರ್ಥಕ್ಕೆ ಆಗ್ರಹ

**ಮೈಸೂರು:** ಮೂರು ದಿನಗಳಲ್ಲಿ ಐಟಿಸಿ ಕಂಪನಿ ತಂಬಾಕು ಬೆಳೆಗಾರರ ಸಮಸ್ಯೆ ಇತ್ಯರ್ಥಪಡಿಸಬೇಕು ಇಲ್ಲದಿದ್ದರೆ ಕಂಪನಿಗೆ ಬೀಗ ಹಾಕಿ ಪ್ರತಿಭಟಿಸುವುದಾಗಿ ಕಾಂಗ್ರೆಸ್ ನಾಯಕರು ಎಚ್ಚರಿಕೆ ನೀಡಿದರು.

ಈ ಸಂಬಂಧ ಶುಕ್ರವಾರ ನಗರದ ಇಲವಾಲದ ಹುಣಸೂರು ರಸ್ತೆಯಲ್ಲಿರುವ ಕಂಪನಿ ದ್ವಾರದ ಎದುರು ಜಮಾಯಿಸಿದ ಪಿರಿಯಾಪಟ್ಟಣ, ಹುಣಸೂರು ತಾಲ್ಲೂಕಿನ ತಂಬಾಕು ಬೆಳೆಗಾರರು ಕಂಪನಿ ಹಾಗೂ ಭಾರತೀಯ ತಂಬಾಕು ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಸಾಂಕೇತಿಕವಾಗಿ ಬೀಗ ಜಡಿಯುವುದಾಗಿ ಪ್ರದರ್ಶಿಸುತ್ತಿದ್ದೇವೆ. ಮೂರು ದಿನದಲ್ಲಿ ಬೇಡಿಕೆ ಈಡೇರಿಸದಿದ್ದರೆ, ಶಾಶ್ವತವಾಗಿ ಬೀಗ ಜಡಿಯಲು ಹೋರಾಟ ನಡೆಸಲಾಗುವುದು. ತಂಬಾಕು ಖರೀದಿ ದರವನ್ನು ಪ್ರತಿ ಕೆ.ಜಿಗೆ 320 ನೀಡಬೇಕು. ಖರೀದಿ ಪ್ರಮಾಣವನ್ನು ಶೇ 20ರಿಂದ ಶೇ 50ಕ್ಕೆ ಹೆಚ್ಚಿಸಬೇಕು? ಎಂದು ಒತ್ತಾಯಿಸಿದರು.


ತಂಬಾಕು ಮಂಡಳಿಯವರು ಐಟಿಸಿ ಕಂಪನಿ ಹೇಳಿದಂತೆ ಕೇಳುತ್ತಿದ್ದಾರೆ. 10 ಕೋಟಿ ಟನ್ ಬೆಳೆಯಬೇಕೆಂದು ರೈತರಿಗೆ ಮಂಡಳಿಯು ಗುರಿ ನೀಡಿದ್ದು, ರೈತರು 8.5 ಕೋಟಿ ಟನ್ ಬೆಳೆದಿದ್ದಾರೆ. ಆದರೆ, ಖರೀದಿ ಪ್ರಮಾಣ ಶೇ 20ರಷ್ಟೂ ಇಲ್ಲ. ನಿನ್ನೆಯಿಂದಷ್ಟೇ ಶೇ 40ರಷ್ಟು ಹೆಚ್ಚಿಸಿದ್ದಾರೆ. ಕೆ.ಜಿ 220 ನೀಡುತ್ತಿದ್ದರು. ಇದೀಗ 320ವರೆಗೆ ಕೊಡುವುದಾಗಿ ಭರವಸೆ ನೀಡಿದ್ದಾರೆ. ಕೆ.ಜಿಗೆ 350 ನೀಡಬೇಕೆಂದರು.


ಎಚ್.ಡಿ.ಕುಮಾರಸ್ವಾಮಿ ಸಭೆ ನಡೆಸಿದ ನಂತರವೇ ತಂಬಾಕು ದರ ಕುಸಿಯಿತು. ನಂತರ ಇತ್ತ ತಿರುಗಿಯೂ ನೋಡಿಲ್ಲ. ಕಾಂಗ್ರೆಸ್ ಅನ್ನು ಬಯ್ದುಕೊಂಡು ಓಡಾಡುತ್ತಿದ್ದಾರೆ. ಕಳೆದ 12 ವರ್ಷದಿಂದಲೂ ಕೇಂದ್ರ ಬಿಜೆಪಿ ಸರ್ಕಾರವು ರೈತರನ್ನು ಕೊಲ್ಲುವ ಕೆಲಸವನ್ನು ಮಾಡುತ್ತಿದೆ. ಹುಣಸೂರು, ಪಿರಿಯಾಪಟ್ಟಣ, ಎಚ್.ಡಿ. ಕೋಟೆ, ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ತಂಬಾಕು ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ಸ್ಪಂದಿಸುವ ಕೆಲಸವನ್ನು ಮಾಡಿಲ್ಲ? ಎಂದು ದೂರಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಅರುಣ್ ಕುಮಾರ್, ಕಾಂಗ್ರೆಸ್ ಮುಖಂಡರಾದ ನಿತಿನ್ ವೆಂಕಟೇಶ್, ಬಿ.ಎಂ.ರಾಮು, ರೈತರಾದ ಶ್ರೀನಿವಾಸ್, ಮಹೇಶ್, ಬೋರೇಗೌಡ, ಮಹದೇವಸ್ವಾಮಿ ಪಾಲ್ಗೊಂಡಿದ್ದರು.

## ತಂಬಾಕು ಬೆಳೆಗಾರರ ರಕ್ಷಣೆಗೆ ಮಂಜುನಾಥ್ ಆಗ್ರಹ

ತಂಬಾಕು ಮಂಡಳಿಯು ದರ ಕುಸಿತದಿಂದ ಸಂಕಷ್ಟದಲ್ಲಿರುವ ರೈತರ ರಕ್ಷಣೆಗೆ ನಿಲ್ಲಬೇಕು. ಖಾಸಗಿ ಕಂಪನಿಗಳ ಪರವಾಗಿ ಅಲ್ಲ.ಕಂಪನಿಗಳೇ ಬೆಳೆ ಗುರಿ ನೀಡಿ, ಬಿತ್ತನೆ ಬೀಜವನ್ನು ಸಾವಿರಾರು ರೂಪಾಯಿಗೆ ಕೊಡುತ್ತಿದ್ದಾರೆ. ಈಗ ಖರೀದಿಯನ್ನೂ ಮಾಡುತ್ತಿಲ್ಲ. ಉತ್ತಮ ದರವನ್ನೂ ನೀಡುತ್ತಿಲ್ಲ. ಈಸ್ಟ್ ಇಂಡಿಯಾ ಕಂಪನಿ ಮಾದರಿಯಲ್ಲಿ ನಡೆದುಕೊಳ್ಳುತ್ತಿದೆ ಎಂದು ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಹೇಳಿದರು.





ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

## ಕ್ಷಮಿಸಬೇಕು: ಏಕೆ?

### ಇಂತಹದೊಂದು ಶೀರ್ಷಿಕೆ ಕಂಡರೆ ತಕ್ಷಣ ಅನಿಸುವುದು? ಏನಪ್ಪಾ ಇಂತಹ ಪ್ರಶ್ನೆ...

ಮನದ ಮಾತು...

ಎಲ್ಲರೂ ಜೀವನದಲ್ಲಿ ಒಂದೊಮ್ಮೆ ಹಿಂದೆ ತಿರುಗಿ ನೋಡಿದಾಗ ನಮ್ಮನ್ನು ನೋಯಿಸಿದವರ ದೊಡ್ಡ ಪಟ್ಟಿಯೇ ನಮ್ಮ ಬಳಿ ಇರುತ್ತದೆ. ಅವಕಾಶ ಇದ್ದಾಗ ಉಪಯೋಗಿಸಿಕೊಂಡು ದೂರ ಸರಿದ ಎಷ್ಟೋ ಜನರು, ಸಂದರ್ಭ ಬಂದಾಗ ಬದಲಾಗಿದವರು ಎಷ್ಟೋ ಜನರು, ಕೊಟ್ಟ ಮಾತಿಗೆ ತಪ್ಪಿದವರ ಲೆಕ್ಕಕ್ಕೆ ಎಣಿಕೆ ಇಲ್ಲ.

ಇನ್ನೂ ಕೆಲವು ಸಂದರ್ಭಗಳಲ್ಲಿ ? ಬಳಗದವರು ಹೀಗೆ ಮಾಡಿದರು, ನನಗೆ ಎಷ್ಟೊಂದು ನಿರ್ಬಂಧಗಳನ್ನು ಹೇಳಿದರು, ತಮ್ಮ ವಿಷಯಕ್ಕೆ ಬಂದಾಗ ಮಾತ್ರ ಬದಲಾಗಿಬಿಟ್ಟರು, ತಮ್ಮ ಸೊಸೆಯನ್ನು ಪ್ರೀತಿಯಿಂದ ನೋಡಿಕೊಂಡರು ? ಇಂತಹ ಅನೇಕ ಅನುಭವಗಳು ನೆನಪಾಗುತ್ತವೆ.

ಹಲವು ಸಾರಿ ಮೊದಲು ಮದುವೆಯಾಗಿ ಬಂದ ಹಿರಿ ಸೊಸೆಗೆ ಸಾಕಷ್ಟು ನಿರ್ಬಂಧಗಳನ್ನು ಹೇರಿರುತ್ತಾರೆ. ಇಂಥದ್ದು ಹೀಗೆ ಆಗಬೇಕು ಎಂಬ ಕಟ್ಟಳೆಗಳು ಕೂಡ ಇರುತ್ತವೆ. ಮಾತು ಮೀರದೆ ನಡೆದುಕೊಳ್ಳಬೇಕು, ಸಾಮಾಜಿಕ ಜವಾಬ್ದಾರಿಗಳನ್ನು ಹೊತ್ತುಕೊಳ್ಳಬೇಕು, ಹಿರಿಯರ ಮುಂದೆ ಹೀಗೆ ಇರಬೇಕು, ಹಾಗೆ ಇರಬೇಕು ? ಇಂತಹ ಅನೇಕ ನಿಯಮಗಳನ್ನು ಇಟ್ಟಿರುತ್ತಾರೆ.

ಆದರೆ ಇನ್ನೊಬ್ಬಳು ಬಂದಾಗ ಸ್ವಲ್ಪ ಸಡಿಲವಾಗಿಬದಲಾಗಿರುತ್ತಾರೆ. ಕೇವಲ ಅತ್ತೆ?ಸೊಸೆ ಸಂಬಂಧದಲ್ಲೇ ಅಲ್ಲ; ತಂದೆ?ಮಕ್ಕಳು, ಕೆಲಸದ ಕಛೇರಿಗಳಲ್ಲಿ ಮತ್ತೆ ಹಲವೆಡೆ ಈ ರೀತಿಯ ಭಿನ್ನಾಭಿಪ್ರಾಯಗಳನ್ನು ಕಾಣಬಹುದು.

ಅತ್ತೆಯಂದರು ಹೇಳುತ್ತಲೇ ಇರುತ್ತಾರೆ ? ?ಅಯ್ಯೋ, ನಮ್ಮ ಕಾಲದಲ್ಲಿ ನಾವು ಅಷ್ಟು ಕಷ್ಟ ಪಟ್ಟಿದ್ದೇವೆ...? ಎಂದು. ಇನ್ನು ತಾಯಂದಿರು ಕೂಡ ಮಕ್ಕಳ ಮುಂದೆ ?ನನಗೆ ಗಂಡ, ಅತ್ತೆ, ಮನೆಯವರು ಹೀಗೆ ಮಾಡಿದರು, ಹಾಗೆ ಮಾಡಿದರು? ಎಂದು ತಮ್ಮ ನೋವನ್ನು ತೋಡಿಕೊಳ್ಳುತ್ತಲೇ ಇರುತ್ತಾರೆ.

ಹಾಗಾದರೆ ಇದಕ್ಕೆ ಅಂತ್ಯವೇನು?

ಎಲ್ಲಕ್ಕಿಂತ ಮುಖ್ಯವಾಗಿ ಇಂತಹ ಈಗಾಗಲೇ ನಡೆದ ಘಟನೆಗಳನ್ನು ಮರೆತು ಬಿಡಬೇಕು. ಇನ್ನೊಬ್ಬರನ್ನು ಕ್ಷಮಿಸಿಬಿಡಬೇಕು.

?ಅವರಿಗೆ ಏಕೆ ಕ್ಷಮಿಸಬೇಕು? ಅವರಿಗೆ ಅವರ ತಪ್ಪಿನ ಅರಿವು ಆಗುವದು ಬೇಡವೇ?? ಎಂಬ ಪ್ರಶ್ನೆ ಕೆಲವರಿಗೆ ಬರುತ್ತದೆ. ?ಅವರಿಗೆ ಸರಿಯಾಗಿ ಪಾಠ ಕಲಿಸುವೆ? ಎಂಬ ಠೇಂಕಾರ ಕೆಲವರದು.

ಆದರೆ ದ್ವೇಷ ಮತ್ತು ಸಿಟ್ಟು ಎಂಬುದು ಬೆಂಕಿಯಂತಿದೆ, ವಿಷದಂತದ್ದು. ಅದು ನಮ್ಮ ಮನಸ್ಸಿನಲ್ಲಿ ಇದ್ದರೆ ಮೊದಲು ಅದು ನಮ್ಮನ್ನೇ ಸುಡುತ್ತದೆ, ನಂತರ ಅವರನ್ನು.

ನಮ್ಮ ನೆಮ್ಮದಿಗಾಗಿ ಅವರನ್ನು ಮನ್ನಿಸಬೇಕು. ಅವರಿಂದಾದ ಹಳೆಯ ತಪ್ಪುಗಳನ್ನು ಬಿಟ್ಟು ಬಿಡಬೇಕು. ಇಲ್ಲದಿದ್ದರೆ ಮುಳ್ಳಿನ ಮೇಲೆ ಸಿಕ್ಕಿಬಿದ್ದ ಬಟ್ಟೆಯಂತೆ ನಾವು ಅಲ್ಲೇ ಸಿಕ್ಕಿಹಾಕಿಕೊಳ್ಳುತ್ತೇವೆ; ಮುಂದೆ ಹೋಗಲು ಸಾಧ್ಯವೇ ಇಲ್ಲ.

ಹಠ ಮಾಡಿ ಮಾತು ಬಿಡುವರು ಕೆಲವರು. ಇನ್ನೂ ಕೆಲವರು ಎಲ್ಲವನ್ನೂ ಮರೆತು ಮತ್ತೆ ಮಾತನಾಡಲು ಬಂದಾಗ ?ಅವರದೇ ತಪ್ಪು, ಅದಕ್ಕೇ ತಗ್ಗಿ ಬಗ್ಗಿ ಬಂದಿದ್ದಾರೆ? ಎಂಬ ಭ್ರಮೆ ಹೊಂದುವರು.

ಆದರೆ ಅದು ಅವರ ಭ್ರಮೆ ಮಾತ್ರ. ಅವರ ಆ ಭಾವನೆ ನಮ್ಮ ವ್ಯಕ್ತಿತ್ವವನ್ನು ಕುಗ್ಗಿಸುವುದಿಲ್ಲ. ಕ್ಷಮಿಸುವುದು ದುರ್ಬಲತೆ ಅಲ್ಲ; ಅದು ಮನಸ್ಸಿನ ದೊಡ್ಡತನ.

ಜೀವನದಲ್ಲಿ ಒಳ್ಳೆಯ ಉದ್ದೇಶಗಳು, ಚಿಂತನೆಗಳು ಇರಲಿ. ಇನ್ನೊಬ್ಬರಿಗೆ ಪಾಠ ಕಲಿಸುವುದು ನಮ್ಮ ಗುರಿಯಾಗಬಾರದು. ಅದಕ್ಕಿಂತ ನಮ್ಮ ಬದುಕನ್ನು ಸುಂದರವಾಗಿಸುವ ಪ್ರಯತ್ನ ಮಾಡಬೇಕು.




ದೇವರು ಸುಂದರವಾದ ಬದುಕನ್ನು ಕೊಟ್ಟಿದ್ದಾನೆ. ಅದನ್ನು ಆನಂದದಿಂದ ಸಂಭ್ರಮಿಸಬೇಕು. ನಿಸರ್ಗ ರಮಣೀಯವಾಗಿದೆ ? ಸುಂದರವಾದ ಸೂರ್ಯೋದಯ, ಅರಳುವ ಹೂಗಳು, ಗಾಳಿಗೆ ತೂಗುವ ಮರಗಳು, ಹಾರುವ ಹಕ್ಕಿಗಳು. ಇಂತಹ ರಮಣೀಯ ಪ್ರಕೃತಿಯ ಆನಂದವನ್ನು ಅನುಭವಿಸುತ್ತಾ ಪ್ರತಿ ಕ್ಷಣವನ್ನು ಸುಂದರವಾಗಿಸಿಕೊಳ್ಳಬೇಕು.

ಅದನ್ನು ಬಿಟ್ಟು ?ಅವರು ಹೀಗೆ ಮಾಡಿದರು, ಹಾಗೆ ಮಾಡಿದರು? ಎಂದು ಹಳೆಯ ಕೊಳೆಯನ್ನೇ ಎತ್ತಿಹಾಕುತ್ತಾ ಇದ್ದರೆ ಅದು ತಿಪ್ಪೆಯನ್ನು ಸಾರಿಸಿದಂತಾಗುತ್ತದೆ.

ಮನುಷ್ಯ ದೇವರಲ್ಲ. ಭಾವನೆಗಳು, ನೋವು, ನಲಿವು ಸಹಜ. ಘಟನೆ ನಡೆದಾಗ ತಾತ್ಕಾಲಿಕ ಬೇಸರ, ನೋವು, ಸಿಟ್ಟು ಸಹಜ ಪ್ರತಿಕ್ರಿಯೆಗಳು. ಆದರೆ ಜೀವನದುದ್ದಕ್ಕೂ ಒಬ್ಬರನ್ನು ದ್ವೇಷಿಸುತ್ತಲೇ, ಬೈಯುತ್ತಲೇ ಬದುಕುವುದು ಬದುಕಲ್ಲ. ನಾವು ಹುಟ್ಟಿರುವ ಉದ್ದೇಶವೂ ಇನ್ನೊಬ್ಬರನ್ನು ದ್ವೇಷಿಸಲು ಅಲ್ಲ.

ಮನಸ್ಸು ತುಂಬಾ ಬೇಸರವಾದಾಗ ಕೆಲವೊಮ್ಮೆ ಸ್ವಲ್ಪ ವಿರಾಮ ತೆಗೆದುಕೊಳ್ಳಬೇಕು. ಒಂದು ಒಳ್ಳೆಯ ಹಾಡನ್ನು ಕೇಳಬಹುದು, ಯೋಗ ಅಥವಾ ಪ್ರಾಣಾಯಾಮ ಮಾಡಬಹುದು, ಸ್ವಲ್ಪ ಪ್ರಕೃತಿಯ ಮಧ್ಯೆ ನಡೆಯಬಹುದು. ಇಂತಹ ಸಣ್ಣ ಅಭ್ಯಾಸಗಳು ಮನಸ್ಸಿಗೆ ಶಾಂತಿ ನೀಡುತ್ತವೆ.

ನಮ್ಮನ್ನು ವಿರೋಧಿಸುವವರು ಬಹಳೇ ಇದ್ದರೆ ನಮ್ಮ ಬಗ್ಗೆ ಅಪಪ್ರಚಾರ ಮಾಡಬಹುದು, ಕಟುನುಡಿ ಆಡಬಹುದು. ಅದಕ್ಕೆ ಕೆಲವರು ತಾವು ಹೇಗೆ ಸರಿ ಎಂದು ಸಾಬೀತುಪಡಿಸಲು ಒದ್ದಾಡುತ್ತಾರೆ. ತಮ್ಮ ತಪ್ಪಿಲ್ಲ, ಅವರದೇ ತಪ್ಪು ಎಂದು ತೋರಿಸಲು ಪ್ರಯತ್ನಿಸುತ್ತಾರೆ.

ಬಿಟ್ಟು ಬಿಡಿ. ನೀವು ಈ ಭೂಮಿಗೆ ಯಾರನ್ನೂ ಮೆಚ್ಚಿಸಲು ಬಂದಿಲ್ಲ. ಅದು ಜೀವನದ ಗುರಿಯೂ ಅಲ್ಲ. ಎಲ್ಲರಿಗೂ ಸರಿಕಾಣಬೇಕು ಅಂತ ಎಲ್ಲಿ ಇದೆ? ನಮ್ಮ ಆತ್ಮಸಾಕ್ಷಿಗೆ ಸರಿಯಾಗಿದ್ದರೆ ಸಾಕು.

ಮೆಚ್ಚಿಸಬೇಕಾದರೆ ಭಗವಂತನನ್ನು ಮೆಚ್ಚಿಸಿ, ಜನರನ್ನು ಅಲ್ಲ! ಯಾರು ಏನು ಹೇಳುವುದರಿಂದ ಮಾನ ಸವಿಯುವುದಿಲ್ಲ.

ಅಂತಹ ಅಲ್ಪರನ್ನು ಕ್ಷಮಿಸಿಬಿಡಬೇಕು. ಏಕೆಂದರೆ ಅಲ್ಪರ ಜೊತೆ ಹೋರಾಡುವುದು ಜೀವನದ ಉದ್ದೇಶ ಅಲ್ಲ. ಅಲ್ಪರ ಸಂಗ ಮಾನಭಂಗ.

ಗುರು ಗೋರ ಗೋಪಾಲ ದಾಸರು ಹೇಳುತ್ತಾರೆ ?

?ಸಬ್ಕೋ ಸಫಾಯಿ ಮತ್ ದೋ? ಆಪ್ ಇನ್ಸಾನ್ ಹೋ, ಸಾಬೂನ್ ನಹೀ.?

ಎಲ್ಲರಿಗೂ ನಾವು ಸಚ್ಚರಿತ್ರರು ಎಂದು ಸಾಬೀತು ಮಾಡಲು ಜೀವನ ವಕೀಲವಲ್ಲ.

ಸಮಾಪನ

ಕೊನೆಗೆ ನೆನಪಿಡಬೇಕಾದ ಒಂದು ಸತ್ಯ ಇದೆ ?
ಕ್ಷಮೆ ಎಂದರೆ ಅವರ ತಪ್ಪನ್ನು ಮರೆತದ್ದು ಅಲ್ಲ;
ನಮ್ಮ ಮನಸ್ಸನ್ನು ದ್ವೇಷದ ಬಂಧನದಿಂದ ಮುಕ್ತಗೊಳಿಸಿದದ್ದು.
ಹಳೆಯ ನೋವುಗಳನ್ನು ಹಿಡಿದುಕೊಂಡರೆ ಜೀವನ ಭಾರವಾಗುತ್ತದೆ.
ಅವುಗಳನ್ನು ಬಿಟ್ಟುಬಿಟ್ಟರೆ ಮನಸ್ಸು ಹಗುರವಾಗುತ್ತದೆ.
ಕ್ಷಮೆ ಮನಸ್ಸಿಗೆ ಶಾಂತಿ ನೀಡುತ್ತದೆ,
ಶಾಂತಿ ಜೀವನವನ್ನು ಸುಂದರಗೊಳಿಸುತ್ತದೆ.
? ನಮ್ಮ ಮನಸ್ಸಿನ ಮುಕ್ತಿಗೆ ದಾರಿ

ಇಂತಹದೊಂದು ಶೀರ್ಷಿಕೆ ಕಂಡರೆ ತಕ್ಷಣ ಅನಿಸುವುದು ? ಏನಪ್ಪಾ ಇಂತಹ ಪ್ರಶ್ನೆ...

ಎಲ್ಲರೂ ಜೀವನದಲ್ಲಿ ಒಂದೊಮ್ಮೆ ಹಿಂದೆ ತಿರುಗಿ ನೋಡಿದಾಗ ನಮ್ಮನ್ನು ನೋಯಿಸಿದವರ ದೊಡ್ಡ ಪಟ್ಟಿಯೇ ನಮ್ಮ ಬಳಿ ಇರುತ್ತದೆ. ಅವಕಾಶ ಇದ್ದಾಗ ಉಪಯೋಗಿಸಿಕೊಂಡು ದೂರ ಸರಿದ ಎಷ್ಟೋ ಜನರು, ಸಂದರ್ಭ ಬಂದಾಗ ಬದಲಾಗಿದವರು ಎಷ್ಟೋ ಜನರು, ಕೊಟ್ಟ ಮಾತಿಗೆ ತಪ್ಪಿದವರ ಲೆಕ್ಕಕ್ಕೆ ಎಣಿಕೆ ಇಲ್ಲ.

ಇನ್ನೂ ಕೆಲವು ಸಂದರ್ಭಗಳಲ್ಲಿ ? ಬರೆಯುವಾಗ ಹೀಗೆ ಮಾಡಿದರು, ನನಗೆ ಎಷ್ಟೊಂದು ನಿರ್ಬಂಧಗಳನ್ನು ಹೇಳಿದರು, ತಮ್ಮ ವಿಷಯಕ್ಕೆ ಬಂದಾಗ ಮಾತ್ರ ಬದಲಾಗಿಬಿಟ್ಟರು, ತಮ್ಮ ಸೊಸೆಯನ್ನು ಪ್ರೀತಿಯಿಂದ ನೋಡಿಕೊಂಡರು ? ಇಂತಹ ಅನೇಕ ಅನುಭವಗಳು ನೆನಪಾಗುತ್ತವೆ.

ಹಲವು ಸಾರಿ ಮೊದಲು ಮದುವೆಯಾಗಿ ಬಂದ ಹಿರಿ ಸೊಸೆಗೆ ಸಾಕಷ್ಟು ನಿರ್ಬಂಧಗಳನ್ನು ಹೇರಿರುತ್ತಾರೆ. ಇಂಥದ್ದು ಹೀಗೆ ಆಗಬೇಕು ಎಂಬ ಕಟ್ಟಳೆಗಳು ಕೂಡ ಇರುತ್ತವೆ. ಮಾತು ಮೀರದೆ ನಡೆದುಕೊಳ್ಳಬೇಕು, ಸಾಮಾಜಿಕ ಜವಾಬ್ದಾರಿಗಳನ್ನು ಹೊತ್ತುಕೊಳ್ಳಬೇಕು, ಹಿರಿಯರ ಮುಂದೆ ಹೀಗೆ ಇರಬೇಕು, ಹಾಗೆ ಇರಬೇಕು ? ಇಂತಹ ಅನೇಕ ನಿಯಮಗಳನ್ನು ಇಟ್ಟಿರುತ್ತಾರೆ.

ಆದರೆ ಇನ್ನೊಬ್ಬಳು ಬಂದಾಗ ಸ್ವಲ್ಪ ಸಡಿಲವಾಗಿಬದಲಾಗಿರುತ್ತಾರೆ. ಕೇವಲ ಅತ್ತೆ?ಸೊಸೆ ಸಂಬಂಧದಲ್ಲೇ ಅಲ್ಲ; ತಂದೆ?ಮಕ್ಕಳು, ಕೆಲಸದ ಕಛೇರಿಗಳಲ್ಲಿ ಮತ್ತೆ ಹಲವೆಡೆ ಈ ರೀತಿಯ ಭಿನ್ನಾಭಿಪ್ರಾಯಗಳನ್ನು ಕಾಣಬಹುದು.

ಅತ್ತೆಯಂದರು ಹೇಳುತ್ತಲೇ ಇರುತ್ತಾರೆ ? ?ಅಯ್ಯೋ, ನಮ್ಮ ಕಾಲದಲ್ಲಿ ನಾವು ಅಷ್ಟು ಕಷ್ಟ ಪಟ್ಟಿದ್ದೇವೆ...? ಎಂದು. ಇನ್ನು ತಾಯಂದಿರು ಕೂಡ ಮಕ್ಕಳ ಮುಂದೆ ?ನನಗೆ ಗಂಡ, ಅತ್ತೆ, ಮನೆಯವರು ಹೀಗೆ ಮಾಡಿದರು, ಹಾಗೆ ಮಾಡಿದರು? ಎಂದು ತಮ್ಮ ನೋವನ್ನು ತೋಡಿಕೊಳ್ಳುತ್ತಲೇ ಇರುತ್ತಾರೆ.

ಹಾಗಾದರೆ ಇದಕ್ಕೆ ಅಂತ್ಯವೇನು?

ಎಲ್ಲಕ್ಕಿಂತ ಮುಖ್ಯವಾಗಿ ಇಂತಹ ಈಗಾಗಲೇ ನಡೆದ ಘಟನೆಗಳನ್ನು ಮರೆತು ಬಿಡಬೇಕು. ಇನ್ನೊಬ್ಬರನ್ನು ಕ್ಷಮಿಸಿಬಿಡಬೇಕು.

?ಅವರಿಗೆ ಏಕೆ ಕ್ಷಮಿಸಬೇಕು? ಅವರಿಗೆ ಅವರ ತಪ್ಪಿನ ಅರಿವು ಆಗುವದು ಬೇಡವೇ?? ಎಂಬ ಪ್ರಶ್ನೆ ಕೆಲವರಿಗೆ ಬರುತ್ತದೆ. ?ಅವರಿಗೆ ಸರಿಯಾಗಿ ಪಾಠ ಕಲಿಸುವೆ? ಎಂಬ ಠೇಂಕಾರ ಕೆಲವರದು.

ಆದರೆ ದ್ವೇಷ ಮತ್ತು ಸಿಟ್ಟು ಎಂಬುದು ಬೆಂಕಿಯಂತಿದೆ, ವಿಷದಂತದ್ದು. ಅದು ನಮ್ಮ ಮನಸ್ಸಿನಲ್ಲಿ ಇದ್ದರೆ ಮೊದಲು ಅದು ನಮ್ಮನ್ನೇ ಸುಡುತ್ತದೆ, ನಂತರ ಅವರನ್ನು. ನಮ್ಮ ನೆಮ್ಮದಿಗಾಗಿ ಅವರನ್ನು ಮನ್ನಿಸಬೇಕು. ಅವರಿಂದಾದ ಹಳೆಯ ತಪ್ಪುಗಳನ್ನು ಬಿಟ್ಟು ಬಿಡಬೇಕು. ಇಲ್ಲದಿದ್ದರೆ ಮುಳ್ಳಿನ ಮೇಲೆ ಸಿಕ್ಕಿಬಿದ್ದ ಬಟ್ಟೆಯಂತೆ ನಾವು ಅಲ್ಲೇ ಸಿಕ್ಕಿಹಾಕಿಕೊಳ್ಳುತ್ತೇವೆ; ಮುಂದೆ ಹೋಗಲು ಸಾಧ್ಯವೇ ಇಲ್ಲ. ಹಠ ಮಾಡಿ ಮಾತು ಬಿಡುವರು ಕೆಲವರು. ಇನ್ನೂ ಕೆಲವರು ಎಲ್ಲವನ್ನೂ ಮರೆತು ಮತ್ತೆ ಮಾತನಾಡಲು ಬಂದಾಗ ?ಅವರದೇ ತಪ್ಪು, ಅದಕ್ಕೇ ತಗ್ಗಿ ಬಗ್ಗಿ ಬಂದಿದ್ದಾರೆ? ಎಂಬ ಭ್ರಮೆ ಹೊಂದುವರು.

ಆದರೆ ಅದು ಅವರ ಭ್ರಮೆ ಮಾತ್ರ. ಅವರ ಆ ಭಾವನೆ ನಮ್ಮ ವ್ಯಕ್ತಿತ್ವವನ್ನು ಕುಗ್ಗಿಸುವುದಿಲ್ಲ. ಕ್ಷಮಿಸುವುದು ದುರ್ಬಲತೆ ಅಲ್ಲ; ಅದು ಮನಸ್ಸಿನ ದೊಡ್ಡತನ.

ಜೀವನದಲ್ಲಿ ಒಳ್ಳೆಯ ಉದ್ದೇಶಗಳು, ಚಿಂತನೆಗಳು ಇರಲಿ. ಇನ್ನೊಬ್ಬರಿಗೆ ಪಾಠ ಕಲಿಸುವುದು ನಮ್ಮ ಗುರಿಯಾಗಬಾರದು. ಅದಕ್ಕಿಂತ ನಮ್ಮ ಬದುಕನ್ನು ಸುಂದರವಾಗಿಸುವ ಪ್ರಯತ್ನ ಮಾಡಬೇಕು.

ದೇವರು ಸುಂದರವಾದ ಬದುಕನ್ನು ಕೊಟ್ಟಿದ್ದಾನೆ. ಅದನ್ನು ಆನಂದದಿಂದ ಸಂಭ್ರಮಿಸಬೇಕು. ನಿಸರ್ಗ ರಮಣೀಯವಾಗಿದೆ ? ಸುಂದರವಾದ ಸೂರ್ಯೋದಯ, ಅರಳುವ ಹೂಗಳು, ಗಾಳಿಗೆ ತೂಗುವ ಮರಗಳು, ಹಾರುವ ಹಕ್ಕಿಗಳು. ಇಂತಹ ರಮಣೀಯ ಪ್ರಕೃತಿಯ ಆನಂದವನ್ನು ಅನುಭವಿಸುತ್ತಾ ಪ್ರತಿ ಕ್ಷಣವನ್ನು ಸುಂದರವಾಗಿಸಿಕೊಳ್ಳಬೇಕು.

ಅದನ್ನು ಬಿಟ್ಟು ?ಅವರು ಹೀಗೆ ಮಾಡಿದರು, ಹಾಗೆ ಮಾಡಿದರು? ಎಂದು ಹಳೆಯ ಕೊಳೆಯನ್ನೇ ಎತ್ತಿಹಾಕುತ್ತಾ ಇದ್ದರೆ ಅದು ತಿಪ್ಪೆಯನ್ನು ಸಾರಿಸಿದಂತಾಗುತ್ತದೆ.

ಮನುಷ್ಯ ದೇವರಲ್ಲ. ಭಾವನೆಗಳು, ನೋವು, ನಲಿವು ಸಹಜ. ಘಟನೆ ನಡೆದಾಗ ತಾತ್ಕಾಲಿಕ ಬೇಸರ, ನೋವು, ಸಿಟ್ಟು ಸಹಜ ಪ್ರತಿಕ್ರಿಯೆಗಳು. ಆದರೆ ಜೀವನದುದ್ದಕ್ಕೂ ಒಬ್ಬರನ್ನು ದ್ವೇಷಿಸುತ್ತಲೇ, ಬೈಯುತ್ತಲೇ ಬದುಕುವುದು ಬದುಕಲ್ಲ. ನಾವು ಹುಟ್ಟಿರುವ ಉದ್ದೇಶವೂ ಇನ್ನೊಬ್ಬರನ್ನು ದ್ವೇಷಿಸಲು ಅಲ್ಲ.

ಮನಸ್ಸು ತುಂಬಾ ಬೇಸರವಾದಾಗ ಕೆಲವೊಮ್ಮೆ ಸ್ವಲ್ಪ ವಿರಾಮ ತೆಗೆದುಕೊಳ್ಳಬೇಕು. ಒಂದು ಒಳ್ಳೆಯ ಹಾಡನ್ನು ಕೇಳಬಹುದು, ಯೋಗ ಅಥವಾ ಪ್ರಾಣಾಯಾಮ ಮಾಡಬಹುದು, ಸ್ವಲ್ಪ ಪ್ರಕೃತಿಯ ಮಧ್ಯೆ ನಡೆಯಬಹುದು. ಇಂತಹ ಸಣ್ಣ ಅಭ್ಯಾಸಗಳು ಮನಸ್ಸಿಗೆ ಶಾಂತಿ ನೀಡುತ್ತವೆ.

ನಮ್ಮನ್ನು ವಿರೋಧಿಸುವವರು ಬಹಳೇ ಇದ್ದರೆ ನಮ್ಮ ಬಗ್ಗೆ ಅಪಪ್ರಚಾರ ಮಾಡಬಹುದು, ಕಟುನುಡಿ ಆಡಬಹುದು. ಅದಕ್ಕೆ ಕೆಲವರು ತಾವು ಹೇಗೆ ಸರಿ ಎಂದು ಸಾಬೀತುಪಡಿಸಲು ಒದ್ದಾಡುತ್ತಾರೆ. ತಮ್ಮ ತಪ್ಪಿಲ್ಲ, ಅವರದೇ ತಪ್ಪು ಎಂದು ತೋರಿಸಲು ಪ್ರಯತ್ನಿಸುತ್ತಾರೆ.

ಬಿಟ್ಟು ಬಿಡಿ. ನೀವು ಈ ಭೂಮಿಗೆ ಯಾರನ್ನೂ ಮೆಚ್ಚಿಸಲು ಬಂದಿಲ್ಲ. ಅದು ಜೀವನದ ಗುರಿಯೂ ಅಲ್ಲ. ಎಲ್ಲರಿಗೂ ಸರಿಕಾಣಬೇಕು ಅಂತ ಎಲ್ಲಿ ಇದೆ? ನಮ್ಮ ಆತ್ಮಸಾಕ್ಷಿಗೆ ಸರಿಯಾಗಿದ್ದರೆ ಸಾಕು.

ಮೆಚ್ಚಿಸಬೇಕಾದರೆ ಭಗವಂತನನ್ನು ಮೆಚ್ಚಿಸಿ, ಜನರನ್ನು ಅಲ್ಲ! ಯಾರು ಏನು ಹೇಳುವುದರಿಂದ ಮಾನ ಸವಿಯುವುದಿಲ್ಲ.

ಅಂತಹ ಅಲ್ಪರನ್ನು ಕ್ಷಮಿಸಿಬಿಡಬೇಕು. ಏಕೆಂದರೆ ಅಲ್ಪರ ಜೊತೆ ಹೋರಾಡುವುದು ಜೀವನದ ಉದ್ದೇಶ ಅಲ್ಲ. ಅಲ್ಪರ ಸಂಗ ಮಾನಭಂಗ.

ಗುರು ಗೋರ ಗೋಪಾಲ ದಾಸರು ಹೇಳುತ್ತಾರೆ ?

?ಸಬ್ಕೋ ಸಫಾಯಿ ಮತ್ ದೋ? ಆಪ್ ಇನ್ಸಾನ್ ಹೋ, ಸಾಬೂನ್ ನಹೀ.? ಎಲ್ಲರಿಗೂ ನಾವು ಸಚ್ಚರಿತ್ರರು ಎಂದು ಸಾಬೀತು ಮಾಡಲು ಜೀವನ ವಕೀಲವಲ್ಲ.

ಸಮಾಪನ

**ಕೊನೆಗೆ ನೆನಪಿಡಬೇಕಾದ ಒಂದು ಸತ್ಯ ಇದೆ ?**
**ಕ್ಷಮೆ ಎಂದರೆ ಅವರ ತಪ್ಪನ್ನು ಮರೆತದ್ದು ಅಲ್ಲ;**
**ನಮ್ಮ ಮನಸ್ಸನ್ನು ದ್ವೇಷದ ಬಂಧನದಿಂದ ಮುಕ್ತಗೊಳಿಸಿದದ್ದು.**
**ಹಳೆಯ ನೋವುಗಳನ್ನು ಹಿಡಿದುಕೊಂಡರೆ ಜೀವನ ಭಾರವಾಗುತ್ತದೆ.**
**ಅವುಗಳನ್ನು ಬಿಟ್ಟುಬಿಟ್ಟರೆ ಮನಸ್ಸು ಹಗುರವಾಗುತ್ತದೆ.**
**ಕ್ಷಮೆ ಮನಸ್ಸಿಗೆ ಶಾಂತಿ ನೀಡುತ್ತದೆ,**
**ಶಾಂತಿ ಜೀವನವನ್ನು ಸುಂದರಗೊಳಿಸುತ್ತದೆ.**
**ದ್ವೇಷದ ಬೆಂಕಿಯೊಳಗೆ ಸುಟ್ಟುಕೊಳ್ಳುವ ಹೃದಯಕ್ಕಿಂತ**
**ಕ್ಷಮೆಯ ತಂಪಿನೊಳಗೆ ನೆಲೆಸುವ ಮನವೇ ಶ್ರೇಷ್ಠ.?**

## ಗುರು ಹಿರಿಯರ ಭಕ್ತಿ




ನಮ್ಮ ದೇಶದ ಜನರು ತಮ್ಮ ಹೆತ್ತವರು, ಹಿರಿಯರು,ಶಿಕ್ಷಕರು ಮತ್ತು ಉದಾತ್ತ ಆತ್ಮಗಳ ಮುಂದೆ ಅವರ ಪಾದ ಸ್ಪರ್ಶಿಸುವ ಮೂಲಕ ನಮಸ್ಕರಿಸುತ್ತಾರೆ.ಹಿರಿಯರುತಮ್ಮ ಕೈಯನ್ನು ನಮ್ಮ ತಲೆಯ ಮೇಲೆ ಅಥವಾ ನಮ್ಮ ಮೇಲೆ ಇರಿಸುವ ಮೂಲಕ ನಮ್ಮನ್ನು ಆಶೀರ್ವದಿಸುತ್ತಾರೆ.ನಿತ್ಯ ನಾವು ಹಿರಿಯರನ್ನು ಬೇಟಿಯಾಗುವದು ,ಹೊಸಕಾರ್ಯಗಳ ಆರಂಭ,ಜನ್ಮದಿನಗಳು,ಹಬ್ಬಗಳು ,ಪ್ರಮುಖ ಸಂದರ್ಭಗಳಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಲಾಗುತ್ತದೆ.ಈ ಗೌರವ ನಮ್ಮ ಆತ್ಮವನ್ನು ಪರಿಚಯಿಸಲು ಒಬ್ಬರ ಕುಟುಂಬ ಘೋಷಿಸಲು ಮತ್ತು ಸಾಮಾಜಿಕ ಸ್ಥಾನಮಾನಗಳ ಕುರುಹುಗಳಾಗಿವೆ.ನಾವು ಪಾದಸ್ಪರ್ಶಿಸಿ ನಮಸ್ಕರಿಸುವದು ಹಿರಿಯರು ನಿರೂಪಿಸುವ ವಯಸ್ಸು,ಪ್ರಬುದ್ಧತೆ,ಉದಾತ್ತತೆ ಮತ್ತು ದೈವತ್ವದ ,ಗೌರವದ ಸಂಕೇತವಾಗಿದೆ.ಇದು ನಮ್ಮ ಮೇಲಿನ ಹಿರಿಯರ ನಿಸ್ವಾರ್ಥ ಪ್ರೀತಿ, ನಮ್ಮ ಕಲ್ಯಾಣಕ್ಕಾಗಿ ಅವರು ಮಾಡಿದ ತ್ಯಾಗ ಗುರುತಿಸುವದನ್ನು ಸಂಕೇತಿಸುತ್ತದೆ.ಸಂಪ್ರದಾಯವು ಬಲವಾದ ಕುಟುಂಬ ಸಂಬಂಧವನ್ನು ನಿರಂತರ ಪ್ರತಿಬಿಂಬಿಸುತ್ತದೆ.ಕಾಶ್ಮಿಕ್ ಅನ್ನುವ ಶಕ್ತಿಯು ನಮ್ಮ ದೇಹದಲ್ಲಿ ಒಂದು ತುದಿಯಿಂದ ಇನ್ನೊಂದು ತುದಿಗೆ ಹರಿಯುತ್ತದೆ.ಇದು ಎರಡು ಮನಸ್ಸುಗಳ ತಮ್ಮ ಹೃದಯಗಳ ನಡುವೆ ಸಂಪರ್ಕ ಹೊಂದಿದೆ. ಈ ಶಕ್ತಿಯೇ ಕೈಕುಲುಕುವ ಮತ್ತು ಅಪ್ಪುಗೆಯ ಮೂಲಕ ವರ್ಗಾಯಿಸಲು ಅಲ್ಲದೇ ಕಾಶ್ಮಿಕ್ ಅನ್ನುವ ಶಕ್ತಿಯು ನಮ್ಮ ಬೆರಳಿನ ತುದಿಯಲ್ಲಿ ಸಂಗ್ರಹವಾಗುವದರಿಂದ ನಾವು ವಯಸ್ಸಾದವರ ಪಾದ ಮುಟ್ಟಿದಾಗ ಪಾದವನ್ನು ಮುಟ್ಟಿದವರಿಗೆ ವರ್ಗಾಯಿಸಲ್ಪಡುತ್ತದೆ.ಈ ರೀತಿಯಾಗಿಕೈಬೆರಳು,ಪಾದಗಳ ಬೆರಳುಗಳು,ಗ್ರಾಹಕ ಶಕ್ತಿ ನೀಡುತ್ತವೆ.ನಮ್ಮ ದೇಶದಲ್ಲಿ ಹಿರಿಯರ ಸಂಪಲ್ಪ,ಆಶೀರ್ವಾದ ಮೌಲ್ಯವಾದವುಗಳಾಗಿವೆ. ಪ್ರೀತಿ,ದೈವಿಕತೆ,ಉದಾತ್ತತೆಯಿಂದ ತುಂಬಿದ ಹೃದಯದಿಂದ ಹೊರಬರುವ ಶುಭಹಾರೈಕೆಗಳು ಅಗಾಧವಾದ ಶಕ್ತಿ ಹೊಂದಿವೆ.ನಮ್ರತೆ,ಗೌರವಗಳಿಂದ ನಮಸ್ಕರಿಸಿದಾಗ ಹಿರಿಯರು ಆಶೀರ್ವದಿಸಿ ಶುಭಕೋರುತ್ತಾರೆ.ಅದು ನಮ್ಮನ್ನು ಆವರಿಸಲು ಧನಾತ್ಮಕ ಶಕ್ತಿಯ ರೂಪದಲ್ಲಿ ಹರಿಯುತ್ತದೆ.



ಗಿರಿಜಾ.ಎಸ್. ದೇಶಪಾಂಡೆ.
ಬೆಂಗಳೂರು.

ಹಿರಿಯರ,ಗುರುಗಳ,ಮಹತ್ವ ಬೀರುವ ರಾಮಾಯಣ,ಮಹಾಭಾರತದಂತಹ ಮಹಾಕಾವ್ಯಗಳು ಈ ಅಂಶ ಎತ್ತಿ ತೋರಿಸುವ ಅನೇಕ ಕಥೆಗಳನ್ನು ಹೊಂದಿವೆ.ಮಕ್ಕಳಿಗೆ ತಂದೆತಾಯಿಯರು ಹಿರಿಯರ ಮಹತ್ವ,ಹಿರಿಯರಿಗೆ ಕೊಡುವ ಗೌರವ ,ಗುರುಗಳಿಗೆ,ಶಿಕ್ಷಕರಿಗೆ ನೀಡುವ ಮರ್ಯಾದೆ ,ಸ್ನೇಹಿತರ ಜೊತೆ ಒಳ್ಳೆಯ ಒಡನಾಟ ,ಓದಿನ ಮಹತ್ವ ತಿಳಿಸಿ ಕೊಟ್ಟಾಗಲೇ ಮಕ್ಕಳು ಮುಂದೆ ಅವರ ಜೀವನ ರೂಪಿಸಿಕೊಳ್ಳಲು ಸಾಧ್ಯವಾಗುವದು.



## ಹಾಸ್ಯ ಅಂದರೆ ಇದು ....??

ಒಂದು ಸಲ ಒಬ್ಬ ಹುಡುಗಿ ವಯಸ್ಸಾದ ತನ್ನ ಅವ್ವ ನ ಜೊತೆ ವೆರಾಂಡಾ ದಲ್ಲಿ ಕುಳಿತಿದ್ದಳು. ಆವಾಗ ಅಲ್ಲಿಯೇ ಅವಳ ಬಾಯ್ ಫ್ರೆಂಡ್ ಬಂದು ಬಿಟ್ಟ.
ಆ ಹುಡುಗಿ ತನ್ನ ಬಾಯ್ ಫ್ರೆಂಡ್ ಗೆ ಹೀಗೆ ಹೇಳಿದಳು . .
" ನೀವು ರಾಮ್ ಪಾಲ್ ಯಾದವ್ ಅವರ ಪುಸ್ತಕ, "Dad is at Home" ತಂದಿದ್ದೀರಾ ? "
**ಹುಡುಗ :** " ಇಲ್ಲ ನಾನು ಕೀಮತೀ ಆನಂದ್ ಅವರ, "Where should I wait for you" ? ಪುಸ್ತಕ ಒಯ್ಯಲು ಬಂದಿರುವೆ ".
**ಹುಡುಗಿ :** ಆ ಪುಸ್ತಕ ನನ್ನ ಬಳಿ ಇಲ್ಲ. ನನ್ನ ಬಳಿ ಪ್ರೇಮ್ ಬಾಜ್ಪೇಯಿ ಅವರ, "Under the Mango Tree " ಇದೆ.
**ಹುಡುಗ :** ಸರಿ. ನೀನು ಬರುವಾಗ ಆನಂದ್ ಬಕ್ಷಿ ಅವರ, "Call You In Five Minutes" ತೊಗೊಂಡು ಬಾ.
**ಹುಡುಗಿ :** Ok. ನಾನು ಜಾನ್ ಅಬ್ರಾಹಂ ಅವರ, "Won't Let You Down" ಪುಸ್ತಕ ತಪ್ಪದೇ ತೆಗೆದು ಕೊಂಡು ಬರ್ತೀನಿ.
ಹುಡುಗ ಅವ್ವನ ಚರಣ ಸ್ಪರ್ಶ ಮಾಡಿ ಹೋಗಿಬಿಡುತ್ತಾನೆ.
**ಅವ್ವ :** ಮಗಳೇ ಈ ಹುಡುಗ ಎಷ್ಟೊಂದು ಪುಸ್ತಕಗಳು ಅದು ಹೇಗೆ ಓದುತ್ತಾನೆ ?
**ಹುಡುಗಿ :** ಅವ್ವ ಹೌದು. ನಮ್ಮ ಕ್ಲಾಸ್ ನಲ್ಲಿ ಇವನು ತುಂಬಾ ವಿವೇಕಿ ಹಾಗೂ ಜಾಣ.
**ಅವ್ವ :** ಹೌದಾ ಬೇಟಿ ! ಹಾಗಾದರೆ ಅವನಿಗೆ ಮುನ್ಶಿ ಪ್ರೇಮಚಂದ್ ಅವರ, "Old people are not stupid "ಪುಸ್ತಕವನ್ನು ಒಮ್ಮೆ ಓದಲು ಹೇಳು...



ಜಯಂತಿ ರೈ
ಮಡಿಕೇರಿ

## ಅಲಂಕಾರಪ್ರಿಯೆ ಹೆಣ್ಣು

ಸ್ನೇಹ ಲೋಕ



ಹೆಣ್ಣು ಅಲಂಕಾರಪ್ರಿಯೆ ತುಂಬಾ ಖರ್ಚು ಮಾಡುತ್ತಾಳೆ ಅಂತ ಒಂದು ಮಾತಿದೆ! ಆದರೆ ಅದು ಇತ್ತೀಚೆಗೆ ಪ್ರಾರಂಭವಾಗಿದ್ದು!

ಇದರಲ್ಲಿ ಅರ್ಧ ಮಾತ್ರ ಸತ್ಯ, ಆಕೆ ಅಲಂಕಾರ ಪ್ರಿಯೆ ಖಂಡಿತಾ ನಿಜ! ಹಾಗಂತ ಹಿಂದಿನ ಕಾಲದಲ್ಲಿ ಎಷ್ಟೇ ಶ್ರೀಮಂತಿಕೆ ಇದ್ದರೂ ಅಲಂಕಾರಿಕ ಸಾಮಗ್ರಿಗಳಿಗೆ ಹೆಣ್ಣು ಜಾಸ್ತಿ ಹಣವನ್ನು ಖರ್ಚು ಮಾಡುತ್ತಿರಲಿಲ್ಲ! ಆಗೆಲ್ಲಾ ಹೆಣ್ಣುಮಕ್ಕಳು ತಮ್ಮಲ್ಲಿ ಇರುವ ಒಂದಿಷ್ಟು ಸೀರೆಗಳನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುತ್ತಿದ್ದರು, ತಿದ್ದಿ ತೀಡಿದ ಕುಂಕುಮವನ್ನು ಹಚ್ಚುತ್ತಿದ್ದರು, ಕಣ್ಣಿಗೆ ಕಾಡಿಗೆ, ಕೈ ತುಂಬಾ ಗಾಜಿನ ಬಳೆಗಳನ್ನು ,ಕಾಲಿಗೆ ಗೆಜ್ಜೆ! ಹೀಗೆ ಇತ್ತು ಅವಳ ದಿನನಿತ್ಯದ ಅಲಂಕಾರ!

ಅದರಲ್ಲೇ ಅವಳ ಅಂದ, ಚೆಂದ ದ್ವಿಗುಣಗೊಳ್ಳುತಿತ್ತು! ಇನ್ನು ಹೆಣ್ಣು ಹರೆಯಕ್ಕೆ ಬಂದಾಗ ಅಲಂಕಾರದ ಸಾಮಾಗ್ರಿಗಳು ಬೇಕೇ ಇಲ್ಲ, ಹಾಗೆಯೇ ಸುಂದರತೆ ಹೊರಹೊಮ್ಮುತ್ತದೆ!

ಮುಖದಲ್ಲಿಯ ಒಂದು ಮಿಂಚು, ಅವಳ ನೀಲಿ ಕಣ್ಣಲ್ಲಿರುವ ಒಂದಿಷ್ಟು ಕನಸು, ಇಷ್ಟೇ ಸಾಕು ಅವಳನ್ನು ಅಂದವಾಗಿಸಲು, ಅದು ದೇವರೇ ನೀಡಿದ ಸುಂದರತೆಯ ಉಡುಗೊರೆ!

ಆದರೆ ಈಗ ಆ ಸುಂದರತೆಯ ಮೇಲೆ ಒಂದು ತೇಪೆ ಬಣ್ಣ ಬಳಿದು ಹುಡುಗಿಯರು ತಮ್ಮ ನೈಜ ಸುಂದರತೆಯನ್ನು ಮುಚ್ಚುತ್ತಾರೆ!

ಅವರ ಮದುವೆಯ ದಿನ ಮದುಮಗಳ ಮುಖವೇ ಬದಲಾಗಿ ಹೋಗಿರುತ್ತದೆ, ಅವಳು,ಇವಳಾ ಎನ್ನುವ ಹಾಗೆ!

ಮದುವೆ ಮುಗಿದ ನಂತರ ಎಲ್ಲಾ ಮೇಕಪ್ ತೆಗೆದು ಸಿಂಪಲ್ ಸೀರೆ ಉಟ್ಟು ಹುಡುಗಿ ಹೊರಟಾಗ ಆಗ ಆಹಾ ಎಷ್ಟು ಚೆಂದದ ಹುಡುಗಿ ಇವಳು ಅನಿಸುತ್ತಾಳೆ! ಆ ಹಸಿರು ಬಳೆ, ಪುಟ್ಟ ಕುಂಕುಮ, ಕರಿಮಣಿಯ ಮಾಂಗಲ್ಯ ಹಾಕಿಕೊಂಡು ಹೊರಟರೆ ಲಕ್ಷ್ಮೀ ದೇವಿಯೇ ನಿಂತಂತೆ ಭಾಸವಾಗುತ್ತದೆ!

ಒಂದು ಹೆಣ್ಣು ಬುದ್ಧಿವಂತೆ, ಹೀಗಾಗಿ ತಾನು ಧರಿಸುವ ಬಟ್ಟೆ ಹೇಗಿರಬೇಕು ಎಂದು ಅವಳೇ ತಿಳಿದುಕೊಳ್ಳ ಬೇಕು !

ಹಿಂದಿನ ಕಾಲದಲ್ಲಿ ಶ್ರದ್ಧೆ, ಆಸಕ್ತಿಯಿಂದ ಹೆಣ್ಣು ಅಲಂಕಾರ ಮಾಡಿಕೊಳ್ಳುತ್ತಿದ್ದರೂ, ವರ್ಷದಲ್ಲಿ ಒಂದೆರಡು ಕುಂಕುಮ ಡಬ್ಬಿ, ಕಾಡಿಗೆ, ಪೌಡರ್, ತೆಂಗಿನ ಎಣ್ಣೆ ಬಾಚಣಿಗೆ ಜೊತೆಗೆ ಒಂದು ಪುಟ್ಟ ಕನ್ನಡಿ! ಇವು ಅವಳ ಮೇಕಪ್ ಸೆಟ್,ಇಷ್ಟಿದ್ದರೆ ಅವಳ ಅಲಂಕಾರ ಮುಗಿದೇ ಹೋಗುತ್ತಿತ್ತು!

ಇವೆಲ್ಲವೂ ಕೂಡ ಅತಿ ಸಣ್ಣ ಪುಟ್ಟ ಖರ್ಚುಗಳು ಹೀಗಾಗಿ ಅಲಂಕಾರಕ್ಕೆ ಅತಿ ದುಡ್ಡು ವ್ಯಯ ಮಾಡುತ್ತಿರಲಿಲ್ಲ! ನಿಜ ಹೇಳಬೇಕೆಂದರೆ ಮೊದಲೆಲ್ಲಾ ತುಂಬಾ ಸರಳ ಅಲಂಕಾರ ಅಷ್ಟೇ ಚೆಂದ ಇರುತ್ತಿದ್ದರು! ಹೀಗಾಗಿ ಹೆಣ್ಣಿನ ನಡೆ ನುಡಿಯಲ್ಲಿ ಸಾತ್ವಿಕತೆ ತುಂಬಿತ್ತು! ಈಗ ಹಾಗಲ್ಲ ಪಾರ್ಲರ್ ಬಳಕೆ ಜಾಸ್ತಿ ಆಗಿದೆ, ಅದಕ್ಕೆ ದುಡ್ಡು ವ್ಯಯ ಜಾಸ್ತಿ ಆಗಿದೆ!

ಒಂದು ಫಂಕ್ಷನ್ ಅಂದರೆ ಸಾವಿರಾರು ರೂಪಾಯಿ ಕೊಟ್ಟು ಮೇಕಪ್ ಮಾಡಿಸಿ ಕೊಂಡು ಅವರಿಂದಲೇ ಸೀರೆ ಉಡಿಸಿಕೊಂಡು ಬಂದರೆ ಮಾತ್ರ ಸಂತೃಪ್ತಿ ಜೊತೆಗೆ ಒಂದು ಸ್ಟೇಟಸ್ ಮೆಂಟೇನ್ ಮಾಡಿದ ಹಾಗೆ!

ಮೊದಲಿನ ಸ್ತ್ರೀ ಯರು ಅರಿಶಿಣ ಕುಂಕುಮ ಹಚ್ಚಿಕೊಂಡು ಲಕ್ಷ್ಮೀ ದೇವಿಯ ಹಾಗೆಯೇ ಕಾಣಿಸುತ್ತಿದ್ದರು, ಹೀಗಾಗಿ ಅನಾದಿ ಕಾಲದಿಂದಲೂ ಹೆಣ್ಣನ್ನು ಲಕ್ಷ್ಮೀ ರೂಪದಲ್ಲಿ ಕಂಡರು!

ಆದರೆ ಈಗ ಹಾಗಲ್ಲ ಕಾಳಿ,ದುರ್ಗೆ, ಚಂಡಿ ಚಾಮುಂಡಿಯ ಹಾಗೇ,ಯಾವಾಗಲೂ ಕೂದಲು ಬಿಟ್ಟುಕೊಂಡು, ರಾಶಿ ಮೇಕಪ್ ನೋಡಿದಾಗ ಹೆಣ್ಣು ಅಲಂಕಾರ ಪ್ರಿಯೆ ಅಲ್ಲ, ನಾಟಕದ ವೇಷಧಾರಿಣಿ ಅಂತ ಅನಿಸುತ್ತದೆ, ಜೊತೆಗೆ ದುಂದು ಖರ್ಚಿನವಳು ಅನಿಸುತ್ತದೆ!

ಮೊದಲೆಲ್ಲಾ ಮದುವೆಗೆ ಹೆಣ್ಣು ಮಕ್ಕಳು ತುಂಬಾ ಸರಳತೆಯಿಂದ ಸಿದ್ಧರಾಗುತಿದ್ದರು, ಅವರ ಮದುವೆಯು ಹೇಗಿರಬೇಕು ಎನ್ನುವ ನಿರ್ಧಾರ ಎರಡೂ ಕಡೆಯ ಹಿರಿಯರು ಮಾತ್ರ ಮಾಡುತಿದ್ದರು, ವಧು,ವರರು ಈಗಿನಂತೆ ಎಲ್ಲದರಲ್ಲೂ ತಲೆ ಹಾಕುತ್ತಿರಲಿಲ್ಲ!

ಆದರೆ ಈಗ ಮೇಕಪ್, ಸೀರೆ, ಅಲಂಕಾರಿಕ ಸಾಮಗ್ರಿಗಳಿಗೆ ಅತಿಯಾಗಿ ಖರ್ಚು ಜೊತೆಗೆ ಊಟದಲ್ಲಿ ವಿಧವಿಧವಾದ ಸ್ವೀಟ್ ನಾನಾ ರೀತಿಯ ಚಾಟ್ಸ್, ಕರಿದ ತಿಂಡಿಗಳು ಹೀಗೆ ಮಾಡಲೇ ಬೇಕು ಎನ್ನುವ ಅನಿವಾರ್ಯತೆ ಎದುರಾಗಿದೆ!

ಅದು ಎಷ್ಟು ಸರಿಯೋ ತಪ್ಪೋ ಗೊತ್ತಿಲ್ಲ!

ಒಟ್ಟಿನಲ್ಲಿ ಈಗಿನವರು ಅಷ್ಟು ಅದ್ದೂರಿ ಮದುವೆ ಮಾಡಿಕೊಂಡರೂ ಬೇರ್ಪಡುವುದು ಕೂಡ ಅಷ್ಟೇ ಸುಲಭವಾಗಿ ಹೋಗಿದೆ!

ಮೊದಲೆಲ್ಲಾ ಮದುವೆಯನ್ನು ಬ್ರಹ್ಮ ಹಾಕಿದ ಗಂಟು ಎಂದು ಹೇಳುತ್ತಿದ್ದರು, ಹೀಗಾಗಿ ಕಷ್ಟವೋ, ಸುಖವೋ ಒಂದು ಸಲ ಮದುವೆಯಾದರೆ ಬೇರ್ಪಡುವ ಮಾತೇ ಇರಲಿಲ್ಲ! ಈಗ ಆಧುನಿಕ ಜಗತ್ತು ಹಾಗು ಮುಂದುವರೆದ ದೇಶಗಳ ಪ್ರಭಾವದಿಂದ ನಮ್ಮ ಭಾರತೀಯರೂ ಎಷ್ಟೋ ಸುಸಂಸ್ಕೃತ ವಿಷಯವನ್ನು ಮರೆತಿದ್ದಾರೆ!

ಈ ಮಧ್ಯೆ ಮತ್ತೆ ಹಳೆಯ ಕಾಲದ ತಾಮ್ರ , ಹಿತ್ತಾಳೆ ಸಾಮಗ್ರಿಗಳನ್ನು ಬಳಸುವಂತೆ, ಅಲಂಕಾರಿಕ ಸಾಮಗ್ರಿಗಳು ಮುಖಕ್ಕೆ ಹಚ್ಚುವ ಬಣ್ಣವೆಲ್ಲಾ ಮಾಯವಾದರೆ ಹೇಗಿರಬಹುದು ಜೀವನ ಅನ್ನಿಸುತ್ತದೆ !



ಸ್ನೇಹಾ ಆನಂದ್

ಹೆಣ್ಣು ತಿಳಿಯಾಗಿ, ತೆಳುವಾಗಿ ಅಲಂಕಾರ ಮಾಡಿಕೊಳ್ಳುವುದು ತಮ್ಮ ಸುಂದರತೆ ಹೆಚ್ಚಿಸಿಕೊಳ್ಳಲು ಹೊರತು ಮುಚ್ಚಿಕೊಳ್ಳಲು ಅಲ್ಲ ಎಂದೆನಿಸಿದಾಗ ಮಾತ್ರ ಪಾರ್ಲರ್ ಬಳಕೆ ಕಡಿಮೆಯಾಗಬಹುದು, ದುಂದುವೆಚ್ಚಕ್ಕೆ ತೆರೆ ಬೀಳಬಹುದು!

ಈ ನಡುವೆ ಹೆಣ್ಣಿಗಾಗಿ ಇರುವ ಒಂದು ಸುಂದರ ಪದ "ನಾಚಿಕೆ" ಎನ್ನುವ ಪದದ ಅರ್ಥವೇ ಕಳೆದು ಹೋಗಿದೆ ಅಂತ ಅನಿಸುತ್ತದೆ!

ಅಲಂಕಾರ ಎಂದಾಗ ಮೈತುಂಬುವ ಬಟ್ಟೆಗೆ ಮಹತ್ವ ಕೊಟ್ಟರೆ ಹೆಣ್ಣಿನ ಸೌಂದರ್ಯ ಇನ್ನೂ ಹೆಚ್ಚುತ್ತದೆ! ಆಗ ಒಬ್ಬ ಹೆಣ್ಣುಮಗಳು ಮಹಾಲಕ್ಷ್ಮೀಯ ರೂಪದಲ್ಲಿ ಮತ್ತೇ ಕಾಣಸಿಗುತ್ತಾಳೆ!

ಸಿಂಗಾರದಲ್ಲಿ ಬಂಗಾರವಿರಬೇಕೇ ಹೊರತು, ಬಂಗಾರವೇ ಸಿಂಗಾರವಾಗಬಾರದು!

ಅದೇ ರೀತಿ ಮುಖದ ಅಲಂಕಾರಕ್ಕೆ ಸಿಂಪಲ್ ಮೇಕಪ್ ಬೇಕೇ ಹೊರತು........ !!!!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,